
ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 13 | ಸಂಚಿಕೆ 42 | ಅಕ್ಟೋಬರ್ 14-20, 2019 | ಪುಟ 16 | ರೂ. 10/-



ಲಾಲ್ ಸಲಾಂ ಕಾಮ್ರೇಡ್ ಆರ್.ಶ್ರೀನಿವಾಸ್





ಭವ್ಯ ಹೋರಾಟಗಳ ಕೊಡುಗೆಗಳ ನೂರು ವರ್ಷಗಳು

ತಾಷ್ಕೆಂಟ್‌ನಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ ಸ್ಥಾಪನೆ



ಇದೀಗ 'ಸಂಪೂರ್ಣ ಖಾಸಗೀಕರಣದ' ಪರ್ವ



ಆರ್‌ಎಸ್‌ಎಸ್ ಮುಖ್ಯಸ್ಥರ ಹಿಟ್ಲರ್ ಶಾಹಿ ಪ್ರವಚನ

ರಾಜದ್ರೋಹದ ಕೇಸನ್ನು ರದ್ದು ಮಾಡಬೇಕು-ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹ

"ರಾಜದ್ರೋಹದ ಅಂಶವನ್ನು ಕಾನೂನಿನ ಕಡತಗಳಿಂದ ತೆಗೆಯಲು ಗಾಂಧೀಜಿ-150 ಆಚರಣೆ ಅತ್ಯಂತ ಸೂಕ್ತ ಸಂದರ್ಭ"

ನಲ್ವತ್ತೊಂಬತ್ತು ಪ್ರತಿಷ್ಠಿತ ಭಾರತೀಯರು, ತಂತಮ್ಮ ಕ್ಷೇತ್ರಗಳಲ್ಲಿ ಮಹಾಸಾದನೆಗಳನ್ನು ಮಾಡಿದವರು-ಹೆಚ್ಚುತ್ತಿರುವ ದ್ವೇಷ ಪ್ರಚಾರ ಮತ್ತು ಹಿಂಸಾಚಾರಗಳು ಸಾಮೂಹಿಕವಾಗಿ ಬಡಿದು ಸಾಯಿಸುವ ವರೆಗೂ ಹೋಗುತ್ತಿರುವುದನ್ನು ವಿರೋಧಿಸಿ ಪ್ರಧಾನ ಮಂತ್ರಿಗಳಿಗೆ ಒಂದು ಪತ್ರ ಬರೆದುದಕ್ಕೆ ಅವರ ಮೇಲೆ ರಾಜದ್ರೋಹದ ಕೇಸುಗಳನ್ನು ಜಡಿದಿರುವುದನ್ನು ಸಿಪಿಐ(ಎಂ) ಪೊಲಿಟ್ ಬ್ಯುರೊ ಬಲವಾಗಿ ಖಂಡಿಸಿದೆ. ಈ ರಾಜದ್ರೋಹದ ಅಂಶವನ್ನು ಕಾನೂನಿನಲ್ಲಿ ಸ್ವಾತಂತ್ರ್ಯದ ನಂತರವೂ ಮುಂದುವರೆಸಿರುವುದನ್ನು ಸಿಪಿಐ(ಎಂ) ಸದಾ ವಿರೋಧಿಸುತ್ತ ಬಂದಿದೆ. ಈ ಅಂಶವನ್ನು ತಂದದ್ದೇ ಭಾರತದಲ್ಲಿ ಬ್ರಿಟಿಶ್ ರಾಜವಂಶವನ್ನು ಮತ್ತು ಅವರು ಸಾರ್ವಭೌಮರೆಂದು ರಕ್ಷಿಸಲಿಕ್ಕಾಗಿಯೇ. ಅದನ್ನು ಗಾಂಧೀಜಿ ಸೇರಿದಂತೆ ಪ್ರಮುಖ ಭಾರತೀಯ ಸ್ವಾತಂತ್ರ್ಯ ಹೋರಾಟಗಾರರನ್ನು ಬಂಧಿಸಿಡಲು ಮತ್ತು ಬಾಯಿಮುಚ್ಚಿಸಲು ವ್ಯಾಪಕವಾಗಿ ಬಳಸಲಾಗಿದೆ. ದೇಶವು ಗಾಂಧೀಜಿಯ 150ನೇ ಜನ್ಮ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವಾಗ ಈ ರಾಜದ್ರೋಹ ಎಂಬುದನ್ನು ಕಾನೂನು ಕಡತಗಳಿಂದ ತೆಗೆಯುವುದು ಅತ್ಯಂತ ಸೂಕ್ತವಾಗಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಪ್ರಧಾನ ಮಂತ್ರಿಗಳಿಗೆ ಮಹತ್ವದ ವಿಷಯಗಳ ಮೇಲೆ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತ ಪತ್ರ ಬರೆಯುವುದು ಒಂದು ಅಪರಾಧವಾಗಲು ಸಾಧ್ಯವಿಲ್ಲ, ಅದನ್ನು ರಾಷ್ಟ್ರ-ವಿರೋಧಿ ಎನ್ನಲು ಸಾಧ್ಯವಿಲ್ಲ. ಇದು ಪ್ರಸಕ್ತ ಸರಕಾರದ ಧೋರಣೆಗಳ ಬಗ್ಗೆ ಭಿನ್ನ ಅಭಿಪ್ರಾಯ ಹೊಂದಿರುವವರನ್ನೆಲ್ಲ ಶಿಕ್ಷಿಸಬೇಕು ಎಂದಂತಾಗುತ್ತದೆ. ಹೀಗೆ ಮಾಡುವುದು ಪ್ರಜಾಪ್ರಭುತ್ವ ಹಕ್ಕುಗಳ ಸಂಪೂರ್ಣ ನಿರಾಕರಣೆಯಾಗುತ್ತದೆ, ಇದು ದೇಶದಲ್ಲಿ ಹೆಚ್ಚುತ್ತಿರುವ ಸರ್ವಾಧಿಕಾರಶಾಹಿಯನ್ನು ಬಿಂಬಿಸುತ್ತದೆ. 1962 ರಷ್ಟು ಹಿಂದೆಯೇ ಸುಪ್ರಿಂ ಕೋರ್ಟ್ ರಾಜದ್ರೋಹದ ಕಾನೂನಿನ ಅಂಶವನ್ನು ಪ್ರಭುತ್ವದ ವಿರುದ್ಧ ಒಂದು ನೇರ ಕರೆ ಅಥವ ಹಿಂಸಾಚಾರದ ಕುಮ್ಮಕ್ಕು ಇಲ್ಲದಿದ್ದರೆ, ಬಳಸಲು ಸಾಧ್ಯವಿಲ್ಲ ಎಂದು ತೀರ್ಪಿತ್ತಿದ್ದರೂ, ಮುಝಫ್ಫರ್ ಪುರದ ಒಂದು ನ್ಯಾಯಾಲಯ ಕೇಸನ್ನು ದಾಖಲಿಸಲು ಆದೇಶ ನೀಡಿದೆ ಎಂಬುದು ಆಶ್ಚರ್ಯದ ಸಂಗತಿ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಪ್ರತಿಷ್ಠಿತ ಬುದ್ಧಿಜೀವಿಗಳು /ಕಲಾವಿದರ ಮೇಲೆ ಹಾಕಿರುವ ಆಪಾದನೆಗಳನ್ನು ತಕ್ಷಣವೇ ರದ್ದುಗೊಳಿಸಬೇಕು ಎಂದು ಆಗ್ರಹಿಸಿದೆ.

ಜಮ್ಮು ಮತ್ತು ಕಾಶ್ಮೀರದ ಪರಿಸ್ಥಿತಿ ಖಂಡಿತವಾಗಿಯೂ "ಸಾಮಾನ್ಯ"ವಾಗಿಲ್ಲ -ಸಿಪಿಐ(ಎಂ) ಕೇಂದ್ರ ಸಮಿತಿ

ಕೇಂದ್ರ ಸರಕಾರ ಮತ್ತು ಬಿಜೆಪಿ ಜಮ್ಮು ಮತ್ತು ಕಾಶ್ಮೀರದಲ್ಲಿ ಪರಿಸ್ಥಿತಿ "ಸಾಮಾನ್ಯ"ವಾಗಿದೆ ಎಂದು ಗಂಟಲು ಹರಿಯುವಂತೆ ಸಾರುತ್ತಿದ್ದರೂ, ನಿಜಸಂಗತಿ ತದ್ವಿರುದ್ಧವೇ ಆಗಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ. ಇಂತಹ ಸನ್ನಿವೇಶದಲ್ಲಿ. ಪರಿಸ್ಥಿತಿ 'ಸಾಮಾನ್ಯ"ವಾಗಿದೆ ಎಂದು ಜಗತ್ತಿನ ಮುಂದೆ ಚಿತ್ರಿಸುವುದಕ್ಕಾಗಿಯಷ್ಟೇ ಅಲ್ಲಿ ಬ್ಲಾಕ್ ಅಭಿವೃದ್ಧಿ ಮಂಡಳಿಗಳಿಗೆ ಚುನಾವಣೆಗಳನ್ನು ಪ್ರಕಟಿಸಲಾಗಿದೆ. ಇದು ಪ್ರಜಾಪ್ರಭುತ್ವವನ್ನು ನಗೆಪಾಟಲು ಮಾಡುವ ಸಂಗತಿ ಎಂದು ಸಿಪಿಐ(ಎಂ) ಹೇಳಿದೆ.

ಅಕ್ಟೋಬರ್ 2ರಿಂದ 4 ರ ವರೆಗೆ ನವದೆಹಲಿಯಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿಯ ಸಭೆ ನಡೆಯಿತು. ಆನಂತರ ನೀಡಿರುವ ಪತ್ರಿಕಾ ಹೇಳಿಕೆಯ ಹೇಳಿಕೆಯ ಅಂಶಗಳು ಹೀಗಿವೆ:

ಕೇರಳದಲ್ಲಿ ಎಲ್.ಡಿ.ಎಫ್. ವಿಜಯಕ್ಕೆ ಅಭಿನಂದನೆ:

ಎಡ ಪ್ರಜಾಪ್ರಭುತ್ವ ರಂಗ(ಎಲ್‌ಡಿ.ಎಫ್.) ದ ಅಭ್ಯರ್ಥಿಯನ್ನು ಚುನಾಯಿಸಿದ್ದಕ್ಕೆ ಸಿಪಿಐ(ಎಂ) ಕೇಂದ್ರಸಮಿತಿ ಕೇರಳದ ಪಾಲ ವಿಧಾನಸಭಾ ಕ್ಷೇತ್ರದ ಜನರನ್ನು ಅಭಿನಂದಿಸಿದೆ. ಇದೊಂದು ಅಭೂತಪೂರ್ವ ವಿಜಯ. ಯುಡಿಎಫ್‌ನ ಬಲಿಷ್ಠ ನೆಲೆಯೆಂದು ಹೇಳಲಾಗುತ್ತಿದ್ದ, ಅದು ಕಳೆದ ಬಾರಿಯೂ ಗೆದ್ದಿದ್ದ ಈ ಸ್ಥಾನವನ್ನು ಎಲ್.ಡಿ.ಎಫ್. ಮತ್ತು ಅದರ ಸರಕಾರದ ವಿರುದ್ಧ ನಡೆಸಿದ ಒಂದು ದೊಡ್ಡ ಪ್ರಚಾರವನ್ನು ಎದುರಿಸಿಯೂ ಎಲ್.ಡಿ.ಎಫ್. ಕಸಿದುಕೊಂಡಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿನ ಪರಿಸ್ಥಿತಿ:

ಕೇಂದ್ರ ಸರಕಾರ ಮತ್ತು ಬಿಜೆಪಿ ಜಮ್ಮು ಮತ್ತು ಕಾಶ್ಮೀರದಲ್ಲಿ ಪರಿಸ್ಥಿತಿ "ಸಾಮಾನ್ಯ"ವಾಗಿದೆ ಎಂದು ಗಂಟಲು ಹರಿಯುವಂತೆ ಸಾರುತ್ತಿದ್ದರೂ, ನಿಜಸಂಗತಿ ತದ್ವಿರುದ್ಧವೇ ಆಗಿದೆ. ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಮಹಮ್ಮದ್ ಯುಸುಫ್ ತಾರಿಗಾಮಿಯವರಿಗೆ ಕೇಂದ್ರಸಮಿತಿಯ ಸಭೆಯಲ್ಲಿ ಭಾಗವಹಿಸಲು ಕೂಡ, ಅವರನ್ನು ಬಂಧನದಲ್ಲಿ ಇಟ್ಟಿಲ್ಲ ಎಂದು ಸುಪ್ರಿಂ ಕೋರ್ಟಿಗೆ ತಾನೇ ಹೇಳಿದ್ದ ಈ ಸರಕಾರ ಅನುಮತಿ ನೀಡಿಲ್ಲ. ಇದು, ಕಣಿವೆಯಲ್ಲಿ ಸಾಮಾನ್ಯ ಪರಿಸ್ಥಿತಿ ಇದೆ ಎಂಬ ಸರಕಾರದ ದಾವೆಗಳೆಲ್ಲವೂ ನೆಲಮಟ್ಟದ ವಾಸ್ತವತೆಗಳಿಂದ ಸಂಪೂರ್ಣವಾಗಿ ಭಿನ್ನವಾಗಿದೆ ಎಂಬುದನ್ನು ತೋರಿಸುತ್ತದೆ.

ಸಂಪರ್ಕಗಳ ಮೇಲಿನ ಕಟು ನಿರ್ಬಂಧ ಮುಂದುವರೆಯುತ್ತಿದೆ, ಸಾರ್ವಜನಿಕ ಸಾರಿಗೆ ಸಂಚಾರ ಸ್ಥಬ್ಧಗೊಂಡಿದೆ, ಶಾಲೆಗಳು ಮತ್ತು ಇತರ ಶೈಕ್ಷಣಿಕ ಸಂಸ್ಥೆಗಳು ಮುಚ್ಚಿಯೇ ಇವೆ, ಅಂಗಡಿಗಳು ಮತ್ತು ಇತರ ವ್ಯಾಪಾರ-ವಹಿವಾಟುಗಳ ಸಂಸ್ಥೆಗಳೂ ಬಾಗಿಲು ಹಾಕಿವೆ. ಈಗ ಎರಡು ತಿಂಗಳುಗಳಿಗೂ ಹೆಚ್ಚು ಕಾಲ ಮುಂದುವರೆದಿರುವ ಸನ್ನಿವೇಶ ಜನಗಳನ್ನು ಅಭೂತಪೂರ್ವ ಸಂಕಟಗಳಿಗಳಿಗೆ ಈಡು ಮಾಡಿವೆ.

ಇಂತಹ ಸನ್ನಿವೇಶದಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಬ್ಲಾಕ್ ಅಭಿವೃದ್ಧಿ ಮಂಡಳಿಗಳಿಗೆ ಚುನಾವಣೆಗಳನ್ನು ಪ್ರಕಟಿಸಲಾಗಿದೆ. ಇದು ಪ್ರಜಾಪ್ರಭುತ್ವವನ್ನು ನಗೆಪಾಟಲು ಮಾಡುವ ಸಂಗತಿ. ಪರಿಸ್ಥಿತಿ 'ಸಾಮಾನ್ಯ'ವಾಗಿದೆ ಎಂದು ಜಗತ್ತಿನ ಮುಂದೆ ಚಿತ್ರಿಸುವುದಷ್ಟೇ ಇದರ ಆಶಯ. ಅಲ್ಲದೆ, ಈ ಬಿಡಿಸಿ ಚುನಾವಣೆಗಳಲ್ಲಿ ಮತದಾನ ಮಾಡಬೇಕಾದವರು ಗ್ರಾಮ ಪಂಚಾಯತುಗಳ ಪಂಚರು ಮತ್ತು ಸರಪಂಚರು. ಆದರೆ ಈ ಸ್ಥಾನಗಳಲ್ಲಿ 61ಶೇ.ದಷ್ಟು ಖಾಲಿಯಾಗಿಯೇ ಇವೆ.

ಸಂಪರ್ಕಗಳು, ಓಡಾಟ, ನಾಗರಿಕ ಸ್ವಾತಂತ್ರ್ಯಗಳನ್ನು ಮತ್ತೆ ನೆಲೆಗೊಳಿಸಬೇಕು ಮತ್ತು ಎಲ್ಲ ರಾಜಕೀಯ ಮುಖಂಡರು ಮತ್ತು ಕಾರ್ಯಕರ್ತರನ್ನು ಬಿಡುಗಡೆ ಮಾಡಬೇಕು ಎಂದು ಸಿಪಿಐ(ಎಂ) ಕೇಂದ್ರಸಮಿತಿ ಮತ್ತೊಮ್ಮೆ ಆಗ್ರಹಿಸುತ್ತ, ರಾಜಕೀಯ ಚಟುವಟಿಕೆಗಳ ಹಕ್ಕನ್ನು ಮತ್ತೆ ನೆಲೆಗೊಳಿಸಿದ ನಂತರವೇ ಚುನಾವಣೆಗಳನ್ನು ನಡೆಸಬೇಕು ಎಂದಿದೆ.

ಎನ್. ಆರ್.ಸಿ. ಪ್ರಕ್ರಿಯೆ ಮತ್ತು ಸಂಬಂಧಪಟ್ಟ ಪ್ರಶ್ನೆಗಳು

ವಿವಿಧ' ಬಿಜೆಪಿ ಆಳ್ವಿಕೆಯ ರಾಜ್ಯಗಳ ಮುಖ್ಯಮಂತ್ರಿಗಳು ತಂತಮ್ಮ ರಾಜ್ಯಗಳಲ್ಲಿ ರಾಷ್ಟ್ರೀಯ ಪೌರತ್ವ ದಾಖಲೆ (ಎನ್. ಆರ್.ಸಿ.) ಬೇಕು ಎಂದು ಆಗ್ರಹಿಸಿದ್ದಾರೆ. ಎನ್. ಆರ್.ಸಿ. ಎಂಬುದು ಅಸ್ಸಾಂ ಒಪ್ಪಂದದ ಭಾಗವಾಗಿದ್ದು, ಆ ರಾಜ್ಯಕ್ಕೇ ನಿರ್ದಿಷ್ಟವಾಗಿರುವಂತದ್ದು. ಸುಪ್ರಿಂ ಕೋರ್ಟಿನ ನಿರ್ದೇಶನದ ಅಡಿಯಲ್ಲಿ ಈ ಪ್ರಕ್ರಿಯೆಯನ್ನು ನಡೆಸಲಾಗಿದೆ. ಅಲ್ಲೀಗ ಸುಮಾರು 20 ಲಕ್ಷ ಮಂದಿಯನ್ನು ಎನ್. ಆರ್.ಸಿ. ಯಲ್ಲಿ ಕೈಬಿಡಲಾಗಿದೆ. ಯಾವ ನೈಜ ಭಾರತೀಯ ಪೌರರನ್ನೂ ಈ ದಾಖಲೆಯಿಂದ ಹೊರಗಿಡಬಾರದು ಎಂದು ಹೇಳಿರುವ ಸಿಪಿಐ(ಎಂ) ಕೇಂದ್ರಸಮಿತಿ , ಹೀಗೆ ಕೈಬಿಡಲಾಗಿರುವ ಎಲ್ಲರ ಮನವಿಗಳನ್ನು ಪರಿಶೀಲಿಸಬೇಕು ಮತ್ತು ಒಂದು ನ್ಯಾಯಾಂಗ ಪ್ರಾಧಿಕಾರ ಯಾವುದೇ ತಾರತಮ್ಯವಿಲ್ಲದೆ ಈ ಬಗ್ಗೆ ನ್ಯಾಯನಿರ್ಣಯ ಮಾಡಬೇಕು ಎಂದು ಆಗ್ರಹಿಸಿದೆ. ವಿದೇಶೀಯರ ನ್ಯಾಯಮಂಡಳಿಗಳು ವಿದೇಶೀಯರೆಂದು ಸಾರಿರುವವರನ್ನು ಇಟ್ಟಿರುವ ಸ್ಥಾನಬದ್ಧತೆಯ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳೇ ಇಲ್ಲ, ಅಲ್ಲಿನ ಪರಿಸ್ಥಿತಿ ತೀರಾ ನಿಕೃಷ್ಟವಾಗಿದೆ, ಇದು ಕನಿಷ್ಟ ಮಾನವ ಹಕ್ಕುಗಳನ್ನೂ ಉಲ್ಲಂಘಿಸುವಂತದ್ದು. ಈ ಕೇಂದ್ರಗಳನ್ನು ಮುಚ್ಚಿ ಬಿಡಬೇಕು, ಮತ್ತು ಈ ಜನಗಳ ಮನವಿಗಳ ನ್ಯಾಯನಿರ್ಣಯ ಆಗುವ ವರೆಗೆ ಅವರು ಮೊದಲಿನಂತೆಯೇ ಇರಲು ಬಿಡಬೇಕು.

ಈ ಎನ್. ಆರ್.ಸಿ. ಯನ್ನು ಅಸ್ಸಾಂನ ಹೊರಗೆ ವಿಸ್ತರಿಸುವುದನ್ನು ಸಿಪಿಐ(ಎಂ) ಕೇಂದ್ರ ಸಮಿತಿ ವಿರೋಧಿಸಿದೆ. ಈ ಸರಕಾರ 'ರಾಷ್ಟ್ರೀಯ ಜನಸಂಖ್ಯಾ ದಾಖಲೆ' (ಎನ್. ಪಿ.ಆರ್.)ಯನ್ನು ತಯಾರಿಸುವ ಕೆಲಸವನ್ನು ಮತ್ತೆ ಆರಂಭಿಸಿದೆ. ಇದನ್ನು ಈ ಎನ್.ಪಿ.ಆರ್. ಆಧಾರದಲ್ಲಿ ಅಖಿಲ ಭಾರತ ಎನ್. ಆರ್.ಸಿ. ಗೆ ಸಿದ್ಧತೆಯಾಗಿ ಮಾಡಲಾಗಿದೆ. ಬಿಜೆಪಿ ಕೇಂದ್ರ ಸರಕಾರ ಸ್ಥಾನಬದ್ಧತಾ ಕೇಂದ್ರಗಳಾಗಿ ಬಳಸಲು ಕಟ್ಟಡಗಳ ನಿರ್ಮಾಣವನ್ನು ಆರಂಭಿಸಬೇಕು ಎಂದು ಕೆಲವು ರಾಜ್ಯಗಳಿಗೆ ಹೇಳಿದೆ.

ಈ ಎಲ್ಲ ಕಸರತ್ತುಗಳು ಅನಗತ್ಯವಾಗಿವೆ. ಏಕೆಂದರೆ ದೇಶದಲ್ಲಿ ಆಧಾರ್ ಕಾರ್ಡ್‌ಗಳನ್ನು ಸಾರ್ವತ್ರಿಕಗೊಳಿಸಲಾಗಿದೆ. ಇಡೀ ದೇಶದಲ್ಲಿ ಚುನಾವಣಾ ಫೋಟೋ ಗುರುತು ಕಾರ್ಡ್(ಇ.ಪಿ.ಐ.ಸಿ.), ಜತೆಗೆ ಫೋಟೋ ಗುರುತುಗಳಿರುವ ಮತದಾರರ ಪಟ್ಟಿಗಳಿದ್ದು ಅವನ್ನು ಪ್ರತಿವರ್ಷ ಪರಿಷ್ಕರಿಸಲಾಗುತ್ತಿದೆ. ಇವೆಲ್ಲವೂ ಈಗಾಗಲೇ ಇರುವಾಗ, ಎನ್. ಆರ್.ಸಿ. ಯನ್ನು ಅಸ್ಸಾಂನ ಆಚೆಗೂ ವಿಸ್ತರಿಸುವ, ಎನ್.ಪಿ.ಆರ್. ಗಣತಿಯ, ಮತದಾರ ಪಟ್ಟಿಯೊಂದಿಗೆ ಚುನಾವಣಾ ದೃಢೀಕರಣ ಪ್ರಕ್ರಿಯೆ(ಇ.ವಿ.ಪಿ.) ಯ ಮಾತುಗಳು ಹಾಗೂ ಪೌರತ್ವ ತಿದ್ದುಪಡಿ ಮಸೂದೆಯನ್ನು ಪಾಸು ಮಾಡುವ ಭರವಸೆ-ಇವೆಲ್ಲವೂ ಆರೆಸ್ಸೆಸ್/ಬಿಜೆಪಿ ಕೋಮುವಾದಿ ವೋಟ್ ಬ್ಯಾಂಕನ್ನು ಕ್ರೋಢೀಕರಿಸಲು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಪ್ರಯತ್ನಗಳನ್ನು ಸೂಚಿಸುತ್ತವೆ ಎಂದು ಕೇಂದ್ರ ಸಮಿತಿ ಅಭಿಪ್ರಾಯ ಪಟ್ಟಿದೆ.

ಆರ್ಥಿಕ ಬಿಕ್ಕಟ್ಟು

ಭಾರತದಲ್ಲಿ ಈಗ ಆರ್ಥಿಕ ಹಿಂಜರಿತದ ಅಂಚಿಗೆ ಬಂದಿರುವ ಆರ್ಥಿಕ ಮಂದಗತಿ, ಅದರಿಂದಾಗಿ ವ್ಯಾಪಕ ಪ್ರಮಾಣದ ನಿರುದ್ಯೋಗ, ಲಕ್ಷಾಂತರ ಕಾರ್ಮಿಕರ ರಿಟ್ರೆಂಚ್ ಮೆಂಟ್, ಮುಂದುವರೆಯುತ್ತಿರುವ ಕೃಷಿಕ ಸಂಕಟ ಇವೆಲ್ಲವೂ ಜನಗಳ ಮೇಲೆ ಹೆಚ್ಚೆಚ್ಚು ದುಸ್ಥಿತಿಗಳನ್ನು ಹೇರುತ್ತಿವೆ. 2011-12ರ ವಿವಾದಾತ್ಮಕ ಮೂಲವರ್ಷ ಸರಣಿಯನ್ನು ಆಧರಿಸಿದ ಜಿಡಿಪಿ ಮಾಹಿತಿಯ ಪ್ರಕಾರವೂ, ಜಿಡಿಪಿ ಬೆಳವಣಿಗೆ ದರ ಕಳೆದ ಐದು ತ್ರೈಮಾಸಿಕಗಳಲ್ಲಿ ಸತತವಾಗಿ ಇಳಿಯುತ್ತ ಬಂದಿದೆ. 2017-18ರ ಕೊನೆಯ ತ್ರೈಮಾಸಿಕದಲ್ಲಿ 8.1 ಶೇ.. ಇದ್ದದ್ದು, 2019-20ರ ಮೊದಲ ತ್ರೈಮಾಸಿಕದ ವೇಳೆಗೆ 5ಶೇ.ಕ್ಕೆ ಇಳಿದಿದೆ. ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ(ಐಐಪಿ)ವೂ ಆರ್ಥಿಕ ಮಂದಗತಿಯನ್ನು ದೃಢಪಡಿಸಿದೆ. ಕೈಗಾರಿಕಾ ಉತ್ಪಾದನೆಯ ತಯಾರಿಕಾ ಸೂಚ್ಯಂಕದಲ್ಲಿ ಬೆಳವಣಿಗೆ 2019-20ರ ಎಪ್ರಿಲ್-ಜುಲೈ ಅವಧಿಯಲ್ಲಿ ಕೇವಲ 2.8ಶೇ. ಕಳೆದ ವರ್ಷ ಇದೇ ಅವಧಿಯಲ್ಲಿ ಅದು 5.6ಶೇ.ವಿತ್ತು. ಇದೇ ರೀತಿ ಒಟ್ಟು ಐ.ಐ.ಪಿ. ಬೆಳವಣಿಗೆ ಕಳೆದ ವರ್ಷದ ಎಪ್ರಿಲ್-ಜೂನ್ ಅವಧಿಯಲ್ಲಿ 5.4ಶೇ. ಇದ್ದದ್ದು, ಈ ವರ್ಷ ಅದೇ ಅವಧಿಯಲ್ಲಿ 3.3ಶೇ.ಕ್ಕೆ ಇಳಿದಿದೆ. ನಿಜಸಂಗತಿಯೆಂದರೆ ಬಂಡವಾಳ ಸರಕುಗಳ ಉತ್ಪಾದನೆ ಹೆಚ್ಚುವ ಬದಲು 4.3ಶೇ.ದಷ್ಟು ಇಳಿದಿದೆ. ಕಳೆದ ವರ್ಷ ಈ ಅವಧಿಯಲ್ಲಿ ಅದು 7.1ಶೇ. ಬೆಳವಣಿಗೆ ತೋರಿಸಿತ್ತು. ಬಾಳಿಕೆಯ ಬಳಕೆ ವಸ್ತುಗಳ ಉತ್ಪಾದನೆಯೂ 2.7ಶೇ.ದಷ್ಟು ಕುಂಠಿತಗೊಂಡಿದೆ.

ಈ ಆರ್ಥಿಕ ಹಿಂಜರಿತದ ಪರಿಣಾಮವಾಗಿ ನಿರುದ್ಯೋಗ ಹಿಂದೆಂದೂ ಕಾಣದ ಮಟ್ಟಕ್ಕೆ ಏರಿದೆ. ಅಧಿಕೃತ ಅಂಕೆ-ಸಂಖ್ಯೆಗಳು ಸಾಮಾನ್ಯವಾಗಿ ಕೀಳಂದಾಜನ್ನೇ ಮಾಡುತ್ತವೆ. ಆದರೆ ಈ ಅಂಕೆ-ಸಂಖ್ಯೆಗಳ ಆಧಾರದಲ್ಲಿ ಸಿ.ಎಂ.ಐ.ಇ. ಮಾಡಿರುವ ಅಂದಾಜಿನ ಪ್ರಕಾರವೂ ಸಪ್ಟಂಬರ್ 27, 2019ರ ವೇಳೆಗೆ ನಿರುದ್ಯೋಗ 9.94ಶೇ.ವನ್ನು ತಲುಪಿದೆ. ಇದು ಕಳೆದ ಅರ್ಧ ಶತಮಾನದಲ್ಲೇ ಅತೀ ಹೆಚ್ಚು. ಆಗಸ್ಟ್ ಅಂತ್ಯದ ವೇಳೆಗೆ ಅಧಿಕೃತವಾಗಿ 4.5 ಕೋಟಿ ಜನಗಳು ನಿರುದ್ಯೋಗಿಗಳಾಗಿದ್ದರು. ಕಳೆದ ವರ್ಷಕ್ಕೆ ಹೋಲಿಸಿದರೆ 1.1. ಕೋಟಿಯಷ್ಟು ಹೆಚ್ಚಳವನ್ನು ಇದು ತೋರಿಸುತ್ತದೆ. ಯುವಜನರಲ್ಲಿ ನಿರುದ್ಯೋಗ 28ಶೇ. ಎಂದು ಅಂದಾಜು ಮಾಡಲಾಗಿದೆ.

ಈ ಹಿನ್ನೆಲೆಯಲ್ಲಿ ಎಡಪಕ್ಷಗಳು ಅಕ್ಟೋಬರ್ 10ರಿಂದ 16 ರವರೆಗೆ ಈ ಕೆಳಗಿನ ಬೇಡಿಕೆಗಳ ಮೇಲೆ ಅಖಿಲ ಭಾರತ ಪ್ರತಿಭಟನೆಗೆ ಕರೆ ನೀಡಿವೆ:

- **ಉದ್ಯೋಗಾವಕಾಶ ನಿರ್ಮಾಣಕ್ಕೆ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸಬೇಕು, ಮತ್ತು ಅದುವರೆಗೆ ಕೇಂದ್ರ ಸರಕಾರ ಯುವಜನರಿಗೆ ನಿರುದ್ಯೋಗ ಭತ್ಯೆ ಕೊಡಬೇಕು**
- **ಕನಿಷ್ಟ ಮಾಸಿಕ ವೇತನ ರೂ.21,000 ಖಾತ್ರಿಗೊಳಿಸಬೇಕು**
- **ಉದ್ಯೋಗದಿಂದ ತೆಗೆದುಹಾಕಿರುವ ಅಪಾರ ಸಂಖ್ಯೆಯ ಕಾರ್ಮಿಕರಿಗೆ ಮಾಸಿಕ ಬದುಕುವ ವೇತನ ಸಿಗುವಂತೆ ಸರಕಾರ ಖಾತ್ರಿಗೊಳಿಸಬೇಕು**
- **ಸಾರ್ವಜನಿಕ ವಲಯದ ಖಾಸಗೀಕರಣವನ್ನು ನಿಲ್ಲಿಸಬೇಕು, ರಕ್ಷಣೆ ಮತ್ತು ಕಲ್ಲಿದ್ದಲು ವಲಯಗಳಲ್ಲಿ 100ಶೇ. ಎಫ್‌ಡಿಐ ಹಿಂತೆಗೆದುಕೊಳ್ಳಬೇಕು. ಬಿಎಸ್‌ಎನ್‌ಎಲ್, ಶಸ್ತ್ರಾಸ್ತ್ರ ಕಾರ್ಖಾನೆಗಳು, ಭಾರತೀಯ ರೈಲ್ವೆ, ಏರ್ ಇಂಡಿಯಾ ಮುಂತಾದವುಗಳ ವ್ಯಾಪಕ ಪ್ರಮಾಣದ ಖಾಸಗೀಕರಣವನ್ನು ನಿಲ್ಲಿಸಬೇಕು**
- **ಮನರೇಗದಲ್ಲಿ ಹಿಂದಿನ ಬಾಕಿ ಕೂಲಿಗಳನ್ನು ತೆರಲು ಮತ್ತು ಕನಿಷ್ಟ 200 ದಿನಗಳ ಕೆಲಸ ಒದಗಿಸಲು ಅದಕ್ಕೆ ಹಣನೀಡಿಕೆಯನ್ನು ಹೆಚ್ಚಿಸಬೇಕು**
- **ಕೃಷಿಕ ಸಂಕಟವನ್ನು ಎದುರಿಸಲು, ಹೆಚ್ಚುತ್ತಿರುವ ರೈತರ ಆತ್ಮಹತ್ಯೆಗಳನ್ನು ತಡೆಯಲು ರೈತರಿಗೆ ಒಂದು ಬಾರಿಯ ಸಾಲಮನ್ನಾ, ಲಾಗುವಾಡುಗಳ ವೆಚ್ಚದ ಒಂದೂವರೆ ಪಟ್ಟು ಕನಿಷ್ಟ ಬೆಂಬಲ ಬೆಲೆಯ ಪ್ರಕಟಣೆ ಮತ್ತು ಜಾರಿ**
- **ವಯಸ್ಸಾದವರಿಗೆ ಮತ್ತು ವಿಧವೆಯರಿಗೆ ಕನಿಷ್ಟ ಮಾಸಿಕ ಪೆನ್ಶನ್ ಮೊತ್ತವನ್ನು 3000ರೂ.ಗೆ ಏರಿಸಬೇಕು**

ಈ ಕರೆಗೆ ಸ್ಪಂದಿಸಿ ಸಾಧ್ಯವಾದಷ್ಟು ಹೆಚ್ಚು ಪ್ರಮಾಣದಲ್ಲಿ ಜನವಿಭಾಗಗಳನ್ನು ಅಣಿನೆರೆಸಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ತನ್ನ ಘಟಕಗಳಿಗೆ ಕರೆ ನೀಡಿದೆ.

ರಾಜ್ಯ ವಿಧಾನಸಭಾ ಚುನಾವಣೆಗಳು:

ಕೇಂದ್ರ ಸಮಿತಿ ಹರ್ಯಾಣ ಮತ್ತು ಮಹಾರಾಷ್ಟ್ರ ವಿಧಾನಸಭೆಗಳಿಗೆ ಚುನಾವಣೆಯ ಕಾರ್ಯತಂತ್ರಗಳನ್ನು ಚರ್ಚಿಸಿತು. ಸೀಟು ಹೊಂದಾಣಿಕೆಗಳಿಗೆ ಎಡ, ಜಾತ್ಯತೀತ, ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳೊಂದಿಗೆ ಮಾತುಕತೆಗಳು ನಡೆಯುತ್ತಿವೆ.


ಈ ಚುನಾವಣೆಗಳಲ್ಲಿ ಸ್ಪರ್ಧಿಸುವ ಸಿಪಿಐ(ಎಂ) ಅಭ್ಯರ್ಥಿಗಳ ಪೂರ್ಣ ಪಟ್ಟಿಯನ್ನು ಬೇಗನೇ ಪ್ರಕಟಿಸಲಾಗುವುದು.

ಈ ಚುನಾವಣೆಗಳಲ್ಲಿ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳ ನೇತೃತ್ವದ ಕೋಮುವಾದಿ-ಫ್ಯಾಸಿಸ್ಟ್ ಶಕ್ತಿಗಳನ್ನು ಸೋಲಿಸಲು ಮತ್ತು ವಿಧಾನಸಭೆಗಳಲ್ಲಿ ಎಡ ಪ್ರಾತಿನಿಧ್ಯವನ್ನು ಬಲಪಡಿಸಲು ಸಿಪಿಐ(ಎಂ) ಶ್ರಮಿಸುತ್ತದೆ ಎಂದು ಕೇಂದ್ರ ಸಮಿತಿ ಹೇಳಿದೆ.

ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯ ಶತಮಾನೋತ್ಸವ ಆಚರಣೆ:

ಅಕ್ಟೋಬರ್ 17, 2020 ರಂದು ಭಾರತ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯ 100 ನೇ ವರ್ಷ. ಸಿಪಿಐ(ಎಂ) ಕೇಂದ್ರ ಸಮಿತಿ ಅಕ್ಟೋಬರ್ 17, 2019 ರಿಂದ ಪಕ್ಷದ ಸ್ಥಾಪನೆಯ ಶತಮಾನೋತ್ಸವವನ್ನು ವರ್ಷವಿಡೀ ಆಚರಿಸಬೇಕು ಎಂದು ಕರೆ ನೀಡಿದೆ.

ಕಾರ್ಮಿಕ ವರ್ಗಕ್ಕಾಗಿ ಸವೆದ ಜೀವ – ಕಾಮ್ರೇಡ್ ಆರ್. ಶ್ರೀನಿವಾಸ್ ಇನ್ನಿಲ್ಲವಾದರು



ನಮ್ಮ ಮಧ್ಯೆ ಯ ಎಂದಿಗೂ ಬತ್ತದ ಚೈತನ್ಯ, ದಣಿವರಿಯದ ಕಾರ್ಮಿಕ ನಾಯಕ ಸಿ.ಪಿ.ಐ.(ಎಂ) ಕರ್ನಾಟಕ ರಾಜ್ಯ ಸಮಿತಿಯ ಸದಸ್ಯರು, ಸಿ.ಐ.ಟಿ.ಯು. ರಾಜ್ಯ ಉಪಾಧ್ಯಕ್ಷರು ನಮ್ಮೆಲ್ಲರ ನೆಚ್ಚಿನ ಸಂಗಾತಿ ಆರ್. ಶ್ರೀನಿವಾಸ್ ಇನ್ನಿಲ್ಲ.

ಬೆಂಗಳೂರಿನ ಮೈಸೂರು ರಸ್ತೆಯಲ್ಲಿ ರುವ ಫೆದರ್ ಲೈಟ್ ಕಾರ್ಖಾನೆಯಲ್ಲಿ ಕಾರ್ಮಿಕರಾಗಿದ್ದು ಅಲ್ಲಿ ಸಂಘ ಕಟ್ಟಿ ಕಾರ್ಮಿಕರಿಗೆ ನ್ಯಾಯವಾಗಿ ದಕ್ಕಬೇಕಾದ ಸೌಲಭ್ಯ ಗಳಿಗಾಗಿ ಸಂಘ ಕಟ್ಟಿದ ಕಾರಣಕ್ಕೆ ಅಮಾನತುಗೊಂಡವರು.

ನಂತರದ ದಿನಗಳಲ್ಲಿ ಬೆಂಗಳೂರಿನ ಸುತ್ತ ಮುತ್ತ ಹಲವಾರು,ಸಣ್ಣ ಕೈಗಾರಿಕೆಗಳ ಕಾರ್ಮಿಕರು, ಅಸಂಘಟಿತ ಗಾರ್ಮೆಂಟ್ ಕಾರ್ಮಿಕರನ್ನು ಸಂಘಟಿಸಿದವರು.

ಬಿ.ಪಿ.ಎಲ್. ಕಂಪನಿಯಲ್ಲಿ ಕಾರ್ಮಿಕರ ಶೋಷಣೆಯ ವಿರುದ್ದ, ಸಂವಿಧಾನ ನೀಡಿದ ಸಂಘ ಕಟ್ಟುವ ಹಕ್ಕು ಸಾಧಿಸಿ ಸಿ.ಐ.ಟಿ.ಯು.ಸಂಘ ಕಟ್ಟಿದವರು.

ಆಡಳಿತ ಮಂಡಳಿಯ ಕುತಂತ್ರದಿಂದ ಜೈಲುವಾಸ ಅನುಭವಿಸಿದರು.

ಕಾರ್ಮಿಕರ ಹಕ್ಕುಗಳಿಗಾಗಿ ನಿರಂತರ ಶ್ರಮಿಸಿದ ಈ ಹಿರಿಯ ಜೀವ ಕಾರ್ಮಿಕರಿಗಾಗಿ ಜೀವಾವಧಿ ಶಿಕ್ಷೆಯನ್ನು ಅನುಭವಿಸಿದರು.

ಜೈಲಿನಿಂದ ಬಿಡುಗಡೆಯಾಗಿ ಬಂದವರಿಗೆ ತಾನು ಕಾರ್ಮಿಕರಿಗಾಗಿ ಮಾಡಿದ ಕೆಲಸದ ಬಗ್ಗೆ ಸಮಾಧಾನವಿತ್ತು. ಆದರೆ ಸುತ್ತಲಿನ ಅನ್ಯಾಯದ ಬಗ್ಗೆ ಅಸಹನೆ ಆಕ್ರೋಶವಿತ್ತು. ತೃಪ್ತಿ ಎಂದೂ ಇರಲಿಲ್ಲ. 72 ನೇ ವಯಸ್ಸಿನಲ್ಲಿಯೂ ಎಳೆಯ ವಯಸ್ಸಿನ ಕಾರ್ಮಿಕನಿಗಿರುವ ಕೆಚ್ಚು ಸದಾ ಇಟ್ಟುಕೊಂಡ, ಎದೆಯಲ್ಲಿ ಪ್ರೀತಿ ತುಂಬಿಕೊಂಡಿದ್ದ ಸಂಗಾತಿ

ಜೈಲಿನಲ್ಲಿ ಕೂಡಾ ಅಲ್ಲಿಯ ಅವ್ಯವಸ್ಥೆ ಯ ವಿರುದ್ಧ ಅಸಮ್ಮತಿ ಹೋರಾಟ ನಡೆಸಿದವರು.

ತಮ್ಮ ಕೊನೆಯ ಉಸಿರಿನವರೆಗೂ ಕೆಂಬಾವುಟದ ಜೊತೆ ಅಚಲವಾಗಿ ನಿಂತ ಜೀವ ಪಕ್ಷದ ರಾಜ್ಯ ಸಮಿತಿ ಸಭೆಯಲ್ಲಿ ಮಾತನಾಡುತ್ತಲೇ ತಮ್ಮ ಕೊನೆಯುಸಿರೆಳೆದರು.

ಅವರ ತ್ಯಾಗ, ಸಂಘಟನೆ ಕಟ್ಟುವ ಬಲ ಛಲ ಮೈಗೂಡಿಸಿಕೊಂಡು ಅವರ ಕನಸುಗಳನ್ನು ನನಸು ಮಾಡಲು ಮುನ್ನಡೆಯುವುದೇ ಅವರಿಗೆ ನಾವು ಸಲ್ಲಿಸುವ ಶ್ರದ್ಧಾಂಜಲಿ.

ಅವರ ನಿಧನ ಸಿ.ಪಿ.ಐ.(ಎಂ) ಪಕ್ಷ ಕ್ಕೆ ಮತ್ತು ಕಾರ್ಮಿಕ ಚಳಿವಳಿಗೆ ತುಂಬಲಾರದ ನಷ್ಟ. ಅವರ ನಿಧನಕ್ಕೆ

ಸಿ.ಪಿ.ಐ(ಎಂ) ರಾಜ್ಯ ಸಮಿತಿ ಶ್ರದ್ಧಾಂಜಲಿ ಅರ್ಪಿಸುತ್ತದೆ.

–ಯು. ಬಸವರಾಜ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ

ಸಿಪಿಎಂ ಹಿರಿಯ ಮುಖಂಡ ಆರ್ ಶ್ರೀನಿವಾಸ್ ಇನ್ನಿಲ್ಲ

ಸಿಪಿಎಂ ರಾಜ್ಯ ಸಮಿತಿ ಸದಸ್ಯ ಹಿರಿಯ ಕಾರ್ಮಿಕ ಮುಖಂಡ ಆರ್ ಶ್ರೀನಿವಾಸ ಶುಕ್ರವಾರ ರಾತ್ರಿ 8 ಗಂಟೆಗೆ ತೀವ್ರ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಅಕ್ಟೋಬರ್ 11 ರಂದು ಸಂಜೆ ಸಿಪಿಎಂ ರಾಜ್ಯ ಸಮಿತಿ ಸಭೆಯಲ್ಲಿ ಮಾತನಾಡುವಾಗಲೇ ಅವರು ಕುಸಿದು ಬಿದ್ದರು ಅವರನ್ನು ಕೂಡಲೇ ಹತ್ತಿರದ ಖಾಸಗೀ ಆಸ್ಪತ್ರೆಗೆ ಸಾಗಿಸಿದರೂ ಅವರನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ತೊಂಬತ್ತರ ದಶಕದಕೊನೆಯಲ್ಲಿ ಇಡೀ ಬೆಂಗಳೂರಿಗೆ ಚಿರಪರಿಚಿತವಾದ ಬಿಪಿಎಲ್ ಕಾರ್ಮಿಕರ ಧೀರೋದಾತ್ತ ಹೋರಾಟದ ನೇತೃತ್ವವನ್ನು ಅವರು ವಹಿಸಿದ್ದರು. ಆಡಳಿತ ಮಂಡಳಿ ಹೆಣೆದ ಸಂಚಿನ ಹಿನ್ನಲೆಯಲ್ಲಿ ಅವರು ಜೈಲಿಗೆ ಸೇರುವಂತೆ ಆಯಿತು.ತನ್ನ ಒಡನಾಡಿಗಳ ಜೊತೆ ಸುಮಾರು 17 ವರ್ಷಗಳ ಕಾಲ ಅವರು ಜೀವಾವಧಿ ಶಿಕ್ಷೆಗೆ ಒಳಗಾಗಿ ಜೈಲಿನಲ್ಲಿದ್ದರು. ಕಳೆದ ಮೂರು ವರ್ಷಗಳ ಹಿಂದೆ ಬಿಡುಗಡೆಯಾದ ಅವರು ಮತ್ತೆ ದುಡಿಯುವ ಜನರ ಚಳವಳಿಗೆ ತಮ್ಮನ್ನು ಸಮರ್ಪಿಸಿ ಕೊಂಡಿದ್ದರು.

ಪ್ರಸಕ್ತ ಸಿಪಿಎಂ ಪಕ್ಷದ ಬೆಂಗಳೂರು ಉತ್ತರ ಜಿಲ್ಲಾ ಸಮಿತಿ ಕಾರ್ಯದರ್ಶಿಯಾಗಿ ರಾಜ್ಯ ಸಮಿತಿಯ ಸದಸ್ಯರಾಗಿ ಪೂರ್ಣಕಾಲದ ಕಾರ್ಯಕರ್ತರಾಗಿ ಐದು ದಶಕಗಳಿಂದ ಕೆಲಸಮಾಡುತ್ತಾ ದುಡಿಯುವ ಜನರ ಚಳವಳಿಗೆ ಮಾರ್ಗದರ್ಶನ ನೀಡುತ್ತಿದ್ದರು.

ಕಾಮ್ರೇಡ್ ಆರ್ ಶ್ರೀನಿವಾಸ ನಿಧನ ರಾಜ್ಯದ ಕಮ್ಯೂನಿಸ್ಟ್ ಚಳವಳಿಗೆ ಅಪಾರ ನಷ್ಟ ಉಂಟುಮಾಡಿದೆ

ಕಾಮ್ರೇಡ್ ಆರ್ ಶ್ರೀನಿವಾಸ್ ಅವರಿಗೆ ಕ್ರಾಂತಿಕಾರಿ ನಮನಗಳು.

–ಎಸ್.ವೈ.ಜಿ.



ಕಾರ್ಮಿಕ ವರ್ಗದ ಕಣ್ಮಣಿ ಆರ್. ಶ್ರೀನಿವಾಸ್ ಇನ್ನಿಲ್ಲ

ಕೆಂಪು ವಂದನೆಗಳು....

ನನ್ನ ನೆನಪು ಹಾಗೇ ಹಿಂದಕ್ಕೆ ಹೋಗುತ್ತದೆ.

ರಮಾ ನಿಧನ ಹೊಂದಿದಾಗ, ಶ್ರೀನಿವಾಸ್ ಅವರು ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಆಗಿದ್ದರು. ರಮಾಗೆ ನುಡಿ ನಮನ ನೀಡಿದವರಲ್ಲಿ ಇವರೇ ಮೊದಲಿಗರು. ಸ್ಮಶಾನದಲ್ಲಿ ನೆರದಿದ್ದಂತಹ ಎಲ್ಲರಿಗೂ ಸಭೆ ನಡೆಸಿದ್ದರು.

ನಂತರ, ಬಿಪಿಎಲ್ ನ ಘಟನೆ ನಡೆದಾಗ, ಮಧ್ಯೆ ಮಧ್ಯೆ ಸಿಗುತ್ತಿದ್ದರು. ಈಗ ಅವರು ಹಿಂದಿನ ಶ್ರೀನಿವಾಸ್ ಆಗಿರಲಿಲ್ಲ. ಮೌನಕ್ಕೆ ಜಾರಿಕೊಂಡಿದ್ದರು. ಬಹಳ ಕಡಿಮೆ ಮಾತನಾಡುತಿದ್ದರು. ಸುಧೀರ್ಘ ಬಂದನದ ನಂತರ

ಬಿಡುಗಡೆ ಆದ ಮೇಲೆ ನಡೆದ ಸಭೆಯಲ್ಲಿ ನಾನು ಭಾಗವಹಿಸಿದ್ದೆ.

ಅಂದು ಅವರಿಗೆ ಕೊನೆಗೂ ಕಾರ್ಮಿಕ ವರ್ಗದ ಸಿದ್ದಾಂತ ಗೆದ್ದಂತಹ ಸಂತೋಷ ಮುಖದ ಮೇಲೆ ಇತ್ತು. ಅದು ಗರ್ವ, ಅಹಂಕಾರ ಅಲ್ಲ. ತೃಪ್ತಿಯ , ನೆಮ್ಮದಿಯ ಭಾವ...

ಯಾವಾಗಲಾದರೂ ಜ್ಞಾಪಕ ಬಂದಾಗ ನನ್ನ ಕುಟುಂಬದ ಬಗ್ಗೆ ವಿಚಾರಿಸೋರು.

ಕಾರ್ಮಿಕ ರಂಗದ ಹೋರಾಟಕ್ಕೆ ಸಮರ್ಪಿಸಿಕೊಂಡಿದ್ದ ಸಂಗಾತಿ. ಹೆಚ್ಚು ಓದಿನ ಅರಿವಿಲ್ಲದಿದ್ದರು, ಅನುಭವದ ಆಧಾರದಲ್ಲಿ ಕಾರ್ಯವೆಸಗುತಿದ್ದ ಪ್ರಾಮಾಣಿಕ ಸಂಗಾತಿ. ಹೆಚ್ಚು ಸುಖ ಪಡದೆ, ಕಷ್ಟದಲ್ಲೇ ಸುಖ ಕಾಣುತಿದ್ದ ಸಂಗಾತಿ. ಹಳೆಯ ತಲೆಮಾರಿನ, ಎಪ್ಪತ್ತರ ದಶಕದ ಒಂದು ಕೊಂಡಿ ಕಳಚಿದೆ.....

ಆಘಾತಕಾರಿ ಸುದ್ದಿ..... ಇಂತಹ ಸಂಗಾತಿಗಳ ಅವಶ್ಯಕತೆ ಇಂದು ಖಂಡಿತಾ ಕಾರ್ಮಿಕ ಸಂಘಟನೆಗೆ, ಪಕ್ಷಕ್ಕೆ ಇದೆ....

ನಮನಗಳು–

ಕೆಂಪು ವಂದನೆಗಳು..

–ಗುಂಡಣ್ಣ





ಹೈದ್ರಾಬಾದ್ ಕರ್ನಾಟಕ (ಕಲ್ಯಾಣ ಕರ್ನಾಟಕದ) ಸಮಗ್ರ ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾದ ಕ್ರಿಯಾ ಯೋಜನೆ ರಚಿಸಲು ಎಸ್‌ಎಫ್‌ಐ ಆಗ್ರಹ

ಕಲ್ಯಾಣ ಕರ್ನಾಟಕದ ಸಮಗ್ರ ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾದ ಕ್ರಿಯಾ ಯೋಜನೆ ರಚಿಸಲು ಆಗ್ರಹಿಸಿ ಇಂದು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ಕೊಪ್ಪಳ, ಬೀದರ, ರಾಯಚೂರು ಹಾಗೂ ಯಾದಗಿರಿಯಲ್ಲಿ ಜಿಲ್ಲಾ ಸಮಿತಿ ನಿಯೋಗದ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ.

ಕಲ್ಯಾಣ ಕರ್ನಾಟಕ (ಹೈದ್ರಾಬಾದ್ ಕರ್ನಾಟಕ) ಅಭಿವೃದ್ಧಿಗಾಗಿ 371(ಜೆ) ಕಲಂ ಜಾರಿ ಮಾಡಿ 6 ವರ್ಷಗಳು ಆದರು ಈ ಭಾಗದ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಹೇಳಿಕೊಳುವಷ್ಟು ಬದಲಾವಣೆ ಆಗಿಲ್ಲ ಬೀದರ,ಕಲಬುರ್ಗಿ ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆಗಳ ಅಭಿವೃದ್ಧಿಗಾಗಿ ಕಲ್ಯಾಣ (ಹೈದ್ರಾಬಾದ್) ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ರಚಿಸಲಾಗಿದೆ. ಗ್ರಾಮೀಣ ಪ್ರದೇಶದ ರಸ್ತೆಗಳು ಆರೋಗ್ಯ, ಶಿಕ್ಷಣ, ಮೂಲಸೌಕರ್ಯಗಳ ಅನುಷ್ಠಾನ ಈ ಮಂಡಳಿಯ ಪ್ರಮುಖ ಕೆಲಸ. 6 ಜಿಲ್ಲೆಗಳ ಅಭಿವೃದ್ಧಿಗಾಗಿ ಕೋಟಿ, ಕೋಟಿ ರೂ. ಹಣ ಬಿಡುಗಡೆಯಾಗುತ್ತಲಿದೆ. ಆದರೆ ಅದು ಸರಿಯಾಗಿ ಬಳಕೆಯಾಗುತ್ತಿಲ್ಲ. ಇದರಲ್ಲಿ ಈ 6 ಜಿಲ್ಲೆಗಳ ಜನಪ್ರತಿನಿಧಿಗಳ ಅಸಡ್ಡೆ ಎದ್ದು ಕಾಣುತ್ತಿದೆ.

ಈ ಮಂಡಳಿ ರಚನೆಯಾಗಿ 6 ವರ್ಷ ಕಳದಿದೆ. ಇಲ್ಲಿನ ಅಸಮಾನತೆ ಇನ್ನೂ ಜೀವಂತವಿದೆ. ರಸ್ತೆಗಳು ಇನ್ನೂ ಸುಧಾರಣೆಯಾಗಿಲ್ಲ, ಶಾಲಾ–ಕಾಲೇಜುಗಳ ಕೊಠಡಿಗಳು ಶಿಥಿಲಾವಸ್ಥೆಯಲ್ಲಿವೆ. ಹಾಸ್ಟೆಲ್‌ಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ 6,730 ಹುದ್ದೆಗಳು ಖಾಲಿ ಇವೆ. ಕಾಲೇಜುಗಳಲ್ಲಿ 1,000ಕ್ಕೂ ಹೆಚ್ಚು ಹುದ್ದಗಳು ಖಾಲಿ ಇವೆ. ಕೇಂದ್ರಿಯ ವಿವಿ ಸೇರಿ 6 ವಿಶ್ವವಿದ್ಯಾಲಯಗಳಿದ್ದು, ಅವುಗಳಲ್ಲಿ ಬಹಳ ವರ್ಷಗಳಿಂದ ನೇಮಕಾತಿಯೇ ನಡೆದಿಲ್ಲ ಎಂದು ಆಕ್ರೊಶ ವ್ಯಕ್ತಪಡಿಸಿದರು.

ಪ್ರತೀ ಬಾರಿಯೂ ಕ್ರಿಯಾ ಯೋಜನೆ ರಚನೆ ವಿಳಂಬವಾಗುತ್ತದೆ, ಇಲ್ಲವೆ ಜಾರಿಗೆ ಆಸಕ್ತಿ ತೊರುವುದೇ ಇಲ್ಲ. ಹಾಗಾಗಿ ಬಂದ ಅನುದಾನ ಉಳಿದು ಸರಕಾರಕ್ಕೆ ವಾಪಸ್ಸಾಗುತ್ತಿದೆ.

ಕ್ರೀಯಾ ಯೋಜನೆಗೆ ಎಸ್‌ಎಫ್‌ಐ ಸೂಚಿಸಿರುವ ಅಂಶಗಳು.

1) ಈ ಬಾರಿ ಕ್ರಿಯಾ ಯೊಜನೆ ರಚಿಸುವಾಗ ಈ ಭಾಗದ ಸರಕಾರಿ ಶಾಲಾ– ಕಾಲೇಜುಗಳಿಗೆ ಮೂಲಸೌಕರ್ಯ ನೀಡಬೇಕು. ಪ್ರತೀ ಜಿಲ್ಲೆಗೆ ಆಯ್ದ ಶಾಲಾ–ಕಾಲೇಜುಗಳನ್ನು ಆಯ್ಕೆ ಮಾಡಿಕೊಂಡು ಅಲ್ಲಿ ಸ್ಮಾರ್ಟ್ ತರಗತಿಗಳನ್ನು ನಡೆಸಬೇಕು. ಅದಕ್ಕಾಗಿ ಎಲ್‌ಇಡಿ ಪ್ರೊಜೆಕ್ಟರ್ ವಿತರಿಸಬೇಕು.

2) ಈ ಭಾಗದಲ್ಲಿರುವ ಸಮಾಜಕಲ್ಯಾಣ ಮತ್ತು ಬಿಸಿಎಂ, ಅಲ್ಪಸಂಖ್ಯಾತ ಇಲಾಖೆಯ ವ್ಯಾಪ್ತಿಯಲ್ಲಿ ನಡೆಯುವ ಹಾಸ್ಟೆಲ್‌ಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. ಎಲ್ಲಾ ಹಾಸ್ಟೆಲ್‌ಗಳಿಗೆ ಸ್ವಂತ ಕಟ್ಟಡ ನೀಡಬೇಕು. ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಮಾಸಿಕವಾಗಿ 3,500 ರೂ. ಆಹಾರ ಭತ್ಯೆ ನೀಡಬೇಕು. ಹಾಸ್ಟೆಲ್‌ಗಳಲ್ಲಿ ಗ್ರಂಥಾಲಯ ಸೌಲಭ್ಯ ನೀಡಬೇಕು.

3) ಶಾಲಾ–ಕಾಲೇಜುಗಳ ಗ್ರಂಥಾಲಯಗಳನ್ನು ಬಲಪಡಿಸಬೇಕು. ಹಾಗೂ ಸಮರ್ಪಕವಾಗಿ, ಅಗತ್ಯವಾಗಿರುವ ಪುಸ್ತಕಗಳನ್ನು ವಿತರಿಸಬೇಕು.

4) ವಿದ್ಯಾರ್ಥಿಗಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದು, ರಕ್ತಹೀನತೆಯಂತೆ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಹಾಗಾಗಿ ಈ ಭಾಗದ ಶಾಲಾ–ಕಾಲೇಜುಗಳಲ್ಲಿ ಮೊಟ್ಟೆ, ಬಾಳೆ ಹಣ್ಣು ವಿತರಣೆ ಮಾಡಬೇಕು.

5) ಈ ಅನುದಾನದಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಬೇಕು.

6) ಮಂಡಳಿಯ ಅನುದಾನದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಾದ ಐಎಎಸ್, ಕೆಎಎಸ್, ಪಿಡಿಒ, ಪೊಲೀಸ್, ಬ್ಯಾಂಕಿಂಗ್ ಇನ್ನಿತರ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅರ್ಜಿ ಹಾಕಿದ ಅಭ್ಯರ್ಥಿಗಳಿಗೆ ತರಬೇತಿ (ಕೋಚಿಂಗ್) ಪಡೆಯಲು ಆರ್ಥಿಕ ಸಹಾಯ ಮಾಡಬೇಕು.

7) ಇದೇ ಅನುದಾನದಲ್ಲಿ ಹಾಸ್ಟೆಲ್ ವಂಚಿತ ವಿದ್ಯಾರ್ಥಿಗಳಿಗೆ ಕೊಠಡಿ– ಆಹಾರ ಭತ್ಯೆಯಾಗಿ 2,000 ರೂ. ಮಾಸಿಕ ಭತ್ಯೆ ನೀಡಬೇಕು.

8) ಬಿ.ಎಡ್, ಎಂಜನೀಯರಿಂಗ್, ಮೆಡಿಕಲ್, ಎಲ್‌ಎಲ್‌ಬಿ, ಐಟಿಐ ಇನ್ನಿತರ ವೃತ್ತಿಪರ ಕೋರ್ಸ್ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ವಾರ್ಷಿಕವಾಗಿ 20,000 ರೂ. ಪ್ರೋತ್ಸಾಹ ಧನ ನೀಡಬೇಕು.

9) ಖಾಲಿ ಇರುವ ಈ ಭಾಗದ ಎಲ್ಲಾ ಹುದ್ದೆಗಳ ಭರ್ತಿಗೆ ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕು.

10) ರೈತರಿಗೆ, ಕೂಲಿಕಾರರಿಗೆ, ಸ್ವಯಂ ಉದ್ಯೋಗಸ್ಥರಿಗೆ, ಮಹಿಳೆಯರಿಗೆ ಆರ್ಥಿಕವಾಗಿ ಸಬಲರಾಗಲು ವಿಶೇಷ ಪ್ಯಾಕೇಜ್ ನೀಡಬೇಕು.

ಈ ಅಂಶಗಳನ್ನು ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಭಾರತ ವಿದ್ಯಾರ್ಥಿ ಫೆಡರೇಷನ್ ಎಸ್‌ಎಫ್‌ಐ ಆಗ್ರಹಿಸಿದೆ.





ಸಚಿವ ಶ್ರೀರಾಮುಲುರವರಿಗೆ ಹಾಸ್ಟೆಲ್ ಸಿಬ್ಬಂದಿಗಳಿಂದ ಮನವಿ

ಅಕ್ಟೋಬರ್ 5 ರಂದು ಬಳ್ಳಾರಿ ಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಚಿವರು ಶ್ರೀ ಬಿ.ಶ್ರೀರಾಮುಲು ರವರನ್ನು ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘ. ಬೆಂಗಳೂರು ಹಾಗೂ ಬಳ್ಳಾರಿ ಜಿಲ್ಲಾ ಸಮಿತಿಯ ವತಿಯಿಂದ ಭೇಟಿಯಾಗಿ. ಬಾಕಿ ಇರುವ ಸಂಬಳ ಕೊಡಿಸಲು. ನಿವೃತ್ತಿ ವರೆಗೆ ಸೇವಾ ಭದ್ರತೆಗಾಗಿ ಒತ್ತಾಯಿಸಿ ಮನವಿ ಪತ್ರ ಸಲ್ಲಿಸಲಾಯಿತು. ಮನವಿಯನ್ನು ಸ್ವೀಕರಿಸಿದ ಸಚಿವರು "ನಾನು ನಿಮ್ಮೊಂದಿಗೆ ಇದ್ದೇನೆ. ನಿಮಗೆ ಅನ್ಯಾಯವಾಗಲು ಬಿಡುವುದಿಲ್ಲ" ಎಂದು ಭರವಸೆ ನೀಡಿದರು. ಸಂಘದ ರಾಜ್ಯ ಅಧ್ಯಕ್ಷ ನಿತ್ಯಾನಂದಸ್ವಾಮಿ, ಉಪಾಧ್ಯಕ್ಷ ಜಂಬಯ್ಯ ನಾಯಕ್, ಸಹಕಾರ್ಯದರ್ಶಿ ಹನುಮೇಗೌಡ ಕೆ., ಬಳ್ಳಾರಿ ಜಿಲ್ಲಾ ಮುಖಂಡರಾದ ಇ.ಆರ್. ಯಲ್ಲಪ್ಪ ನಿಯೋಗದ ಮುಂದಾಳತ್ವ ವಹಿಸಿದ್ದರು. ಮಹಿಳಾ ನೌಕರರೂ ಸೇರಿದಂತೆ ಬಳ್ಳಾರಿ ಜಿಲ್ಲೆಯ 50 ಕ್ಕೂ ಹೆಚ್ಚು ಹೊರಗುತ್ತಿಗೆ ನೌಕರರು ಉಪಸ್ಥಿತರಿದ್ದರು.





ವಿಧಾನ ಮಂಡಲದ ಕಲಾಪಗಳನ್ನು ನೇರವಾಗಿ ವರದಿ ಮಾಡಲು ಕನ್ನಡ ಸುದ್ದಿ ವಾಹಿನಿಗಳಿಗೆ ಹಾಗೂ ಮುದ್ರಣ ಮಾಧ್ಯಮದ ಛಾಯಾಗ್ರಾಹಕರಿಗೆ ನಿರ್ಬಂಧ ಹೇರಿರುವುದನ್ನು ಖಂಡಿಸಿದ ಜನವಾದಿ ಮಹಿಳಾ ಸಂಘಟನೆ

ಇದು ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವ ಹಾಗೂ ಜನರ ತಿಳಿಯುವ ಹಕ್ಕನ್ನು ಕಸಿದುಕೊಳ್ಳುವ ಗಂಭೀರ ಕ್ರಮವಾಗಿದೆ.

ಜನರ ಸ್ಪಷ್ಟ ಬೆಂಬಲ ಇಲ್ಲದೆ, ಅಕ್ರಮವಾಗಿ ಅಧಿಕಾರಕ್ಕೆ ಬಂದಿರುವ ಬಿಜೆಪಿ ಸರ್ಕಾರವು ತನ್ನ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಈ ಕ್ರಮ ಕೈಗೊಂಡಿರುವಂತೆ ಕಾಣುತ್ತದೆ.

ಪ್ರಜಾಪ್ರಭುತ್ವದಲ್ಲಿ ಮಾಧ್ಯಮ ಸ್ವಾತಂತ್ರ್ಯ ಮತ್ತು ಆಡಳಿತದ ಪಾರದರ್ಶಕತೆ ಅತ್ಯಂತ ಮಹತ್ವದ ಸಂಗತಿಗಳು. ಒಂದೇ ಒಂದು ಆದೇಶದ ಮೂಲಕ ಈ ಎರಡೂ ಹಕ್ಕುಗಳನ್ನು ಮೊಟಕುಗೊಳಿಸುವ ಬಿಜೆಪಿ ಸರ್ಕಾರದ ಕ್ರಮವು ಆತಂತಕಕಾರಿಯಾಗಿದೆ.

ಒಂದು ಕಡೆ ಬಿಜೆಪಿಯು ಎಲ್ಲ ಸಮೂಹ ಮಾಧ್ಯಮಗಳನ್ನೂ ತನ್ನ ಪರವಾಗಿ ಪ್ರಚಾರ ಮಾಡುವ ಕೈಗೊಂಬೆಗಳಂತೆ ಮಾಡಿಕೊಂಡು ಜನರಿಗೆ ನಿಜ ಮಾಹಿತಿಗಳನ್ನು ಒದಗಿಸದೆ ವಂಚನೆ ಮಾಡುತ್ತಿದೆ. ಇಂತಹ ಸಂದರ್ಭದಲ್ಲಿ ವಿಧಾನ ಮಂಡಲದಲ್ಲಿ ಚುನಾಯಿತ ಪ್ರತಿನಿಧಿಗಳು ಏನು ಮಾಡುತ್ತಾರೆ ಎಂಬುದನ್ನು ನೇರವಾಗಿ ತಿಳಿಯುವ ಅವಕಾಶವನ್ನು ಕಸಿದುಕೊಳ್ಳುವ ಮೂಲಕ ಅಲ್ಲಿಯೂ, ತನಗೆ ಅನುಕೂಲಕರವಾದ ಮಾಹಿತಿಗಳನ್ನು ಮಾತ್ರ ಜನರಿಗೆ ಉಣಬಡಿಸುವ ತಂತ್ರಗಾರಿಗೆ ಮಾಡುತ್ತಿದೆ.

ಬಿಜೆಪಿಯ ಜನವಿರೋಧಿ ಕ್ರಮಗಳನ್ನು ಜನತೆಯೂ ವಿರೋಧಿಸದೆ, ಮೌನವಾಗಿ ಸ್ವೀಕರಿಸುತ್ತಿರುವ ಕಾರಣ, ಈ ಅಕ್ರಮ ಸರ್ಕಾರವು ಜನರ ತಿಳಿಯುವ ಹಕ್ಕಿಗೇ ಕೊಡಲಿ ಪೆಟ್ಟು ಹಾಕಿದೆ. ನಮ್ಮಿಂದ ಆಯ್ಕೆಯಾದ ಶಾಸಕರು ಸದನದಲ್ಲಿ ಚರ್ಚೆ ಮಾಡದೆ, ಸಂವಾದ ಮಾಡದೆ, ಪ್ರಶ್ನೆ ಕೇಳದೆ ಸುಮ್ಮನೆ ನಿದ್ದೆ ಮಾಡಿದರೂ, ಮೊಬೈಲ್ ನಲ್ಲಿ ಕಾಲ ಕಳೆದರೂ, ಹರಟೆ ಹೊಡೆದರೂ ಹಾಗೂ ಸದನಕ್ಕೆ ಗೈರು ಹಾಜರಾದರೂ ಯಾರಿಗೂ ತಿಳಿಯದಂತೆ ಮಾಡುವುದು ಈ ಆದೇಶದ ಉದ್ದೇಶವಿದ್ದಂತೆ ಕಾಣುತ್ತದೆ.

ಈ ಹಿಂದೆಯೂ 2012ರಲ್ಲಿ ಇದೇ ಬಿಜೆಪಿಯ ಸರ್ಕಾರವು ವಿಧಾನ ಮಂಡಲದ ವರದಿಗಾರಿಕೆಯ ಮೇಲೆ ನಿರ್ಬಂಧವನ್ನು ಹೇರಿತ್ತು. ಬಿಜೆಪಿಯ ಶಾಸಕರು ಸದನದಲ್ಲಿ ಕುಳಿತು ಲೈಂಗಿಕ ವಿಡಿಯೋಗಳನ್ನು ನೋಡುತ್ತಾ ಕಾಲಹರಣ ಮಾಡುತ್ತಿದ್ದುದನ್ನು ಖಾಸಗಿ ಚಾನೆಲ್ ಗಳು ಜನರಿಗೆ ತೋರಿಸಿದ್ದವು ಎನ್ನುವ ಕಾರಣಕ್ಕೆ ನಿರ್ಬಂಧ ವಿಧಿಸಲಾಗಿತ್ತು. ಆ ನಂತರ ವಿಪಕ್ಷಗಳು ಮತ್ತು ಮಾಧ್ಯಮಗಳ ಒತ್ತಡಕ್ಕೆ ಮಣಿದು ನಿರ್ಬಂಧವನ್ನು ಹಿಂತೆಗೆದುಕೊಳ್ಳಲಾಗಿತ್ತು.

ತನ್ನ ಶಾಸಕರು ಜನರಿಗೆ, ಪ್ರಜಾಪ್ರಭುತ್ವಕ್ಕೆ ನಿಷ್ಠರಾಗಿರುವಂತೆ ಮಾಡುವ ಬದಲು ಬಿಜೆಪಿಯಂತಹ ರಾಷ್ಟ್ರೀಯ ಪಕ್ಷವು ತನ್ನ ಶಾಸಕರ ಅಸಾಂವಿಧಾನಿಕ ನಡೆಗಳನ್ನು ಮುಚ್ಚಿಟ್ಟುಕೊಳ್ಳುವಂತಹ ಕ್ರಮಗಳಿಗೆ ಕೈಹಾಕಿರುವುದು ಖಂಡನೀಯ. ಅಂದು ಲೈಂಗಿಕ ವಿಡಿಯೋ ನೋಡಿದ ಶಾಸಕರನ್ನು ಇಂದು ಉಪಮುಖ್ಯಮಂತ್ರಿಯ ಸ್ಥಾನಕ್ಕೆ ಏರಿಸಿರುವ ಬಿಜೆಪಿಯ ಕ್ರಮಗಳು ಮುಂದಿನ ದಿನಗಳಲ್ಲಿ ಮತ್ತಷ್ಟು ಪ್ರಜಾಪ್ರಭುತ್ವ ವಿರೋಧಿಯೂ, ಜನ ವಿರೋಧಿಯೂ ಆಗುವ ಸೂಚನೆಗಳು ಈ ಆದೇಶದಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ.

ವಿಧಾನಸಭೆ ಸಚಿವಾಲಯವು ಈ ಕೂಡಲೇ ಈ ಮಾಧ್ಯಮ ನಿರ್ಬಂಧದ ಆದೇಶವನ್ನು ಹಿಂತೆಗೆದುಕೊಂಡು ಪತ್ರಿಕಾ ಸ್ವಾತಂತ್ರ್ಯವನ್ನು ಹಾಗೂ ಜನರ ತಿಳಿಯುವ ಹಕ್ಕನ್ನು ಎತ್ತಿಹಿಡಿಯಬೇಕು.

ಆಡಳಿತದಲ್ಲಿ ಹೆಚ್ಚಿನ ಪಾರದರ್ಶಕತೆ ತೋರಬೇಕು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಸಮಿತಿಯು ಆಗ್ರಹಿಸಿದೆ.

ಹಮಾಲಿ ಕಾರ್ಮಿಕರಿಂದ ಪ್ರತಿಭಟನೆ



ಹಳೆ ಬಂದರು ಸಗಟು ಮಾರುಕಟ್ಟೆಯ ಹಮಾಲಿ ಕಾರ್ಮಿಕರ ಹೊಸ ಕೂಲಿ ದರ ಪರಿಷ್ಕರಣೆ ಮತ್ತು ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಹಳೆ ಬಂದರು ಸಗಟು ಮಾರುಕಟ್ಟೆಯಲ್ಲಿ ಹಮಾಲಿ ಕಾರ್ಮಿಕರು ಬಂದರು ಶ್ರಮಿಕರ ಸಂಘದ ನೇತೃತ್ವದಲ್ಲಿ ಹಕ್ಕೊತ್ತಾಯ ಮೆರವಣಿಗೆ ನಡೆಸಿ ಪ್ರತಿಭಟನೆ ನಡೆಸಿದರು.

ಕಾರ್ಮಿಕರು ಮಾರುಕಟ್ಟೆಯ ವ್ಯವಹಾರಗಳು ಆರಂಭಗೊಳ್ಳುತ್ತಿದ್ದಂತೆ ಕಾರ್ಮಿಕರ ಕಟ್ಟೆ ಬಳಿ ಜಮಾಯಿಸಿ ಘೋಷಣೆ ಕೂಗುತ್ತಾ ಪೋರ್ಟ್ ರಸ್ತೆ, ಕೆನರಾ ಛೇಂಬರ್ ರಸ್ತೆ, ಜೆ. ಎಮ್ ರಸ್ತೆ, ವರ್ತಕ ವಿಳಾಸ ರಸ್ತೆಗಳಲ್ಲಿ ಹಕ್ಕೊತ್ತಾಯ ಮೆರವಣಿಗೆ ನಡೆಯಿತು.

‘ಸಂಪತ್ತಿನ ಉತ್ಪಾದಕರನ್ನು(ವೆಲ್ಥ್ ಕ್ರಿಯೇಟರ್ಸ್) ಅನುಮಾನದಿಂದ ನೋಡಬಾರದು. ಅವರನ್ನು ಗೌರವದಿಂದ ಕಾಣಬೇಕು. ಸಂಪತ್ತು ಉತ್ಪಾದನೆಯಾಗದಿದ್ದರೆ ವಿತರಣೆ ಮಾಡಲು ಬರುವುದಿಲ್ಲ. ದೇಶದ ಬಡವರಿಗೆ ಇದರಿಂದ ಅನುಕೂಲವಾಗುವುದಿಲ್ಲ’ ಎಂದು ಪ್ರಧಾನ ಮಂತ್ರಿಗಳು ಕೆಂಪುಕೋಟೆಯಿಂದ ಹೇಳಿದ್ದಾರೆ. ಈ ವೆಲ್ಥ್ ಕ್ರಿಯೇಟರ್ಸ್, ಸಂಪೂರ್ಣ ಖಾಸಗೀಕರಣ, ಲಾಭಗಳಿಕೆಯ ಪವಿತ್ರೀಕರಣ, ಕಾರ್ಪೊರೇಟ್ ಸಂಸ್ಕೃತಿಯ–ಕುಳಗಳ ಆರಾಧನೆ, ನಗರೀಕರಣದ ಅಲೆ –ಇವೆಲ್ಲವುಗಳ ಮೂಲದಲ್ಲಿರುವ ತತ್ವ ಏನು?
‘ಶ್ರೀಮಂತರಿಗೆ ಯಾವುದು ಉತ್ತಮವಾದುದಾಗಿರುತ್ತದೋ ಅದು ಬಡವರಿಗೂ ಉತ್ತಮವಾದುದಾಗಿರುತ್ತದೆ’. ಇದನ್ನು ಹೇಗೆ ಒಪ್ಪಿಕೊಳ್ಳುವುದು? ನಿಜಕ್ಕೂ ಇದು ಸಾಧ್ಯವೇ? ಯಾವುದು ಮುಖೇಶ್ ಅಂಬಾನಿಗೆ ಇಷ್ಟವೋ ಅಥವಾ ಮೆಚ್ಚುಗೆಯೋ ಅದು ನಮಗೆ ಒಪ್ಪಿಗೆಯಾಗುವುದು ಹೇಗೆ?



ಪ್ರೊ. ಟಿ.ಆರ್. ಚಂದ್ರಶೇಖರ್

ಇದೀಗ “ಸಂಪೂರ್ಣ ಖಾಸಗೀಕರಣ”ದ ಪರ್ವ

ನಾವೆಲ್ಲ ‘ಸಂಪೂರ್ಣ ರಾಮಾಯಣ’ ಎಂಬ ವಾಲ್ಮೀಕಿ ಕೃತಿಯ ಬಗ್ಗೆ ಕೇಳಿದ್ದೇವೆ. ಅದರಂತೆ ಇಂದು ನಮ್ಮ ಆರ್ಥಿಕತೆಯು ‘ಸಂಪೂರ್ಣ ಖಾಸಗೀಕರಣ’ ಪರ್ವದಲ್ಲಿ ಹಾದುಹೋಗುತ್ತಿದೆ. ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ಮಂಡಿಸಿರುವ 2018–19ರ ಆರ್ಥಿಕ ಸಮೀಕ್ಷೆಯ ಮೊದಲ ಅಧ್ಯಾಯದ ಶೀರ್ಷಿಕೆ ಹೀಗಿದೆ: ‘ಚಾಲಕ ಸ್ಥಾನದಲ್ಲಿನ ಪಲ್ಲಟ: ವರಮಾನ ವರ್ಧನೆ, ಉದ್ಯೋಗಗಳು, ರಫ್ತು ಮತ್ತು ಬೇಡಿಕೆಗಳ ಪ್ರಧಾನ ಚಾಲಕ ಶಕ್ತಿ ಖಾಸಗಿ ಬಂಡವಾಳ ಹೂಡಿಕೆ’. ನಮ್ಮ ಆರ್ಥಿಕತೆಯ ಅಭಿವೃದ್ಧಿಗೆ ಇದುವರೆವಿಗೂ ಖಾಸಗಿ ಬಂಡವಾಳದ ಮಹತ್ವದ ಬಗ್ಗೆ ಮಾತನಾಡಲಾಗುತ್ತಿತ್ತು. ಆದರೆ ಇಂದು ಅಭಿವೃದ್ಧಿಯನ್ನೇ ಖಾಸಗಿ ವಲಯಕ್ಕೆ ವಹಿಸಿಕೊಡುವ–ಗುತ್ತಿಗೆ ನೀಡುವ ಬಗ್ಗೆ ಬಹಳ ಉತ್ಸಾಹದಿಂದ ಸರ್ಕಾರ ಮಾತನಾಡುತ್ತಿರುವಂತೆ ಕಾಣುತ್ತದೆ.


ನೀತಿ ಆಯೋಗದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಮಿತಾಭ್ ಕಾಂತ್ ದೇಶದ ಆರ್ಥಿಕ ನೀತಿ ಯಾವ ಮಾರ್ಗದಲ್ಲಿ ನಡೆಯಲಿದೆ ಎಂಬುದನ್ನು ಸೂಚಿಸುತ್ತಾ ಹೇಳಿದ ಮಾತುಗಳು ಇವು: ‘ಭಾರತವು 5 ಟ್ರಿಲಿಯನ್ ಡಾಲರ್ ಜಿಡಿಪಿ ಆರ್ಥಿಕತೆಯಾಗಬೇಕಾದರೆ ಖಾಸಗಿ ವಲಯವು ಸಂಪತ್ತನ್ನು ಉತ್ಪಾದಿಸಬೇಕು. ಆದ್ದರಿಂದ ಮುಂದಿನ ತಿಂಗಳುಗಳಲ್ಲಿ ವಿವಿಧ ವಲಯಗಳಲ್ಲಿನ ಬಹಳಷ್ಟು ಆಸ್ತಿಗಳನ್ನು ಖಾಸಗೀಕರಣಗೊಳಿಸಲಾಗುವುದು’. ಮುಂದುವರಿದು ‘ರಸ್ತೆಗಳು, ವಿಮಾನ ನಿಲ್ದಾಣಗಳು, ಇಂಧನ ಪ್ರಸರಣ ಕೇಂದ್ರಗಳು, ಹಡಗು ನಿಲ್ದಾಣಗಳನ್ನು ಸರ್ಕಾರವು ಖಾಸಗೀಕರಣಗೊಳಿಸುತ್ತದೆ’ (ದಿ ಹಿಂದೂ, 18 ಸೆಪ್ಟೆಂಬರ್, 2019, ಪು:13). ಖಾಸಗೀಕರಣ ಎಲ್ಲಿಯವರೆಗೆ ಹೋಗಬಹುದು ಎಂಬುದಕ್ಕೆ ಇಲ್ಲಿದೆ ಪುರಾವೆ.

ನಮ್ಮ ರೈತರ ಭೂಮಿಯನ್ನು ಅಂಬಾನಿ–ಆದಾನಿ ಮುಂತಾದ ಖಾಸಗಿ ಬಂಡವಾಳಿಗರಿಗೆ ಗುತ್ತಿಗೆ ಕೊಡುವ ನೀತಿಯು ಜಾರಿಗೆ ಬಂದರೂ ಬರಬಹುದು. ನೀರಾವರಿ ಯೋಜನೆಗಳನ್ನು, ಕಾಲುವೆಗಳನ್ನು ಖಾಸಗೀಕರಣ ಮಾಡಿದರೂ ಮಾಡಬಹುದು. ಈಗಾಗಲೆ ಕೇಂದ್ರವು ಕಾಂಟ್ರಾಕ್ಟ್ ಕೃಷಿಗೆ ಕ್ರಮ ತೆಗೆದುಕೊಳ್ಳುತ್ತಿದೆ. ಕೇಂದ್ರ ಸರ್ಕಾರದ ಅಭಿವೃದ್ಧಿ ಪರಿಭಾಷೆಯು ಖಾಸಗೀಕರಣಗೊಂಡಿರುವುದನ್ನು ಪ್ರಧಾನ ಮಂತ್ರಿ, ವಿತ್ತ ಮಂತ್ರಿ, ನೀತಿ ಆಯೋಗದ ಸಿ ಈ ಒ, ಸಂಸದೀಯ ವ್ಯವಹಾರ ಸಚಿವರು ಮುಂತಾದವರ ಮಾತುಗಳಿಂದ ಅರ್ಥ ಮಾಡಿಕೊಳ್ಳಬಹುದು.

ಖಾಸಗೀಕರಣ ಮತ್ತು ಕಾರ್ಪೊರೇಟ್ ಸಂಸ್ಕೃತಿಯ ಬಗ್ಗೆ ಪ್ರಧಾನಮಂತ್ರಿ ಆಗಸ್ಟ್ 15, 2019ರಂದು ಕೆಂಪುಕೋಟೆಯ ಮೇಲಿಂದ ದೇಶವನ್ನುದ್ದೇಶಿಸಿ ಮಾತನಾಡುತ್ತಾ ‘ಸಂಪತ್ತಿನ ಉತ್ಪಾದಕರನ್ನು(ವೆಲ್ಥ್‌ಕ್ರಿಯೇಟರ್ಸ್) ಅನುಮಾನದಿಂದ ನೋಡಬಾರದು. ಅವರನ್ನು ಗೌರವದಿಂದ ಕಾಣಬೇಕು. ಸಂಪತ್ತು ಉತ್ಪಾದನೆಯಾಗದಿದ್ದರೆ ವಿತರಣೆ ಮಾಡಲು ಬರುವುದಿಲ್ಲ. ದೇಶದ ಬಡವರಿಗೆ ಇದರಿಂದ ಅನುಕೂಲವಾಗುವುದಿಲ್ಲ’. ವೆಲ್ಥ್ ಕ್ರಿಯೇಟಾಗಿ ಬಿಟ್ಟರೆ ಬಡವರಿಗೆ ಅದರಲ್ಲಿ ಪಾಲು ದೊರೆಯುತ್ತದೆ ಎಂಬ ಹೊಸ ತತ್ವವನ್ನು ಕೇಂದ್ರ ಸರ್ಕಾರ ಮಂಡಿಸುತ್ತಿದೆ. ಆದರೆ ನಮ್ಮ ಕಳೆದ 50–60 ವರ್ಷಗಳ ಅನುಭವವೇನು? ಯಾವುದನ್ನು ಟ್ರಿಕಲ್ ಡೌನ್ ಅರ್ಥಶಾಸ್ತ್ರ ಎಂದು ಕರೆಯಲಾಗುತ್ತಿದೆಯೋ ಅದು ಎಲ್ಲಿಯೂ ಯಾವತ್ತೂ ಯಶಸ್ವಿಯಾಗಿಲ್ಲ ಎಂಬುದನ್ನು ನೊಬಲ್ ಪ್ರಶಸ್ತಿ ವಿಜೇತ ಜೋಸೆಫ್ ಸ್ಟಿಗ್‌ಲಿಡ್ಜ್ ಹೇಳುತ್ತಾ ಬಂದಿದಾರೆ. ಮೂಲಭೂತವಾಗಿ ಅಸಮಾನತೆ ಮತ್ತು ಶ್ರೇಣಿಕರಣಗಳಿಂದ ಕೂಡಿರುವ ನಮ್ಮ ಸಮಾಜದಲ್ಲಿ ಉತ್ಪಾದನೆಯಾದ ಸಂಪತ್ತು ತನ್ನಷ್ಟಕ್ಕೆ ತಾನು ದೇಶದ ಎಲ್ಲ ವರ್ಗ–ಸಮುದಾಯಗಳಿಗೆ ಹರಿದು ಬರುವುದಿಲ್ಲ. ಪ್ರಧಾನಮಂತ್ರಿ, ವಿತ್ತಮಂತ್ರಿ, ನೀತಿ ಆಯೋಗದ ಉಪಾಧ್ಯಕ್ಷರು-- ಹೀಗೆ ಆಳುವ ವರ್ಗ ಈ ‘ಸಂಪತ್ತಿನ ಸೃಷ್ಟಿಕರ್ತ’ರ ಆರಾಧನೆಯಲ್ಲಿ ಮುಳುಗಿದ್ದಾರೆ. ನಮ್ಮ ವಿತ್ತ ಮಂತ್ರಿ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು ಬಜೆಟ್ಟನಲ್ಲಿ ವೆಲ್ಥ್ ಕ್ರಿಯೇಟರ್ಸ್ ಬಗ್ಗೆ ಹೀಗೆ ಹೇಳುತ್ತಾರೆ:

‘ನಾವು ಕಾನೂನುಬದ್ಧವಾಗಿ ಲಾಭ ಸಂಪಾದನೆಯನ್ನು ಕೀಳಾಗಿ ಅಥವಾ ದುಷ್ಟತನವಾಗಿ ನೋಡುವುದಿಲ್ಲ. ಏಕೆಂದರೆ ಭಾರತದ ಕಾರ್ಪೊರೇಟ್ ಕಂಪನಿಗಳು ಉದ್ಯೋಗದ ನಿರ್ಮಾತೃಗಳು. ಇವರು ದೇಶದ ಸಂಪತ್ತಿನ ಉತ್ಪಾದಕರು’(ಬಜೆಟ್ ಭಾಷಣ 2019–2020). ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು 2019–2020ರ ಬಜೆಟ್ ಭಾಷಣದಲ್ಲಿ ವಿಷನ್ ಫಾರ್ ಡಿಕೇಡ್ ಬಗ್ಗೆ ಮಾತನಾಡುತ್ತಾ 10 ಗುರಿಗಳನ್ನು ಪಟ್ಟಿ ಮಾಡಿದ್ದಾರೆ. ಅವುಗಳು:

(1). ಭೌತಿಕ ಮತ್ತು ಸಾಮಾಜಿಕ ಮೂಲಭೂತ ಸೌಲಭ್ಯಗಳನ್ನು ನಿರ್ಮಿಸುವುದು (2). ಆರ್ಥಿಕತೆಯ ಎಲ್ಲ ವಲಯಗಳನ್ನು ಡಿಜಿಟಲ್ ಇಂಡಿಯಾ ಆವರಿಸುವಂತೆ ಮಾಡುವುದು (3). ಹಸಿರು ಭೂಮಿತಾಯಿ ಮತ್ತು ನೀಲಾಕಾಶದಿಂದ ಕೂಡಿದ ಮಾಲಿನ್ಯ ಮುಕ್ತ ಭಾರತ (4). ಎಮ್ ಎಸ್ ಎಮ್ ಈ, ಸ್ಟಾರ್ಟ್‌ಆಪ್, ರಕ್ಷಣಾ ಉದ್ದಿಮೆಗಳು, ಆಟೋಮೊಬೈಲ್ಸ್, ಎಲೆಕ್ಟ್ರಾನಿಕ್ಸ್, ಬ್ಯಾಟರೀಸ್ ಮತ್ತು ವೈದ್ಯಕೀಯ ಸಲಕರಣೆಗಳು ಮುಂತಾದವುಗಳಿಂದ ಕೂಡಿದ ಮೇಕ್ ಇನ್ ಇಂಡಿಯಾ, (5). ನೀರು, ನೀರಿನ ನಿರ್ವಹಣೆ ಮತ್ತು ಶುಭ್ರ ನದಿಗಳು, (6). ನೀಲಿ ಆರ್ಥಿಕತೆ, (7). ಗಗನಯಾನ, ಚಂದ್ರಯಾನ ಮತ್ತು ಉಪಗ್ರಹ ಕಾರ್ಯಕ್ರಮಗಳನ್ನೊಳಗೊಂಡ ಬಾಹ್ಯಾಕಾಶ ಕಾರ್ಯಕ್ರಮ (8). ಸ್ವಯಂಪೂರ್ಣತೆ–ಆಹಾರೋತ್ಪನ್ನಗಳು, ಬೇಳೆಕಾಳು, ಎಣ್ಣೆ ಬೀಜಗಳು, ಹಣ್ಣು ಮತ್ತು ತರಕಾರಿಗಳ ರಫ್ತು (9). ಆರೋಗ್ಯಕರ ಸಮಾಜ–ಆಯುಷ್ಮಾನ್ ಭಾರತ, ಪೌಷ್ಟಿಕತೆಯಿಂದ ಕೂಡಿದ ಮಹಿಳೆಯರು ಮತ್ತು ಮಕ್ಕಳು ಹಾಗೂ ಹಿರಿಯ ನಾಗರಿಕರ ರಕ್ಷಣೆ, (10). ಭಾರತ ತಂಡ, ಜನ ಭಾಗೀದಾರಿ, ಕನಿಷ್ಟ ಸರ್ಕಾರ: ಗರಿಷ್ಟ ಪರಿಪಾಲನೆ. ಇದು ಕೇಂದ್ರ ಸರ್ಕಾರದ ಮುಂದಿನ 10 ವರ್ಷಗಳಿಗೆ ಕಾರ್ಯನೀತಿ. ಅತ್ಯಂತ ವಿಷಾದದ ಸಂಗತಿಯೆಂದರೆ ಇಲ್ಲಿ ಹತ್ತು ಗುರಿಗಳಿಂದ ಕೂಡಿದ ವಿಷನ್ ಫಾರ್ ಡಿಕೇಡ್ ಕಾರ್ಯನೀತಿಯಲ್ಲಿ ಕೃಷಿ ಬಗ್ಗೆ ಉಲ್ಲೇಖವಿಲ್ಲವಷ್ಟೇ ಅಲ್ಲ: ಆ ನುಡಿಯೂ ಕೂಡ ಇಲ್ಲ. ಕೇಂದ್ರ ಸರ್ಕಾರವು ‘ಕೃಷಿ’ ‘ಒಕ್ಕಲುತನ’ವನ್ನು ಏಕೆ ಕೈಬಿಟ್ಟಿದೆ? ಇದು ಯಾವುದರ ಸೂಚನೆಯಾಗಿದೆ? ನಮ್ಮ ಕೇಂದ್ರ ಸರ್ಕಾರದ ಕಾರ್ಯನೀತಿಯು ನಗರಮುಖಿಯಾಗಿರುವುದು, ಉದ್ದಿಮೆ ಪರವಾಗಿರುವುದು, ಶ್ರೀಮಂತರ ಪರವಾಗಿರುವುದು ನಿಸ್ಸಂಶಯ.



ಈ ವೆಲ್ಥ್ ಕ್ರಿಯೇಟರ್ಸ್, ಸಂಪೂರ್ಣ ಖಾಸಗೀಕರಣ, ಲಾಭಗಳಿಕೆಯ ಪವಿತ್ರೀಕರಣ, ಕಾರ್ಪೊರೇಟ್ ಸಂಸ್ಕೃತಿಯ–ಕುಳಗಳ ಆರಾಧನೆ, ನಗರೀಕರಣದ ಅಲೆ --- ಇವೆಲ್ಲವುಗಳ ಮೂಲದಲ್ಲಿರುವ ತತ್ವ ಏನು?

‘ಶ್ರೀಮಂತರಿಗೆ ಯಾವುದು ಉತ್ತಮವಾದುದಾಗಿರುತ್ತದೋ ಅದು ಬಡವರಿಗೂ ಉತ್ತಮವಾದುದಾಗಿರುತ್ತದೆ’. ಇದನ್ನು ಹೇಗೆ ಒಪ್ಪಿಕೊಳ್ಳುವುದು? ನಿಜಕ್ಕೂ ಇದು ಸಾಧ್ಯವೇ? ಯಾವುದು ಮುಖೇಶ್ ಅಂಬಾನಿಗೆ ಇಷ್ಟವೋ ಅಥವಾ ಮೆಚ್ಚುಗೆಯೋ ಅದು ನಮಗೆ ಒಪ್ಪಿಗೆಯಾಗುವುದು ಹೇಗೆ?

ನಮಗೆ ಅರ್ಥಶಾಸ್ತ್ರದಲ್ಲಿ ಪರಿಶ್ರಮವು ಎಲ್ಲ ಮೌಲ್ಯದ ಮೂಲ ಎಂದು ಹೇಳಿಕೊಡಲಾಗಿದೆ. ಇದನ್ನು ಉಲ್ಟ ಮಾಡುವ ಕೆಲಸದಲ್ಲಿ ನಮ್ಮ ಸರ್ಕಾರಗಳು ನಿರತವಾಗಿವೆ. ಇವರ ಪ್ರಕಾರ ವೆಲ್ಥ್ ಕ್ರಿಯೇಟರ್ಸ್ ಯಾರು ಅಂದರೆ ಶ್ರೀಮಂತರು, ಕೈಗಾರಿಕಾ ಕುಳಗಳು, ಉದ್ದಿಮೆಗಾರರು ವಿನಾ ರೈತರಲ್ಲ, ಕಾರ್ಮಿಕರಲ್ಲ, ದುಡಿಮೆಗಾರರಲ್ಲ. ಇಲ್ಲಿ ಮಹಿಳೆಯರಿಗಂತು ಸ್ಥಾನವೂ ಇಲ್ಲ, ಮಾನವೂ ಇಲ್ಲ. ಈ ವೆಲ್ತ್ ಕ್ರಿಯೇಟರುಗಳಿಗೆ ತೆರಿಗೆಯಲ್ಲಿ ವಿನಾಯಿತಿ ನೀಡಿದರೆ ಅದು ಉತ್ಪಾದಕ ಕ್ರಿಯೆ, ಇವರು ಎಸಗುವ ತಪ್ಪುಗಳಿಗೆ ದಂಡ ವಿಧಿಸದಿರುವುದು ಉತ್ಪಾದಕ, ಇವರಿಗೆ ಅನುಕೂಲಕರ ಕರಾರುಗಳಲ್ಲಿ ಬ್ಯಾಂಕು ಸಾಲ ನೀಡಿದರೆ ಅದು ಉತ್ಪಾದಕ,


ಆದರೆ ಬಡವರಿಗೆ, ರೈತರಿಗೆ, ಗ್ರಾಮೀಣರಿಗೆ, ದುಡಿಮೆಗಾರರಿಗೆ–ಕಾರ್ಮಿಕರಿಗೆ ಮತ್ತು ಮಹಿಳೆಯರಿಗೆ ತೆರಿಗೆ ವಿನಾಯಿತಿ ನೀಡಿದರೆ, ಕಾನೂನು ಉಲ್ಲಂಘನೆಯಾದಾಗ ದಂಡ ವಿಧಿಸದಿದ್ದರೆ, ಬಡವರಿಗೆ ಅನ್ನಭಾಗ್ಯ ನೀಡಿದರೆ – ಅನುತ್ಪಾದಕ, ಸಂಪನ್ಮೂಲಗಳ ಅಪವ್ಯಯ. ಅನ್ನಭಾಗ್ಯದ ಬಗ್ಗೆ ಪ್ರಸಿದ್ಧ ಹೇಳಿಕೆ ಇದು: ‘ಇದು ತೆರಿಗೆದಾರರ ಹಣದ ಲೂಟಿ’ – ಟಿ. ವಿ. ಮೋಹನದಾಸ ಪೈ.

ಕೇಂದ್ರ ಸರ್ಕಾರದ ಈ ಪ್ರಣಾಳಿಕೆಯ ಬಗ್ಗೆ ರೈತರು, ರೈತ ಸಂಘಟನೆಗಳು, ಕೃಷಿ ಕಾರ್ಮಿಕರು, ಯುವ ಜನರು, ಮಹಿಳೆಯರು –ಗಂಭೀರವಾಗಿ ಯೋಚಿಸಬೇಕಾದ ಅಗತ್ಯವಿದೆ. ಈ ಕಾರ್ಯನೀತಿ ಪ್ರಣಾಳಿಕೆಯಲ್ಲಿ ಅಭಿವೃದ್ಧಿಯ ಚಾಲಕ ಶಕ್ತಿಗಳು ಕೈಗಾರಿಕಾ ಕುಳಗಳೇ ವಿನಾ ಕಾರ್ಮಿಕರಲ್ಲ, ರೈತರಲ್ಲ. ಭೂರಹಿತ ದಿನಗೂಲಿ ದುಡಿಮೆಗಾರರಲ್ಲ. ಯಾವುದನ್ನು ಆರ್ಥಿಕ ಸಮೀಕ್ಷೆಯಲ್ಲಿ ‘ಕೀ ಡ್ರೈವರ್’ ಎಂದು ಕರೆಯಲಾಗಿದೆಯೋ ಅಂತಹ ಶಕ್ತಿ ರೈತರಿಗೆ, ದುಡಿಮೆಗಾರರಿಗೆ, ಕಾರ್ಮಿಕರಿಗೆ, ಮಹಿಳೆಯರಿಗೆ ಇಲ್ಲವೆನ್ನುವುದು ಪ್ರಧಾನಮಂತ್ರಿಗಳ ‘ವೆಲ್ಥ್ ಕ್ರಿಯೇಟರ್ಸ್’ ಎಂಬ ನುಡಿಯಿಂದ, ವಿತ್ತಮಂತ್ರಿ ಅವರ ‘ಲೆಜಿಟಮೇಟ್ ಪ್ರಾಫಿಟ್ ಅರ್ನರ್ಸ್’ ಎಂಬ ನುಡಿಯಿಂದ, ಅಮಿತಾಬ್ ಕಾಂತ್ ಅವರ ‘ಪ್ರೈವೈಟೈಸೇಶನ್’ ಎಂಬ ನುಡಿಯಿಂದ ಸ್ಪಷ್ಟವಾಗುತ್ತದೆ.

ಇಂದು ಪ್ರಧಾನಮಂತ್ರಿ ಐದು ಟ್ರಿಲಿಯನ್ ಡಾಲರ್ ಜಿಡಿಪಿ ಬಗ್ಗೆ ಮಾತನಾಡಿದರೆ ರಕ್ಷಣಾ ಮಂತ್ರಿ 10 ಟ್ರಿಲಿಯನ್ ಡಾಲರ್ ಬಗ್ಗೆ ಮಾತನಾಡುತ್ತಿದ್ದಾರೆ. ಇದರ ಜೊತೆಗೆ ಕೃಷಿಕರ ವರಮಾನವನ್ನು 2022 ರಷ್ಟೊತ್ತಿಗೆ ದುಪ್ಪಟ್ಟು ಮಾಡುವ ಬಗ್ಗೆಯೂ ಮಾತನಾಡಲಾಗುತ್ತಿದೆ. ನೀತಿ ಆಯೋಗವು ಇದನ್ನು ಪುನರುಚ್ಚರಿಸುತ್ತಿದೆ. ಆದರೆ ಅಭಿವೃದ್ಧಿ

ಪುಟ 14 ಕ್ಕೆ

ಆರೆಸ್ಸೆಸ್ ಮುಖ್ಯಸ್ಥರ ಹಿಟ್ಲರ್–ಸ್ವರೂಪೀ ಪ್ರವಚನ



ವ್ಯಂಗ್ಯಚಿತ್ರ: ಕೃತ್ತಿಕಾ ಸುಸಾರ್ಲ

"'ಲಿಂಚಿಂಗ್' ಎಂಬಂತಹ ಭಾರತಕ್ಕೆ ಹೊರತಾದ, ಹೊರಗಿನ ಪದಗಳನ್ನು ಬಳಸಿ...

–ಮೋಹನ ಭಾಗ್ವತ್



ದೇಶದ ಸರ್ವೋಚ್ಚ ನ್ಯಾಯಾಲು ಕಳೆದ ವರ್ಷ "ಜನಜಂಗುಳಿ ರಾಜ್ಯಭಾರದ ಭಯಾನಕ ಕೃತ್ಯಗಳು" ಎಂದು ಖಂಡಿಸಿದ್ದಕ್ಕೆ ತದ್ವಿರುದ್ಧವಾಗಿ ಆರೆಸ್ಸೆಸ್ ಮುಖ್ಯಸ್ಥರು ವಿಜಯದಶಮಿಯ ದಿನ ಇಂತಹ ಕೃತ್ಯಗಳು ನಡೆಯುತ್ತಿವೆ ಎಂಬುದನ್ನೇ ನಿರಾಕರಿಸಿದ್ದಾರೆ. ಇದು ಆರೆಸ್ಸೆಸ್‌ನ ಇಬ್ಬಂದಿತನವನ್ನು ಮತ್ತು ಉನ್ಮತ್ತ ಕೋಮುವಾದಿ ದೃಷ್ಟಿಕೋನವನ್ನು ಮತ್ತೆ ಬಯಲಿಗೆಳೆದಿದೆ. ಜತೆಗೆ ಮೋದಿ ಸರಕಾರದ ಆರ್ಥಿಕ ಧೋರಣೆಗಳಿಗೆ, ಜಮ್ಮು ಮತ್ತು ಕಾಶ್ಮೀರವನ್ನು ಕಳಚಿ ಹಾಕಿದ್ದಕ್ಕೆ ಪ್ರಶಂಸೆ ದೇಶದಲ್ಲಿ ಬಲಪಂಥೀಯ ಕ್ರೋಢೀಕರಣ ನಡೆದಿರುವುದರ ಉದಾಹರಣೆಯಾಗಿದೆ, ಪ್ರಜಾಪ್ರಭುತ್ವ, ಜಾತ್ಯತೀತತೆ, ಜನತೆಯ ಜೀವನಾಧಾರಗಳು ಮತ್ತು ಮೂಲಭೂತ ಹಕ್ಕುಗಳ ಮೇಲೆ ಹೊಸ ದಾಳಿಗಳು ಬರಲಿವೆ ಎಂಬುದರ ಸಂಕೇತವನ್ನು ನೀಡಿದೆ.



ಪ್ರಕಾಶ ಕಾರಟ್

ಆರೆಸ್ಸೆಸ್ ಮುಖ್ಯಸ್ಥರಾದ ಮೋಹನ ಭಾಗ್ವತ್‌ರವರ ವಿಜಯದಶಮಿ ಭಾಷಣ ಆರೆಸ್ಸೆಸ್‌ನಲ್ಲಿ ತುಂಬಿರುವ ಫ್ಯಾಸಿಸ್ಟ್ ಸ್ವರೂಪದ ಸಿದ್ಧಾಂತದ ಇಣುಕು ನೋಟವನ್ನು ಪ್ರಕಟಪಡಿಸಿದೆ. ಇವರು ಗುಂಪುಗಟ್ಟಿ ಕೊಲ್ಲುವ ಘಟನೆಗಳನ್ನು 'ಲಿಂಚಿಂಗ್' ಎಂದು ಹೇಳುವುದರ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. "ಇಂತಹ ಘಟನೆಗಳಿಗೆ 'ಲಿಂಚಿಂಗ್' ಎಂಬಂತಹ ಭಾರತಕ್ಕೆ ಹೊರತಾದ, ಹೊರಗಿನ ಪದಗಳನ್ನು ಬಳಸಿ ಹಣೆಪಟ್ಟಿ ಹಚ್ಚಿ, ನಮ್ಮ ದೇಶದ, ಮತ್ತು ಸಮಸ್ತ ಹಿಂದೂ ಸಮಾಜದ ಹೆಸರುಗೆಡಿಸುವ ಹಾಗೂ ತಥಾಕಥಿತ ಅಲ್ಪಸಂಖ್ಯಾತರ ನಡುವೆ ಭೀತಿ ಹುಟ್ಟಿಸುವ ಪ್ರಯತ್ನಗಳು ನಡೆಯುತ್ತಿವೆ" ಎಂದು ಅವರು ಹೇಳಿದ್ದಾರೆ.

ಈ ಒಂದು ವಾಕ್ಯ ಆರೆಸ್ಸೆಸ್‌ನ ಇಬ್ಬಂದಿತನವನ್ನು ಮತ್ತು ಉನ್ಮತ್ತ ಕೋಮುವಾದಿ ದೃಷ್ಟಿಕೋನವನ್ನು ಬಯಲಿಗೆಳೆದಿದೆ. ಒಂದೇ ಏಟಿನಲ್ಲಿ ಅವರು ಬಡಿದು ಸಾಯಿಸುವ ಕೃತ್ಯಗಳು ನಡೆಯುತ್ತಿವೆ ಎನ್ನುವುದನ್ನೇ ನಿರಾಕರಿಸುತ್ತಿದ್ದಾರೆ. ಇದಕ್ಕೆ (ಇಂಗ್ಲಿಷ್‌ನಲ್ಲಿ ಬಳಸುವ) 'ಲಿಂಚಿಂಗ್' ಪದಕ್ಕೆ ಪ್ರಾದೇಶಿಕ–ಸಾಂಸ್ಕೃತಿಕ ಧ್ವನಿಯೇನೂ ಇಲ್ಲ. ಅಲ್ಲದೆ, ತನ್ನ ಭಾಷಣದಲ್ಲಿ ಭಾಗ್ವತ್ ಈ ರೀತಿ ಬಡಿದು ಸಾಯಿಸುವುದನ್ನು ಖಂಡಿಸುವ ಪ್ರಯತ್ನ ಸಮಸ್ತ ಹಿಂದೂ ಸಮಾಜದ ಹೆಸರುಗೆಡಿಸುವ ಪ್ರಯತ್ನ ಎಂದು ಆಪಾದಿಸುತ್ತಾರೆ. ಗೋರಕ್ಷಕರೆಂಬ ಕಾವಲುಕೋರರು ಇದಕ್ಕೆ ಅಲ್ಪಸಂಖ್ಯಾತರನ್ನೇ ಗುರಿ ಮಾಡುತ್ತಾರೆ ಎಂಬುದನ್ನು ಒಪ್ಪಲೂ ಸಿದ್ಧರಿಲ್ಲ. ಇಂತಹ ಘಟನೆಗಳು ಏಕಪಕ್ಷೀಯವಾಗಿಲ್ಲ ಎನ್ನುವ ಅವರು 'ತಥಾಕಥಿತ' ಎನ್ನುತ್ತ ಅಲ್ಪಸಂಖ್ಯಾತ ಸಮುದಾಯಗಳನ್ನು ಗುರುತಿಸುವುದೂ ಇಲ್ಲ.

ಹತ್ತಾರು ಜನಗಳು ಈ ಗುಂಪು ದಾಳಿಗಳಿಂದ ಪ್ರಾಣ ಕಳಕೊಂಡಿದ್ದಾರೆ ಎಂದು ಭಾರತದ ಸರ್ವೋಚ್ಚ ನ್ಯಾಯಾಲಯ ಜುಲೈ 2018ರಲ್ಲಿ ಇವನ್ನು "ಜನಜಂಗುಳಿ ರಾಜ್ಯಭಾರದ ಭಯಾನಕ ಕೃತ್ಯಗಳು" ಎಂದು ಖಂಡಿಸುವಂತೆ ಮಾಡಿದೆ. ಅದು ಇವನ್ನು ತಡೆಯುವ ಮತ್ತು ಸರಿಪಡಿಸುವ ಕ್ರಮಗಳನ್ನು ಹೇಳಿತು. ಸಂಸತ್ತು ಗೋವುಗಳ ಹೆಸರಿನ ಕಾವಲುಕೋರತನವನ್ನು ಮತ್ತು ಬಡಿದುಹಾಕುವ ಜನಜಂಗುಳಿಯನ್ನು ನಿಭಾಯಿಸುವ ಒಂದು ಲಿಂಚಿಂಗ್–ವಿರೋಧಿ ಕಾನೂನು ತರಬೇಕು ಎಂದೂ ಅದು ಹೇಳಿತು.

ವಾಸ್ತವವಾಗಿ ಆರೆಸ್ಸೆಸ್ ಮುಖ್ಯಸ್ಥರು ಇದು ಹಿಂದೂ ಸಮಾಜದ ಹೆಸರುಗೆಡಿಸುವ ಪ್ರಯತ್ನ ಎನ್ನುತ್ತ ಇಂತಹ ಘಟನೆಗಳು ನಡೆದೇ ಇಲ್ಲ ಎಂಬ ಸವಾಲು ಹಾಕುತ್ತಾರೆ. ಅವರ ಪ್ರಕಾರ ಕೆಲವು ಘಟನೆಗಳನ್ನು ಉದ್ದೇಶಪೂರ್ವಕವಾಗಿ ಸೃಷ್ಟಿಸಲಾಗಿದೆ, ಇನ್ನು ಕೆಲವನ್ನು ವಿಕೃತಗೊಳಿಸಿ ಪ್ರಕಟಿಸಲಾಗಿದೆ. ಅಷ್ಟೇ ಅಲ್ಲ, ಸುಪ್ರಿಂ ಕೋರ್ಟ್ ಹೇಳಿದುದಕ್ಕೆ ತದ್ವಿರುದ್ಧವಾಗಿ ಇಂತಹ ಘಟನೆಗಳನ್ನು ನಿಭಾಯಿಸಲು ಈಗಿರುವ ಕಾನೂನುಗಳೇ ಸಾಕು ಎಂದಿದ್ದಾರೆ ಆರೆಸ್ಸೆಸ್ ಮುಖ್ಯಸ್ಥರು.

ಇಂತಹ ಒಂದು ದೃಷ್ಟಿಕೋನದಿಂದಾಗಿ ಆಳುವ ಆರೆಸ್ಸೆಸ್/ಬಿಜೆಪಿ ಕೂಟ ಈ ವಿಷಯದಲ್ಲಿ ಸುಪ್ರಿಂ ಕೋರ್ಟಿನ ನಿರ್ದೇಶನಗಳನ್ನು ಉಪೇಕ್ಷಿಸಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಮೋದಿ ಸರಕಾರ ಸಂಸತ್ತಿನಲ್ಲಿ ಲಿಂಚಿಂಗ್–ವಿರೋಧಿ ಕಾನೂನು ತರಲು ಸಿದ್ಧವೂ ಇಲ್ಲ, ಇಂತಹ ಬಡಿದು ಹಾಕುವ ಘಟನೆಗಳ ತನಿಖೆಗಳನ್ನು ತ್ವರಿತವಾಗಿ ಮಾಡಬೇಕು, ವಿಶೇಷ ಕೋರ್ಟುಗಳು ಇವುಗಳ ವಿಚಾರಣೆ ಮಾಡಬೇಕು ಎಂಬ ನಿರ್ದೇಶನಗಳನ್ನು ಸಂಬಂಧಪಟ್ಟ ರಾಜ್ಯ ಸರಕಾರಗಳು ತತ್ಪರತೆಯಿಂದ ಕೈಗೆತ್ತಿಕೊಳ್ಳುವುದೂ ಇಲ್ಲ.

ಭಾಗ್ವತ್ ಪ್ರಕಾರ, 'ಲಿಂಚಿಂಗ್' ಕೂಗು ಎಬ್ಬಿಸಿ ದೇಶದ ಮತ್ತು ಹಿಂದೂಗಳ "ಹೆಸರುಗೆಡಿಸಲು" ಒಂದು ಪಿತೂರಿಯನ್ನು ಸೃಷ್ಟಿಸಲಾಗಿದೆ. ಇಂತಹ ವಿಕೃತ ಯೋಚನೆಯಿಂದಾಗಿಯೇ 49 ಪ್ರತಿಷ್ಠಿತ ನಾಗರಿಕರು, ಕಲಾವಿದರು, ಮತ್ತು ಬುದ್ಧಿಜೀವಿಗಳು ಪ್ರಧಾನ ಮಂತ್ರಿಗಳಿಗೆ ಬರೆದ ಒಂದು ಪತ್ರವನ್ನು 'ರಾಜದ್ರೋಹ'ದ ಕೃತ್ಯ ಎಂದು ಕಂಡರು, ಅವರ ವಿರುದ್ಧ ಎಫ್‌ಐಆರ್ ದಾಖಲಿಸಿದರು.

"ರಾಷ್ಟ್ರದ ಗುರುತನ್ನು, ನಮ್ಮೆಲ್ಲರ ಸಾಮಾಜಿಕ ಗುರುತನ್ನು ಮತ್ತು ದೇಶದ ಸ್ವರೂಪದ ಗುರುತನ್ನು" ಆರೆಸ್ಸೆಸ್ "ಭಾರತ ಅಂದರೆ ಹಿಂದೂಸ್ಥಾನ, ಹಿಂದೂರಾಷ್ಟ್ರ" ಎಂದು ಕಾಣುವುದಾಗಿ ಗಟ್ಟಿಯಾಗಿ ಸಾರಿದ್ದಾರೆ. ಎಲ್ಲ ಭಾರತೀಯರೂ ಹಿಂದೂಗಳು ಎಂದು ಪುನರುಚ್ಚರಿಸುತ್ತ ಅವರು "ಹಿಂದು ಸಮಾಜವನ್ನು ಮತ್ತು ಹಿಂದುತ್ವವನ್ನು ಹಲವಾರು ಆಧಾರಹೀನ ಆಪಾದನೆಗಳ ಮೂಲಕ ದೂಷಿಸುವ ಒಂದು ರಾಗಾಲಾಪನೆಯ ಪ್ರಯತ್ನ ಇದೆ" ಎಂಬ ಆರೆಸ್ಸೆಸ್‌ನ ಎಂದಿನ ರಾಗಕ್ಕೆ ಆತುಕೊಂಡಿದ್ದಾರೆ. 'ಸ್ವಭಾಷಾ', 'ಸ್ವಭೂಷ'. ಮತ್ತು 'ಸ್ವಸಂಸ್ಕೃತಿ'ಯೆಂದು ಮಾತಾಡುತ್ತ ಒಂದು ರಾಷ್ಟ್ರ, ಒಂದು ಭಾಷೆ, ಒಂದು ಸಂಸ್ಕೃತಿ ಎಂಬ ಆರೆಸ್ಸೆಸ್ ವಿಚಾರಕ್ಕೆ ಮತ್ತೆ ಜೀವ ಕೊಟ್ಟಿದ್ದಾರೆ.


ಹಿಂದುತ್ವ ಕಣ್ಣೋಟವನ್ನು ಪ್ರತಿಪಾದಿಸುತ್ತ ಭಾಗ್ವತ್ ಪ್ರಸಕ್ತ ಸನ್ನಿವೇಶದ ಮತ್ತೊಂದು ಅಂಶವನ್ನು, ಅಂದರೆ ಹಿಂದುತ್ವ ಮತ್ತು ಕಾರ್ಪೊರೇಟ್ ಬಂಡವಾಳದ ಬೆಸುಗೆಯನ್ನು, ಎತ್ತಿಕೊಳ್ಳುತ್ತಾರೆ. ಮೋದಿ ಸರಕಾರದ ವಿದೇಶಿ ಬಂಡವಾಳಕ್ಕೆ ವಿಪರೀತ ಮುಸಲಾವಣೆಯನ್ನು ಮತ್ತು ಖಾಸಗೀಕರಣದ ರಭಸವನ್ನು ಅವರು ಅನುಮೋದಿಸಿದ್ದಾರೆ. "ಆರ್ಥಿಕ ವ್ಯವಸ್ಥೆಯನ್ನು ಬಲಪಡಿಸಲು" ಹಲವು ವಲಯಗಳಲ್ಲಿ ಎಫ್‌ಡಿಐ ಮತ್ತು ಸಾರ್ವಜನಿಕ ವಲಯದ ಉದ್ದಿಮೆಗಳ ಶೇರು ಹಿಂಪಡಿಕೆ ಅಗತ್ಯವಾಗಿದೆ ಎಂದು ಅವರು ಹೇಳುತ್ತಾರೆ. ನಿಜ, ಇದರೊಂದಿಗೆ ಎಂದಿನ ಸ್ವಾವಲಂಬನೆ, ಸ್ವದೇಶಿಯ ಟೊಳ್ಳು ಮಾತೂ ಇದೆ. ಆದರೆ ಇದರಿಂದ ಆರೆಸ್ಸೆಸ್ ಬಿಜೆಪಿಯ ನವ–ಉದರವಾದಿ ಧೋರಣೆಗಳನ್ನು ಪೂರ್ಣವಾಗಿ ಬೆಂಬಲಿಸುತ್ತದೆ ಎಂಬುದನ್ನು ಮರೆಮಾಚಲು ಸಾಧ್ಯವಿಲ್ಲ. ದೇಶದ ಕಲ್ಲಿದ್ದಲು ಸಂಪನ್ಮೂಲಗಳನ್ನು ಸೂರೆಗೊಳ್ಳಲು ವಿದೇಶಿ ಕಂಪನಿಗಳಿಗೆ ಆಹ್ವಾನ ನೀಡಿರುವುದನ್ನಾಗಲೀ, ರಕ್ಷಣಾ ಉತ್ಪಾದನೆಯನ್ನು ಮಾರುವ ನಿರ್ಧಾರವನ್ನಾಗಲೀ ಯಾವುದೇ ರೀತಿಯಲ್ಲಿ ಸ್ವಾವಲಂಬನೆ ಎಂದು ಕಲ್ಪಿಸಿಕೊಳ್ಳುವುದೂ ಸಾಧ್ಯವಿಲ್ಲ.

ಹಿಂದುತ್ವ ಸರ್ವಾಧಿಕಾರಶಾಹಿಯ ಪ್ರಧಾನ ಚಾಲಕ ಶಕ್ತಿಯಾಗಿರುವ ಭಾಗ್ವತ್ ಸಂವಿಧಾನದ ಕಲಮು 370ನ್ನು ನಿರ್ಮೂಲಗೊಳಿಸುವ ಮತ್ತು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಮುರಿದು ಹಾಕುವ ಮೋದಿ ಸರಕಾರದ ಕ್ರಮಗಳನ್ನು ಪ್ರಶಂಸಿಸಿದ್ದಾರೆ. ಆರೆಸ್ಸೆಸ್‌ನ ಅಖಂಡ ಭಾರತ ಕಣ್ಣೋಟದಲ್ಲಿ ಒಕ್ಕೂಟ ತತ್ವಕ್ಕೆ ಜಾಗವೇ ಇಲ್ಲವಲ್ಲ.

ಆರೆಸ್ಸೆಸ್ ಮುಖ್ಯಸ್ಥರ ಭಾಷಣ ದೇಶದಲ್ಲಿ ಬಲಪಂಥೀಯ ಕ್ರೋಢೀಕರಣ ನಡೆದಿರುವುದರ ಉದಾಹರಣೆ. ಇದು ಪ್ರಜಾಪ್ರಭುತ್ವ, ಜಾತ್ಯತೀತತೆ, ಜನತೆಯ ಜೀವನಾಧಾರಗಳು ಮತ್ತು ಮೂಲಭೂತ ಹಕ್ಕುಗಳ ಮೇಲೆ ಹೊಸ ದಾಳಿಗಳು ಬರಲಿವೆ ಎಂಬುದರ ಸಂಕೇತವನ್ನು ನೀಡಿದೆ.



ವ್ಯಂಗ್ಯಚಿತ್ರ: ನಾಲ ಪೊನ್ನಪ್ಪ



ಗೋರ್ಥಶಾಸ್ತ್ರಜ್ಞ

ವ್ಯಂಗ್ಯಚಿತ್ರ: ಮಿಕ ಅಜೀಜ್

ಭವ್ಯ ಹೋರಾಟಗಳ, ಕೊಡುಗೆಗಳ ನೂರು ವರ್ಷಗಳು



ಕಮ್ಯುನಿಸ್ಟ್ ಪಕ್ಷ ತಾನು ನಡೆಸಿದ ಹೋರಾಟಗಳ ಮೂಲಕ ಎಲ್ಲರನ್ನೂ ಒಳಗೊಳ್ಳುವ ಭಾರತದ ಪರಿಕಲ್ಪನೆ ವಿಕಾಸಗೊಳ್ಳುವಲ್ಲಿ, ಅದನ್ನು ರಾಷ್ಟ್ರೀಯ ಆಂದೋಲನದ ಅಜೆಂಡಾಕ್ಕೆ ತರುವಲ್ಲಿ ಒಂದು ಬಹಳ ಮಹತ್ವದ ಪಾತ್ರವನ್ನು ವಹಿಸಿತು. ಇಂದು ಕೋಮುವಾದಿ ಅಬ್ಬರದ ಹುಸಿ ರಾಷ್ಟ್ರವಾದ ನಮ್ಮ ಸಂವಿಧಾನಿಕ ವ್ಯವಸ್ಥೆಯ ಮೇಲೆ ದಾಳಿಗಳನ್ನು ನಡೆಸುತ್ತಿರುವಾಗ, ಅದನ್ನು ಎದುರಿಸುವಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ಶತಮಾನೋತ್ಸವದ ಆಚರಣೆ ಒಂದು ಸ್ಫೂರ್ತಿಯಸ್ರೋತವೂ ಮತ್ತು ನಮ್ಮ ನ್ಯೂನತೆಗಳನ್ನು ನಿವಾರಿಸಿಕೊಂಡು ಕಮ್ಯುನಿಸ್ಟ್ ಆಂದೋಲನವನ್ನು ಗಟ್ಟಿಗೊಳಿಸುವ ಒಂದು ಸಂದರ್ಭವೂ ಆಗಿದೆ. ಮೌಲಾನಾ ಹಸ್ರತ್ ಮೊಹಾನಿ ರಚಿಸಿದ ಮತ್ತು ಭಗತ್ ಸಿಂಗ್ ಅಮರಗೊಳಿಸಿದ ಘೋಷಣೆ–ಇಂಕ್‌ಲಾಬ್ ಜಿಂದಾಬಾದ್– ಒಂದು ರಣಕಹಳೆಯಾಗಿದೆ.

ಸೀತಾರಾಮ್ ಯೆಚುರಿ

ಭಾರತ ಕಮ್ಯುನಿಸ್ಟ್ ಪಕ್ಷ ಸ್ಥಾಪನೆಯಾದ ನಂತರದ ಒಂದು ಶತಮಾನ ಆಧುನಿಕ ಭಾರತದ ಇತಿಹಾಸದಲ್ಲಿ ಒಂದು ಭವ್ಯ ಅಧ್ಯಾಯ–ಸ್ವಾತಂತ್ರ್ಯ ಹೋರಾಟದ ಅವಧಿಯಲ್ಲಿ ಭೀಷಣ ಹೋರಾಟಗಳು, ಅಸಂಖ್ಯ ಕ್ರಾಂತಿಕಾರಿಗಳ ಅಪಾರ ತ್ಯಾಗ–ಬಲಿದಾನಗಳು ಮತ್ತು ನಂತರ ಜನಗಳ ಪ್ರಶ್ನೆಗಳನ್ನು ರಾಷ್ಟ್ರೀಯ ಅಜೆಂಡಾಕ್ಕೆ ತರುವಲ್ಲಿ ಮಹತ್ವದ ಕೊಡುಗೆಗಳ ಒಂದು ಇತಿಹಾಸ. ಆರಂಭದಿಂದಲೇ, ಕಮ್ಯುನಿಸ್ಟರು ಸಮಕಾಲೀನ, ವಿಕಸನಗೊಳ್ಳುತ್ತಿದ್ದ ಬೆಳವಣಿಗೆಗಳ ಒಂದು ವೈಜ್ಞಾನಿಕ ಭೌತವಾದೀ ವಿಶ್ಲೇಷಣೆಯನ್ನು ಒದಗಿಸಿದರು ಮತ್ತು ಜನತೆಯ ಜೀವನಾಧಾರಗಳನ್ನು ಹಾಗೂ ಸ್ವತಂತ್ರ ಭಾರತದ ರಾಜಕೀಯ ರಚನೆಗಳನ್ನು ಉತ್ತಮಪಡಿಸಲು ಬೇಕಾದ ನಿವಾರಣೋಪಾಯಗಳನ್ನು ಮುಂದಿಡುತ್ತ ಬಂದರು. ಇದು ಒಂದು ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯವು, ಅಂತಿಮವಾಗಿ ನಮ್ಮ ರಾಜಕೀಯ ಸ್ವಾತಂತ್ರ್ಯವನ್ನು ನಮ್ಮ ಎಲ್ಲ ಜನಗಳ ಆರ್ಥಿಕ ವಿಮೋಚನೆಯಾಗಿ ಪರಿವರ್ತಿಸುವ ದಿಕ್ಕಿನಲ್ಲಿ ಮುನ್ನಡೆಯುವ, ಇಂತಹ ಮುನ್ನಡೆ ಸಮಾಜವಾದದ ಅಢಯಲ್ಲಿ ಮಾತ್ರ ಸಾಧ್ಯ ಎಂಬ ಕಣ್ಣೋಟವನ್ನು ಆಧರಿಸಿತ್ತು.

ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯಿಂದ ಆರಂಭಿಸಿ ಇಂತಹ ಕೊಡುಗೆಗಳ ಶ್ರೀಮಂತ ವಿವರಗಳನ್ನು ಈ ಶತಮಾನೋತ್ಸವದ ಒಂದು ವರ್ಷವಿಡೀ ದಾಖಲಿಸಲಾಗುವುದು. ಆದ್ದರಿಂದ ಇಲ್ಲಿ ನಾವು ಕೆಲವು ಮಹತ್ವದ ಪ್ರಶ್ನೆಗಳನ್ನಷ್ಟೇ ಪರಿಶೀಲಿಸೋಣ.

ಮೂಲಗಳು

ಮೊದಲ ವಿಶ್ವ ಯುದ್ಧದ ಮೊದಲು ಮತ್ತು ಯುದ್ಧದ ಅವಧಿಯಲ್ಲಿ ರಾಷ್ಟ್ರೀಯ ಆಂದೋಲನದ ಒಳಗೆ ಮಂದಗಾಮಿ ಮುಖಂಡರುಗಳು ಮತ್ತು ಕ್ರಾಂತಿಕಾರಿ ಕಾರ್ಯಕರ್ತರ ನಡುವೆ ಒಂದು ಹೋರಾಟ ಕಾಣ ಬಂತು. ಇದು 1917ರಲ್ಲಿ ರಷ್ಯನ್ ಕ್ರಾಂತಿಯ ವಿಜಯವು ಜಗತ್ತಿನ ಇತರ ಎಲ್ಲ ಕಡೆಗಳಂತೆ ಭಾರತದಲ್ಲೂ ಕ್ರಾಂತಿಕಾರಿಗಳಲ್ಲಿ ಸ್ಫೂರ್ತಿ ತುಂಬಿದ್ದ ಕಾಲವೂ ಆಗಿತ್ತು. ಇವೆರಡೂ ಅಂಶಗಳು ಹಲವು ಭಾರತೀಯ ಕ್ರಾಂತಿಕಾರಿಗಳನ್ನು ಕಮ್ಯುನಿಸ್ಟರಾಗುವಂತೆ ಪ್ರೇರೇಪಿಸಿತ್ತು.

ಕೆಲವು ಕ್ರಾಂತಿಕಾರಿಗಳು ಜಗತ್ತಿನ ಮೊದಲ ಶ್ರಮಜೀವಿಗಳ ಕ್ರಾಂತಿಯ ನಾಡಿಗೆ ಒಂದು ಅತ್ಯಂತ ದುಸ್ತರವಾದ ಪಯಣವನ್ನೇ ಕೈಗೊಂಡರು. ಇಂತಹ ವಲಸೆಗಾರ ಭಾರತೀಯ ಕಮ್ಯುನಿಸ್ಟರ ಮುತುವರ್ಜಿಯಿಂದ ತಾಷ್ಕೆಂಟಿನಲ್ಲಿ ಅಕ್ಟೋಬರ್ 17, 1920ರಂದು ಭಾರತ ಕಮ್ಯುನಿಸ್ಟ್ ಪಕ್ಷ ಸ್ಥಾಪನೆಗೊಂಡಿತು. ಇದು, ಮೊದಲ ಬಾರಿಗೆ, ಭಾರತದಲ್ಲಿ ಅಲ್ಲಲ್ಲಿ ಚದುರಿ ಹೋಗಿದ್ದ ವಿವಿಧ ಕ್ರಾಂತಿಕಾರಿಗಳ ಗುಂಪುಗಳಿಗೆ ಮಾರ್ಕ್ಸ್‌ವಾದ–ಲೆನಿನ್‌ವಾದದಲ್ಲಿ ಒಂದು ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಶಿಕ್ಷಣವನ್ನು ಒದಗಿಸಿತು. ಮುಂಬೈ, ಕಲ್ಕತ, ಮದ್ರಾಸ್ ಮತ್ತು ಯು.ಪಿ.–ಪಂಜಾಬ್ ಪ್ರದೇಶದಲ್ಲಿ ಇದ್ದ ಸಣ್ಣ ಕಮ್ಯುನಿಸ್ಟ್ ಗುಂಪುಗಳೆಲ್ಲವನ್ನು 1925ರಲ್ಲಿ ಕಾನ್ಪುರದಲ್ಲಿ ಒಂದು ಕಮ್ಯುನಿಸ್ಟ್ ಸಮ್ಮೇಳನದಲ್ಲಿ ಒಟ್ಟುಗೂಡಿಸಲಾಯಿತು, ಮತ್ತು ಭಾರತ ಕಮ್ಯುನಿಸ್ಟ್ ಪಕ್ಷ ದೇಶದೊಳಗೆ ಕಾರ್ಯನಿರ್ವಹಿಸಲು ಆರಂಭಿಸಿತು. ಎಂ.ಎನ್.ರಾಯ್ ಮತ್ತು ಬ್ರಿಟಿಶ್ ಕಮ್ಯುನಿಸ್ಟರ ಒಬಬ್ ಮುಖಂಡ ರಜನಿ ಪಾಮೆ ದತ್ ಒದಗಿಸಿದ ಸೈದ್ಧಾಂತಿಕ–ತಾತ್ವಿಕ ಸಾಮಗ್ರಿಗಳು ಹಲವಾರಭಾರತೀಯ ಕಮ್ಯುನಿಸ್ಟರ ಪ್ರಜ್ಞೆಯನ್ನು ರೂಪಿಸಿದವು.

ಕಮ್ಯುನಿಸ್ಟ್ ಪಕ್ಷ ಸ್ಥಾಪನೆಗೊಂಡ ಆರಂಭದಿಂದಲೇ, ಅದು ರಾಷ್ಟ್ರೀಯ ಆಂದೋಲನದ ಅಜೆಂಡಾದ ಮೇಲೆ ಪ್ರಭಾವ ಬೀರಲಾರಂಭಿಸಿತು. 1921ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ(ಎಐಸಿಸಿ)ಯ ಅಹಮದಾಬಾದ್ ಅಧಿವೇಶನದಲ್ಲಿ ಮೌಲಾನಾ ಹಸ್ರತ್ ಮೊಹಾನಿ ಮತ್ತು ಸ್ವಾಮಿ ಕುಮಾರಾನಂದ ಬ್ರಿಟಿಶರಿಂದ ಸಂಪೂರ್ಣ ಸ್ವಾತಂತ್ರ್ಯದ ಒಂದು ಠರಾವನ್ನು ಮಂಡಿಸಿದರು. ಅದನ್ನು ಗಾಂಧೀಜಿ ಸ್ವೀಕರಿಸಲಿಲ್ಲ. 1922ರಲ್ಲಿ ಎಐಸಿಸಿ ಗಯಾ ಸಮ್ಮೇಳನದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ ರಾಷ್ಟ್ರೀಯ ಆಂದೋಲನದ ಧ್ಯೇಯೋದ್ದೇಶಗಳ ಒಂದು ಸನ್ನದನ್ನು ಸಮ್ಮೇಳನದ ಪ್ರತಿನಿಧಿಗಳ ನಡುವೆ ಹಂಚಿತು.

ತೀವ್ರ ದಮನ

ಬ್ರಿಟಿಶರು ಆರಂಭದಿಂದಲೇ ಭಾರತದಲ್ಲಿ ಒಂದು ಸಂಘಟಿತ ಕಮ್ಯುನಿಸ್ಟ್ ಪಕ್ಷದ ಅಪಾಯಗಳನ್ನು ಕಂಡರು. ಅದರಿಂದಾಗಿ ಅವರು ಪಿತೂರಿ ಮೊಕದ್ದಮೆಗಳನ್ನು ಹಾಕಿ ತೀವ್ರ ದಮನವನ್ನು ಹರಿಯಬಿಟ್ಟರು. ಮಾಸ್ಕೊ ತಲುಪಲು ಪ್ರಯತ್ನಿಸಿದ ವಲಸಿಗ ಕ್ರಾಂತಿಕಾರಿಗಳು, ಮೊಹಾಜಿರ್‌ಗಳ ಮೇಲೆ ಮೇ 1922ರಿಂದ ಆರಂಭಿಸಿ ಐದು ಪೇಶಾವರ್ ಪಿತೂರಿ ಮೊಕದ್ದಮೆಗಳನ್ನು ಹಾಕಿದರು. ನಂತರ 1923–24ರಲ್ಲಿ ಕಾನ್ಪುರ ಪಿತೂರಿ ಮೊಕದ್ದಮೆಯನ್ನು ಆರಂಭಿಸಿದರು. ಭಾರತದ ಹೊರಗಿದ್ದ ಹಲವು ಕ್ರಾಂತಿಕಾರಿಗಳು ಭಾರತಕ್ಕೆ ಮರಳಿದಾಗ ಅವರನ್ನು ಮತ್ತು ದೇಶದೊಳಗೆ ಇದ್ದ ಕ್ರಾಂತಿಕಾರಿಗಳನ್ನು ಬಂಧಿಸಿ ಕಠಿಣ ಶಿಕ್ಷೆಗೆ ಗುರಿಪಡಿಸಲಾಯಿತು. ಇದಕ್ಕೆ ಮೊದಲು 1915ರಲ್ಲಿ ಘದರ್ ಪಾರ್ಟಿ ಆಂದೋಲನದ ಭಾಗವಾಗಿದ್ದ ಕ್ರಾಂತಿಕಾರಿಗಳ ವಿರುದ್ಧ, ಅವರು ಭಾರತಕ್ಕೆ ಮರಳಿದಾಗ ಮತ್ತು ದಕ್ಷಿಣ ಏಷ್ಯಾದ ಇತರ ದೇಶಗಳಲ್ಲಿ ಲಾಹೋರ್ ಪಿತೂರಿ ಮೊಕದ್ದಮೆಯನ್ನು ಜಡಿಯಲಾಗಿತ್ತು. ಶಿಕ್ಷೆಗೆ ಗುರಿಯಾದ 291 ಮಂದಿಯಲ್ಲಿ 42 ಮಂದಿಯನ್ನು ಗಲ್ಲಿಗೇರಿಸಲಾಯಿತು., 114 ಮಂದಿಗೆ ಜೀವಾವಧಿ ಜೈಲುಶಿಕ್ಷೆ ವಿಧಿಸಲಾಯಿತು. ಮಾರ್ಚ್ 20, 1929ರಂದು ಕಮ್ಯುನಿಸ್ಟ್ ಪಕ್ಷದ 31 ಪ್ರತಿಷ್ಠಿತ ಮುಖಂಡರ ವಿರುದ್ಧ ಮೇರಠ್ ಪಿತೂರಿ ಮೊಕದ್ದಮೆಯೊಂದಿಗೆ ಇನ್ನಷ್ಟು ವ್ಯಾಪಕವಾದ ದಮನವನ್ನು ಹರಿಯ ಬಿಡಲಾಯಿತು.

ಈ ಮುಖಂಡರು ತಮಗೆ ವಿಧಿಸಿದ ಶಿಕ್ಷೆಗಳನ್ನು ಅನುಭವಿಸಿ ಹೊರಗೆ ಬಂದ ಮೇಲೆಯೇ 1934ರಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ಅಖಿಲ ಭಾರತ ಕೇಂದ್ರವನ್ನು ರಚಿಸಲು ಸಾಧ್ಯವಾಯಿತು. ಅಂದಿನಿಂದ ಇಂದಿನ ವರೆಗೂ ಇದು ನಿಯಮಿತವಾಗಿ ಕಾರ್ಯನಿರ್ವಹಿಸುತ್ತಿದೆ.

ಕಣ್ಣೋಟಗಳ ಸಮರ

ಒಳಗೊಳ್ಳುವ ಭಾರತದ ಪರಿಕಲ್ಪನೆಯ ಉದಯ ಈ ಹೋರಾಟದ ಕಾಲದಲ್ಲಿ ಮೂಡಿಬಂದ ಮೂರು ಕಣ್ಣೋಟಗಳ ನಡುವಿನ ಒಂದು ನಿರಂತರ ಸಮರದ ಫಲ. ಮುಖ್ಯಧಾರೆಯ ಕಾಂಗ್ರೆಸ್ ಕಣ್ಣೋಟ ಸ್ವತಂತ್ರ ಭಾರತ ಒಂದು ಜಾತ್ಯತೀತ ಪ್ರಜಾಸತ್ತಾತ್ಮಕ ಗಣತಂತ್ರವಾಗಬಹುದು ಎಂದು ಕಂಡರಿಸಿತ್ತು. ಕಮುನಿಸ್ಟರು ಇದನ್ನು ಒಪುತ್ತಲೇ, ಇನ್ನೂ ಮುಂದೆ ಹೋಗಿ, ಸ್ವತಂತ್ರ ಭಾರತ ಬಂಡವಾಳಶಾಹಿ ಅಭಿವೃದ್ಧಿಯ ಮಾರ್ಗವನ್ನು ಅನುಸರಿಸಿದರೆ, ಈ ಜಾತ್ಯತೀತ ಪ್ರಜಾಪ್ರಭುತ್ವ ರಚನೆ ಉಳಿಯಲಾರದು ಎಂದರು. ಈ ಮೂಲಕ ಕಮ್ಯುನಿಸ್ಟರು, ನಾವು ಸಾಧಿಸುವ ರಾಜಕೀಯ ಸ್ವಾತಂತ್ರ್ಯವನ್ನು ಪ್ರತಿಯೊಬ್ಬ ಭಾರತೀಯರ ಸಾಮಾಜಿಕ–ಆರ್ಥಿಕ ಸ್ವಾತಂತ್ರ್ಯಕ್ಕೆ ವಿಸ್ತರಿಸಬೇಕು, ಇದು ಸಮಾಜವಾದದ ಅಡಿಯಲ್ಲಿ ಮಾತ್ರ ಸಾಧ್ಯ ಎಂದು ಕಂಡರಿಸಿದರು.

ಇವೆರಡಕ್ಕೂ ವಿರುದ್ಧವಾದ ಮೂರನೇ ಕಣ್ಣೋಟ ಸ್ವತಂತ್ರ ಭಾರತದ ಚಾರಿತ್ರ್ಯವನ್ನು ಅದರ ಜನಗಳ ಧಾರ್ಮಿಕ ಸಂಯೋಜನೆಗಳು ನಿರ್ಧರಿಸಬೇಕು ಎಂದು ವಾದಿಸಿತು. ಈ ಕಣ್ಣೋಟದ ಅಭಿವ್ಯಕ್ತಿ ಅವಳಿ–ಜವಳಿ ರೂಪದಲ್ಲಿ ಪ್ರಕಟಗೊಂಡಿತು– 'ಇಸ್ಲಾಮಿಕ್ ಪ್ರಭುತ್ವ'ವನ್ನು ಪ್ರತಿಪಾದಿಸುವ ಮುಸ್ಲಿಂ ಲೀಗ್ ಮತ್ತು 'ಹಿಂದೂ ರಾಷ್ಟ್ರ;ವನ್ನು ಪ್ರತಿಪಾದಿಸುವ ಆರೆಸ್ಸೆಸ್. ಮೊದಲನೆಯದು ದೇಶದ ದುರದೃಷ್ಟಕರ

ಪುಟ 10 ಕ್ಕೆ



ಕಮ್ಯುನಿಸ್ಟರ ನೇತೃತ್ವದಲ್ಲಿ ನಡೆದ ರೈತ ಹೋರಾಟಗಳು ◀

▼ ವಾರಲೀ ಬಂಡಾಯ, ತೆಭಾಗ ಚಳುವಳಿ, ತೆಲಂಗಾಣ ಸಶಸ್ತ್ರ ಹೋರಾಟ ▶







ತಾಷ್ಕೆಂಟಿನಲ್ಲಿ ಅಕ್ಟೋಬರ್ 17, 1920ರಂದು ಭಾರತ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯೊಂದಿಗೆ ಭಾರತದ ಕಮ್ಯುನಿಸ್ಟ್ ಚಳುವಳಿಯ ಭವ್ಯ ಇತಿಹಾಸವು ಪ್ರಾರಂಭವಾಯಿತು. ಈ ಅಂಕಣದಲ್ಲಿ, ಪಕ್ಷದ ಕಳೆದ 100 ವರ್ಷಗಳ ಇತಿಹಾಸದಲ್ಲಿ ಜರುಗಿದ ಯುಗಪ್ರವರ್ತಕ ಘಟನೆಗಳ, ಹೋರಾಟಗಳ, ತ್ಯಾಗಬಲಿದಾನಗಳ ಮತ್ತು ಪ್ರಮುಖ ನೀತಿನಿರೂಪಕ ನಿರ್ಧಾರಗಳ ಗಾಥೆಯನ್ನು ಗುರುತಿಸಲಾಗುವುದು



ತಾಷ್ಕೆಂಟಿನಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ ಸ್ಥಾಪನೆ

ಅನುವಾದ: ಟಿ.ಸುರೇಂದ್ರ ರಾವ್

ಅಂದಿನ ಸೋವಿಯತ್ ದೇಶದ ತುರ್ಕಿಸ್ತಾನ್ ಗಣತಂತ್ರದ ರಾಜಧಾನಿಯಾಗಿದ್ದ ತಾಷ್ಕೆಂಟಿನಲ್ಲಿ ಅಕ್ಟೋಬರ್ 17, 1920ರಂದು ಭಾರತ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯನ್ನು ಪ್ರಕಟಿಸಲು ಸಭೆ ನಡೆಯಿತು.

ಆ ಸಭೆಯಲ್ಲಿ ಎಂ.ಎನ್.ರಾಯ್, ಎವಿಲಿನ್ ಟ್ರೆಂಟ್ ರಾಯ್, ಅಬಾನಿ ಮುಖರ್ಜಿ, ರೋಸಾ ಫಿಟಿಂಗೋವ್, ಮಹಮದ್ ಅಲಿ, ಮಹಮದ್ ಷಫೀಕ್ ಮತ್ತು ಎಂ ಪಿ ಬಿ ಟಿ ಆಚಾರ್ಯ ಭಾಗವಹಿಸಿದ್ದರು. ಮಹಮದ್ ಷಫೀಕ್ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಆ ಉದ್ಘಾಟನಾ ಸಭೆಯು ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯ(ಕಾಮಿಂಟರ್ನ್)ವು ಘೋಷಿಸಿದ್ದ ತತ್ವಗಳನ್ನು ಅಳವಡಿಸಿಕೊಂಡಿತು ಮತ್ತು ಸಿಪಿಐನ ಕಾರ್ಯಕ್ರಮವನ್ನು 'ಭಾರತದ ಪರಿಸ್ಥಿತಿಗೆ ಅನುಗುಣವಾಗಿ' ಸಿದ್ಧಪಡಿಸಲು ತೀರ್ಮಾನಮಾಡಿತು.

1920ರಲ್ಲಿ ಮಾಸ್ಕೋದಲ್ಲಿ ನಡೆದ ಎರಡನೇ ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯದಲ್ಲಿ ಎಂ.ಎನ್. ರಾಯ್ ಅವರು ಮೆಕ್ಸಿಕನ್ ಕಮ್ಯುನಿಸ್ಟ್ ಪಕ್ಷದ ಪ್ರತಿನಿಧಿಯಾಗಿ ಹಾಜರಿದ್ದರು. ಅಬಾನಿ ಮುಖರ್ಜಿ ಮತ್ತು ಆಚಾರ್ಯರವರು ಸಲಹಾ ಸಮಿತಿ ಸ್ಥಾನದಲ್ಲಿ ಭಾಗವಹಿಸಿದ್ದರೆ, ಮಹಮದ್ ಷಫೀಕ್ ವೀಕ್ಷಕರಾಗಿ ಪಾಲ್ಗೊಂಡಿದ್ದರು.

ಅಮೆರಿಕನ್ ಕಮ್ಯುನಿಸ್ಟ್ ಎವಿಲಿನ್ ಅವರು ಎಂ.ಎನ್.ರಾಯ್ ಅವರ ಪತ್ನಿಯಾಗಿದ್ದರೆ, ರೋಸಾ ಫಿಟಿಂಗೋವ್ ಅವರು ರಷ್ಯನ್ ಕಮುನಿಸ್ಟ್ ಆಗಿದ್ದು ಅಬಾನಿ ಮುಖರ್ಜಿಯವರ ಪತ್ನಿಯಾಗಿದ್ದರು.

ಆ ಗುಂಪಿನಲ್ಲಿದ್ದ ಭಾರತೀಯರು ಯುವಕರಾಗಿದ್ದರು; ದೇಶಪ್ರೇಮದ ಕಿಚ್ಚಿನೊಂದಿಗೆ ಭಾರತವನ್ನು ಬ್ರಿಟಿಷರ ಆಳ್ವಿಕೆಯಿಂದ ಮುಕ್ತಿಗೊಳಿಸಲು ಕ್ರಾಂತಿಕಾರಿ ಚಳುವಳಿ ಅಥವಾ ಶಸ್ತ್ರಸಜ್ಜಿತ ಹೋರಾಟ ನಡೆಸುವ ಹಾದಿಯನ್ನು ಅರಸುತ್ತಾ ಅವರು ಭಾರತದಿಂದ ಹೊರಟಿದ್ದರು. ಎಂ.ಎನ್.ರಾಯ್, ಅಬಾನಿ ಮುಖರ್ಜಿ, ಎಂಪಿಬಿಟಿ ಆಚಾರ್ಯ ಈ ಪಂಗಡದಲ್ಲಿದ್ದರು. ಮಹಮದ್ ಷಫೀಕ್ ಮತ್ತು ಮಹಮದ್ ಅಲಿ ಅವರು ಮುಹಾಜಿರ್‌ಗಳಾಗಿದ್ದು ಬ್ರಿಟಿಷರ ವಿರುದ್ಧ ಹೋರಾಡಲು ಸಹಾಯ ಕೇಳುವ ಉದ್ದೇಶದಿಂದ ತಾಷ್ಕೆಂಟಿಗೆ ತೆರಳಿದ್ದರು. ಕೆಚ್ಚೆದೆಯ ಆ ಕ್ರಾಂತಿಕಾರಿಗಳ ಆ ಪ್ರವಾಸಗಳು ಮತ್ತು ಸಾಹಸಗಳನ್ನು ಬೇರೊಂದು ಸಮಯದಲ್ಲಿ ಹೇಳಲಾಗುವುದು.

ಹಾಗಾಗಿ, ಭಾರತ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯ ಹಿಂದೆ ಜಾಗತಿಕ ಶ್ರಮಜೀವಿಗಳ ಕ್ರಾಂತಿ ಮತ್ತು ಭಾರತದ ರಾಷ್ಟ್ರೀಯ ವಿಮೋಚನಾ ಹೋರಾಟದ ಧಾರೆಗಳು ಪರಸ್ಪರ ಹೆಣೆದುಕೊಂಡಿದ್ದವು.

ರಷ್ಯಾದ 1917ರ ಅಕ್ಟೋಬರ್ ಕ್ರಾಂತಿಯು ಮಹತ್ವಪೂರ್ಣವಾದ ಜಾಗತಿಕ ಪರಿಣಾಮ ಬೀರಿತ್ತು. ಕ್ರಾಂತಿಯ ಸ್ವರೂಪದ ಕುರಿತ ಸುದ್ದಿ ಬ್ರಿಟಿಷ್ ವಸಾಹತುವಾಗಿದ್ದ ಭಾರತವನ್ನು ತಲುಪುವ ಮುಂಚೆಯೇ, ವಿದೇಶಗಳಲ್ಲಿ ವಾಸವಾಗಿದ್ದ ರಾಜಕೀಯ ವಲಸಿಗ ಭಾರತೀಯ ಕ್ರಾಂತಿಕಾರಿಗಳು ಚರಿತ್ರಾರ್ಹವಾದ ಸಮಾಜವಾದಿ ಕ್ರಾಂತಿಯತ್ತ ಆಕರ್ಷಿತರಾಗಿದ್ದರು.

ಬರ್ಲಿನ್‌ನಲ್ಲಿದ್ದ ಕ್ರಾಂತಿಕಾರಿಗಳ ಗುಂಪೊಂದು ಮಾಸ್ಕೋದ ಬೋಲ್ಶೆವಿಕರನ್ನು ಸಂಪರ್ಕಿಸಬೇಕೆಂದು ನಿರ್ಧರಿಸಿತು. ಅವರಲ್ಲಿ ಗುಂಪಿನ ಮುಖಂಡ ವೀರೇಂದ್ರನಾಥ್ ಚಟ್ಟೋಪಾಧ್ಯಾಯ, ಭೂಪೇಂದ್ರನಾಥ್ ದತ್, ಮಹಮದ್ ಬರ್ಕತುಲ್ಲಾ, ನಳಿನಿ ಗುಪ್ತಾ ಮತ್ತಿತರರು ಇದ್ದರು.

ಅಮೆರಿಕಾ(ಸಂಯುಕ್ತ ಸಂಸ್ಥಾನ)ದಲ್ಲಿ ಗಧರ್ ಪಕ್ಷದ ಮುಖಂಡರು ಇದ್ದರು; ಬ್ರಿಟಿಷರನ್ನು ಹಿಮ್ಮೆಟ್ಟಿಸಲು ಪಕ್ಷ ರಚಿಸಿಕೊಂಡಿದ್ದರು; ಕೋಮಗಾಟುಮಾರು ಪ್ರಸಂಗದಲ್ಲಿ ಅವರ ದಂಗೆಯ ಪ್ರಯತ್ನವನ್ನು ಸದೆಬಡಿಯಲಾಗಿತ್ತು; ಅವರು ರಷ್ಯನ್ ಕ್ರಾಂತಿಕಾರಿಗಳ ಸಂಪರ್ಕಮಾಡಲು ಬಯಸಿದ್ದರು.

1920–21ರಲ್ಲಿ ಅಸಹಕಾರ–ಖಿಲಾಫತ್ ಚಳುವಳಿಯ ಸಂದರ್ಭದಲ್ಲಿ, ಬ್ರಿಟಿಷರ ವಿರುದ್ಧ ಹೋರಾಟ ಮುಂದುವರಿಸಲು ಬಯಸಿದ್ದ ದೊಡ್ಡ ಸಂಖ್ಯೆಯ ಖಿಲಾಫತ್ ಕಾರ್ಯಕರ್ತರು ಭಾರತದಿಂದ ಆಫ್ಘಾನಿಸ್ತಾನಕ್ಕೆ ಹೋದರು. ಅಲ್ಲಿಂದ ಅವರಲ್ಲಿ ಅನೇಕರು ತಾಷ್ಕೆಂಟಿನತ್ತ ಪ್ರಯಾಣ ಬೆಳೆಸಿದರು. ಬ್ರಿಟಿಷರ ಆಳ್ವಿಕೆಯ ವಿರುದ್ಧದ ಮುಹಾಜಿರ್‌ಗಳ ಹೋರಾಟಕ್ಕೆ ಸಹಾಯ ಮಾಡಲು ಸಿದ್ಧರಿದ್ದ ಸೋವಿಯತ್ ಅಧಿಕಾರಿಗಳು ಅವರನ್ನು ಸ್ವಾಗತಿಸಿದರು. ಕಮ್ಯುನಿಷ್ಟ್ ಪಕ್ಷ ಮತ್ತು ಬೋಲ್ಶೆವಿಕ್ ಕ್ರಾಂತಿಕಾರಿಗಳ ಸಂಪರ್ಕಕ್ಕೆ ಬಂದ ಮೇಲೆ ಮುಹಾಜಿರರಲ್ಲಿ ಕೆಲವರು ಕಮ್ಯುನಿಸ್ಟ್‌ವಾದವನ್ನು ಅಪ್ಪಿಕೊಂಡರು; ಅವರಲ್ಲಿ 25ಕ್ಕೂ ಹೆಚ್ಚಿನವರನ್ನು, 1921ರಲ್ಲಿ ಪ್ರಾರಂಭವಾದ ಮಾಸ್ಕೋದ 'ಪೂರ್ವದ ಶ್ರಮಜೀವಿಗಳ ಕಮ್ಯುನಿಸ್ಟ್ ವಿಶ್ವವಿದ್ಯಾನಿಲಯ'(ಕಮ್ಯುನಿಸ್ಟ್ ಯೂನಿವರ್ಸಿಟಿ ಆಫ್ ಟಾಯ್ಲರ್ಸ್ ಆಫ್ ದಿ ಈಸ್ಟ್)ಕ್ಕೆ ಕಳಿಸಲಾಯಿತು.

ಎಂ.ಎನ್.ರಾಯ್ ಅವರನ್ನು ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯದ ಕಾರ್ಯಕಾರಿ ಸಮಿತಿ(ಇಸಿಸಿಐ)ಯ ಸದಸ್ಯರನ್ನಾಗಿ ಆಯ್ಕೆಮಾಡಲಾಯಿತು. ಅವರನ್ನು ತಾಷ್ಕೆಂಟಿನ ಸೆಂಟ್ರಲ್ ಏಶಿಯಾಟಿಕ್ ಬ್ಯೂರೋಕ್ಕೆ ನಿಯೋಜಿಸಲಾಯಿತು. ಅವರ ಈ ಅಧಿಕಾರದಿಂದಾಗಿ ಅವರು ಮುಹಾಜಿರನ್ನು ಸಂಪರ್ಕಿಸಿ ಅವರ ನಡುವೆ ಕೆಲಸ ಮಾಡಲು ಶುರುಮಾಡಿದರು; ಅವರಲ್ಲಿ ಅನೇಕರು ಭಾರತದಲ್ಲಿನ ಬ್ರಿಟಿಷರ ವಿರುದ್ಧ ಹೋರಾಟ ಮಾಡಲು ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಲು ಉತ್ಸುಕರಾಗಿದ್ದರು.

ಆರಂಭದಲ್ಲಿ ಕ್ರಾಂತಿಕಾರಿಗಳ ಸಣ್ಣ ಗುಂಪುಗಳಿಂದಲೇ ಜಗತ್ತಿನಾದ್ಯಂತ ಕಮ್ಯುನಿಸ್ಟ್ ಪಕ್ಷಗಳನ್ನು ರಚಿಸಲಾಯಿತು. ಚೀನಾದಲ್ಲಿ, 1921ರಲ್ಲಿ ಶಾಂಘಾಯಿನಲ್ಲಿ 13 ಪ್ರತಿನಿಧಿಗಳು ಹಾಜರಿದ್ದ ಸಭೆಯ ನಂತರ ಕಮ್ಯುನಿಸ್ಟ್ ಪಕ್ಷವನ್ನು ರಚಿಸಲಾಯಿತು. ಇಂಡೋಚೈನಾ ಕಮ್ಯುನಿಸ್ಟ್ ಪಕ್ಷ(ನಂತರದಲ್ಲಿ ಅದು ವಿಯೆಟ್ನಾಂ, ಕಂಬೋಡಿಯಾ ಮತ್ತು ಲಾವೋಸ್ ಪಕ್ಷಗಳಾದವು)ವು ಫ್ರಾನ್ಸಿನಲ್ಲಿ ವಾಸಿಸುತ್ತಿದ್ದ ಮಾರ್ಕ್ಸ್‌ವಾದವನ್ನು ಅಪ್ಪಿಕೊಂಡಿದ್ದ ರಾಜಕೀಯ ವಲಸಿಗರಿಂದ ಪ್ರಾರಂಭವಾಯಿತು. ಆಗ ಫ್ರಾನ್ಸ್ ಇಂಡೋಚೈನಾವನ್ನು ತನ್ನ ವಸಾಹತನ್ನಾಗಿ ಮಾಡಿಕೊಂಡಿತ್ತು.

ತಾಷ್ಕೆಂಟಿನಲ್ಲಿದ್ದ ಕಮ್ಯುನಿಸ್ಟ್ ಗುಂಪುಗಳ ದಾಖಲೆಗಳು ಇನ್ನೆರಡು ಸಭೆಗಳು ನಡೆದಿದ್ದನ್ನು ಮನವರಿಕೆ ಮಾಡಿಕೊಡುತ್ತವೆ. ಡಿಸೆಂಬರ್ 15, 1920ರಂದು ನಡೆದ ಸಭೆಯಲ್ಲಿ ಪಕ್ಷದ ಅಭ್ಯರ್ಥಿ ಸದಸ್ಯರನ್ನಾಗಿ ಮೂವರನ್ನು – ಅಬ್ದುಲ್ ಆದೆರ್ ಸೆಹ್ರಾಯ್, ಮಸೂದ್ ಅಲಿ ಶಾ ಖಾಜಿ ಮತ್ತು ಅಕ್ಬರ್ ಶಾ(ಸಲೀಮ್) ಅವರನ್ನು – ತೆಗೆದುಕೊಳ್ಳಲಾಯಿತು ಎಂಬುದನ್ನು ಕಾರ್ಯಕಲಾಪಗಳ ದಾಖಲೆ ಹೊರಗೆಡಹಿವೆ. ಪಕ್ಷದ ಪೂರ್ಣ ಸದಸ್ಯರಾಗಲು ಅಭ್ಯರ್ಥಿ ಸದಸ್ಯರು ಮೂರು ತಿಂಗಳ ಅವಧಿಯ ಪ್ರೊಬೇಷನ್(ನಡತೆ ಮತ್ತು ಸಾಮರ್ಥ್ಯ ಪರೀಕ್ಷೆ) ಪೂರ್ಣಗೊಳಿಸಬೇಕಾಗಿತ್ತು.

ಆಗ ತಾಷ್ಕೆಂಟಿನಲ್ಲಿ ಮುಹಾಜಿರ್‌ಗಳನ್ನು ಮತ್ತು ರಾಜಕೀಯ ವಲಸಿಗ ಕ್ರಾಂತಿಕಾರಿಗಳನ್ನೊಳಗೊಂಡ ಭಾರತೀಯ ಕ್ರಾಂತಿಕಾರಿ ಸಮಿತಿ(ಇಂಡಿಯನ್ ರೆವಲ್ಯೂಷನರಿ ಕಮಿಟಿ) ಇತ್ತು. ಈ ಕಾರ್ಯಕರ್ತರ ಪಡೆಯಿಂದಲೇ ಮಾಸ್ಕೋದ ಪೂರ್ವದ ಶ್ರಮಜೀವಿಗಳ ಕಮ್ಯುನಿಸ್ಟ್ ವಿಶ್ವವಿದ್ಯಾನಿಲಯಕ್ಕೆ ಕಳಿಸಲು ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ದಪಡಿಸಲಾಗಿತ್ತು.

ವೀರೇಂದ್ರನಾಥ್ ಚಟ್ಟೋಪಾಧ್ಯಾಯ ನೇತೃತ್ವದ ಬರ್ಲಿನ್ ಗುಂಪಿನವರು ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯದ ಮುಖಂಡರನ್ನು ಭೇಟಿಮಾಡಲು ಅಂತಿಮವಾಗಿ ಮಾಸ್ಕೋವನ್ನು ತಲುಪಿದ್ದು 1921ರಲ್ಲಿ ಎನ್ನುವುದು ಆಸಕ್ತಿದಾಯಕ ಸಂಗತಿ. ಮೊದಲು ಭಾರತವನ್ನು ಬ್ರಿಟಿಷರಿಂದ ಮುಕ್ತಿಗೊಳಿಸಬೇಕು ನಂತರವೇ ಕಮ್ಯುನಿಸ್ಟ್ ಪಕ್ಷವನ್ನು ರಚಿಸಬೇಕು ಎನ್ನುವುದು ಅವರ ಅಭಿಪ್ರಾಯವಾಗಿತ್ತು. ರಾಷ್ಟ್ರೀಯ ವಿಮೋಚನಾ ಹೋರಾಟಕ್ಕೆ ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯದ ಸಹಾಯ ಬೇಕು ಎಂದು ಅವರು ಬಯಸಿದ್ದರು. ಎಂ.ಎನ್. ರಾಯ್ ಮತ್ತು ಅವರ ಗುಂಪನ್ನು ಭಾರತೀಯ ಕಮ್ಯುನಿಸ್ಟ್ ಪಕ್ಷವೆಂದು ಪರಿಗಣಿಸಬಾರದು ಎಂದೂ ಅವರು ಬಯಸಿದ್ದರು. ಎಲ್ಲರ ಅಭಿಪ್ರಾಯಗಳನ್ನು ಪಡೆದ ನಂತರ ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯದ ಆಯೋಗವು ತಾಷ್ಕೆಂಟಿನಲ್ಲಿ ರಚಿತವಾದ ಪಕ್ಷವನ್ನೇ ಭಾರತೀಯ ಕಮ್ಯುನಿಸ್ಟ್ ಗುಂಪೆಂದು ಮಾನ್ಯಮಾಡಲು ತೀರ್ಮಾನಿಸಿತು.

ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯಕ್ಕೆ ನೋಂದಣಿ ಮಾಡಿಸಲು, ಕಾರ್ಯಕ್ರಮವನ್ನು ಅಂತಿಮಗೊಳಿಸಿರಬೇಕೆಂಬ ತೀರ ಅಗತ್ಯವಾದ ನಿಯಮವನ್ನು ತಾಷ್ಕೆಂಟಿನಲ್ಲಿ ಜನ್ಮತಾಳಿದ್ದ ಕಮ್ಯುನಿಸ್ಟ್ ಪಕ್ಷವು ಅಂತಿಮಗೊಳಿಸಿರಲಿಲ್ಲ. ಆದರೆ ಈ ಗುಂಪು, ವಿಶೇಷವಾಗಿ ಎಂ.ಎನ್.ರಾಯ್ ಅವರು ಭಾರತದಲ್ಲಿ ವಿವಿಧ ಕೇಂದ್ರಗಳಲ್ಲಿ ರಚಿತವಾಗಿದ್ದ ಆಗ ತಾನೇ ಗರಿ ಮೂಡುತ್ತಿದ್ದ ಕಮ್ಯುನಿಸ್ಟ್ ಗುಂಪುಗಳಿಗೆ ಕಮ್ಯುನಿಸ್ಟ್ ವಿಚಾರಗಳನ್ನು ಹಬ್ಬಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಎಂ.ಎನ್.ರಾಯ್ ಮತ್ತು ಅಬಾನಿ ಮುಖರ್ಜಿಯವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಅಹಮದಾಬಾದ್ ಎಐಸಿಸಿ ಸಭೆಗೆ ಒಂದು ಬಹಿರಂಗ ಪತ್ರವನ್ನು ಬರೆದರು.

"ಕಾರ್ಮಿಕ ಸಂಘಟನೆಗಳ ಬೇಡಿಕೆಗಳನ್ನು ತಮ್ಮ ಬೇಡಿಕೆಗಳೆಂದೇ ತಿಳಿಯಬೇಕು; ರೈತ ಸಂಘಗಳ ಕಾರ್ಯಕ್ರಮಗಳನ್ನು ತಮ್ಮ ಕಾರ್ಯಕ್ರಮಗಳೆಂದೇ ಭಾವಿಸಬೇಕು; ಕಾಂಗ್ರೆಸ್ಸನ್ನು ಯಾವ ಅಡ್ಡಿ ಆತಂಕಗಳು ತಡೆಯದಂತಹ ಸಮಯ ಆಗ ತ್ವರಿತಗತಿಯಲ್ಲಿ ಬರುತ್ತದೆ; ತಮ್ಮ ಪ್ರಮುಖ ಹಿತಾಸಕ್ತಿಗಳಿಗಾಗಿ ಪ್ರಜ್ಞಾಪೂರ್ವಕವಾಗಿ ಹೋರಾಡುವ ಇಡೀ ಜನಸಮುದಾಯದ ಪ್ರಚಂಡ ಶಕ್ತಿ ಅದನ್ನು ಬೆಂಬಲಿಸುತ್ತದೆ" ಎಂದು ಆ ಪ್ರಣಾಳಿಕೆ ಕಾಂಗ್ರೆಸ್ಸನ್ನು ಒತ್ತಾಯಿಸಿತು.

ಪಕ್ಷದ ರಚನೆ ಆದಂದಿನಿಂದಲೂ, ಬೇರಾವುದೇ

ಪುಟ 11 ಕ್ಕೆ

ಎಂ ಎನ್ ರಾಯ್ ಮತ್ತು ಎವೆಲಿನ್ ರಾಯ್,



ಮುಝಫ್ಫರ್ ಅಹ್ಮದ್



ಎಸ್.ಎ. ಡಾಂಗೆ



ಸಿಂಗಾರವೇಲು ಚೆಟ್ಟಿಯಾರ್,



ಹಸ್ರತ್ ಮೊಹಾನಿ



ಅಕ್ಟೋಬರ್ 17, 1920ರಲ್ಲಿ ನಡೆದ ಸಭೆಯ ಕಲಾಪಗಳು

ಅಕ್ಟೋಬರ್ 17, 1920ರಂದು ತಾಷ್ಕೆಂಟಿನಲ್ಲಿ ಸ್ಥಾಪನೆಗೊಂಡ ಭಾರತ ಕಮ್ಯುನಿಸ್ಟ್ ಪಕ್ಷವು ಈ ಕೆಳಗಿನ ಸದಸ್ಯರುಗಳನ್ನು ಒಳಗೊಂಡಿದೆ: (1) ಎಂ.ಎನ್.ರಾಯ್, (2) ಎವೆಲೆನ್ ಟ್ರೆಂಟ್ ರಾಯ್, (3) ಎ ಎನ್ ಮುಖರ್ಜಿ, (4) ರೋಸಾ ಫಿತಿಂಗೋವ್, (5) ಮಹಮದ್ ಅಲಿ(ಅಹಮದ್ ಹಸನ್), (6) ಮಹಮದ್ ಷಫೀಕ್ ಸಿದ್ದಿಕಿ, (7) ಆಚಾರ್ಯ (ಎಂ ಪ್ರತಿವಾದಿ ಭಯಂಕರ್).

ಪಕ್ಷವನ್ನು ಸೇರಲು ಬಯಸುವವರಿಗೆ (ಅಭ್ಯರ್ಥಿ ಸದಸ್ಯರಾಗಿ) ಮೂರು ತಿಂಗಳ ಪ್ರೊಬೇಷನ್ ಅವಧಿಯ ಷರತ್ತನ್ನು ವಿಧಿಸಿದ ನಿರ್ಣಯವನ್ನು ಅದು ಅಂಗೀಕರಿಸಿತು.

ಕಾಮ್ರೇಡ್ ಷಫೀಕ್ ಕಾರ್ಯದರ್ಶಿಯಾಗಿ ಚುನಾಯಿತರಾದರು.

ಭಾರತೀಯ ಕಮ್ಯುನಿಸ್ಟ್ ಪಕ್ಷವು ಮೂರನೇ ಅಂತರ್ರಾಷ್ಟ್ರೀಯದಲ್ಲಿ ಘೋಷಿಸಿದ ತತ್ವಗಳನ್ನು ಅಳವಡಿಸಿಕೊಂಡಿದೆ ಮತ್ತು ಭಾರತದ ಪರಿಸ್ಥಿತಿಗೆ ಅನುಗುಣವಾಗಿ ಕಾರ್ಯಕ್ರಮವನ್ನು ರೂಪಿಸಲು ಕಟಿಬದ್ಧವಾಗಿದೆ.

ಚೇರ್ಮನ್: ಎಂ. ಆಚಾರ್ಯ
ಕಾರ್ಯದರ್ಶಿ: ರಾಯ್



ಭವ್ಯ ಹೋರಾಟಗಳ, ಕೊಡುಗೆಗಳ ನೂರು ವರ್ಷಗಳು

ಪುಟ 8 ರಿಂದ

ವಿಭಜನೆಯೊಂದಿಗೆ ಯಶಸ್ವಿಯಾಯಿತು, ಇದಕ್ಕೆ ಬ್ರಿಟಿಶರ ತಂತ್ರಗಳು, ನೆರವು ಮತ್ತು ಕುಮ್ಮಕ್ಕು ಚೆನ್ನಾಗಿ ಸಿಕ್ಕವು. ಇದರ ದುಷ್ಪರಿಣಾಮಗಳು ಈಗಲೂ ಬಾಧಿಸುತ್ತಲೇ ಇವೆ. ಎರಡನೆಯದ್ದು ಸ್ವಾತಂತ್ರ್ಯದ ಸಮಯದಲ್ಲಿ ತನ್ನ ಗುರಿಯನ್ನು ಸಾಧಿಸುವಲ್ಲಿ ವಿಫಲವಾಯಿತು. ಮಹಾತ್ಮ ಗಾಂಧಿಯವರ ಹತ್ಯೆ ಆರೆಸ್ಸೆಸ್‌ನ ಕಣ್ಣೋಟವನ್ನು, ಅದರ ರಾಜಕೀಯ ಯೋಜನೆಯನ್ನು ಭಾರತೀಯ ಸ್ವಾತಂತ್ರ್ಯ ಆಂದೋಲನ ತಿರಸ್ಕರಿಸಿತು ಎಂಬುದರಿಂದ ಅದಕ್ಕೆ ಉಂಟಾದ ನಿರಾಸೆಯನ್ನು ಬಿಂಬಿಸಿತು. ಆದರೆ ಆಧುನಿಕ ಭಾರತವನ್ನು ತನ್ನ ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ 'ಹಿಂದೂ ರಾಷ್ಟ್ರ'ವಾಗಿ ಪರಿವರ್ತಿಸುವ ತನ್ನ ಯೋಜನೆಯ ಪ್ರಯತ್ನಗಳನ್ನು ಅದು ಮುಂದುವರೆಸಿತು.

ಇಂದಿನ ತಾತ್ವಿಕ ಸಮರಗಳು ಮತ್ತು ರಾಜಕೀಯ ಸಂಘರ್ಷಗಳು, ಒಂದು ರೀತಿಯಲ್ಲಿ, ಈ ಮೂರು ಕಣ್ಣೋಟಗಳ ನಡುವಿನ ಈ ಸಮರದ ಮುಂದುವರಿಕೆಯೇ ಆಗಿವೆ.

ಎಡಪಂಥದ ಪಾತ್ರ

ಕಮ್ಯುನಿಸ್ಟ್ ಪಕ್ಷ ಹರಿಯಬಿಟ್ಟ ಹೋರಾಟಗಳ ಮೂಲಕ ಎಲ್ಲರನ್ನೂ ಒಳಗೊಳ್ಳುವ ಭಾರತದ ಪರಿಕಲ್ಪನೆಯ ವಿಕಾಸವನ್ನು ರಾಷ್ಟ್ರೀಯ ಆಂದೋಲನದ ಅಜೆಂಡಾಕ್ಕೆ ತರುವಲ್ಲಿ ಒಂದು ಬಹಳ ಮಹತ್ವದ ಪಾತ್ರವನ್ನು ವಹಿಸಿತು. ಮೊದಲನೆಯದಾಗಿ, ಭೂಮಿಯ ಪ್ರಶ್ನೆಯ ಮೇಲೆ ದೇಶದ ವಿವಿಧ ಭಾಗಗಳಲ್ಲಿ ಕಮ್ಯುನಿಸ್ಟರು ನಡೆಸಿದ ಹೋರಾಟಗಳು– ಕೇರಳದ ಪುನ್ನಪ್ರ–ವಾಯಲಾರ್ ಹೋರಾಟ, ಬಂಗಾಲದ ತೆಭಾಗ ಚಳುವಳಿ, ಅಸ್ಸಾಂನ ಸುರ್ಮಾ ಕಣಿವೆ ಹೋರಾಟ, ಮಹಾರಾಷ್ಟ್ರದ ವಾರಲೀ ಬಂಡಾಯ ಮುಂತಾದವುಗಳು. ಈ ಹೋರಾಟಗಳ ಚರಮಬಿಂದು ಎಂದರೆ ತೆಲಂಗಾಣದ ಸಶಸ್ತ್ರ ಹೋರಾಟ. ಇವು ಭೂಸುಧಾರಣೆಯ ಪ್ರಶ್ನೆಯನ್ನು ರಂಗಸ್ಥಳದ ಕೇಂದ್ರಕ್ಕೆ ತಂದಿಟ್ಟವು. ಇದರಿಂದಾಗಿ ಉಂಟಾದ ಜಮೀಂದಾರಿ ಪದ್ಧತಿಯ ನಿರ್ಮೂಲನೆ ಕೋಟ್ಯಂತರ ಜನಗಳನ್ನು ಪಾಳೆಯಗಾರೀ ಬೇಡಿಗಳಿಂದ ಮುಕ್ತಗೊಳಿಸಿತು, ಗ್ರಾಮೀಣ ಭಾರತದ ಶೋಷಿತ ವಿಭಾಗಗಳನ್ನು ವಿಮೋಚನಾ ಆಂದೋಲನದೊಳಕ್ಕೆ ಸೆಳೆಯಿತು. ತದ್ವಿರುದ್ಧವಾಗಿ, ಕಾಂಗ್ರೆಸ್ ಮುಖಂಡತ್ವ ಗ್ರಾಮೀಣ ಭಾರತದ ಶೋಷಕ ವರ್ಗಗಳನ್ನು ತನ್ನ ಭಾಗೀದಾರರಾಗಿ ಮಾಡಿಕೊಳ್ಳಲು ಪ್ರಯತ್ನಿಸಿತು.

ಎರಡನೆಯದಾಗಿ, ಕಮ್ಯುನಿಸ್ಟ್ ಪಕ್ಷ ಸ್ವತಂತ್ರ ಭಾರತದಲ್ಲಿ, ಭಾಷಾವಾರು ಪುನರ್ರಚನೆಗೆ ಜನಗಳ ಹೋರಾಟಗಳಿಗೆ ನೇತೃತ್ವ ನೀಡಿತು. ಹೀಗೆ, ಇಂದಿನ ಭಾರತದ ರಾಜಕೀಯ ನಕಾಶೆಯನ್ನು ಒಂದು ಸಾಕಷ್ಟು ವೈಜ್ಞಾನಿಕ ಮತ್ತು ಪ್ರಜಾಸತ್ತಾತ್ಮಕ ರೀತಿಯಲ್ಲಿ ನಿರ್ಮಿಸುವಲ್ಲಿ ಅದು ಮುಖ್ಯ ಹೊಣೆ ನಿರ್ವಹಿಸಿತು. ವಿಶಾಲಾಂಧ್ರ, ಐಕ್ಯ ಕೇರಳ ಮತ್ತು ಸಂಯುಕ್ತ ಮಹಾರಾಷ್ಟ್ರ ಮತ್ತಿತರ ಹೋರಾಟಗಳ ನೇತೃತ್ವವನ್ನು ದೇಶದಲ್ಲಿ ಪ್ರಮುಖ ಕಮ್ಯುನಿಸ್ಟ್ ನೇತಾರರಾಗಿ ಹೊಮ್ಮಿದ ವ್ಯಕ್ತಿಗಳು ವಹಿಸಿದರು. ಇದು ಭಾರತದಲ್ಲಿ ನೆಲೆಸಿರುವ ಹಲವಾರು ಭಾಷಿಕ ದೇಶೀಯತೆಗಳು ಸಮಾನತೆಯ ಆಧಾರದಲ್ಲಿ ಒಂದು ಒಳಗೊಳ್ಳುವ ಭಾರತದಲ್ಲಿ ಸಮಗ್ರೀಕರಣಗೊಳ್ಳಲು ದಾರಿ ಮಾಡಿಕೊಟ್ಟಿತು.

ಮೂರನೆಯದಾಗಿ, ಜಾತ್ಯತೀತತೆಗೆ ಎಡಪಂಥದ ಅಚಲ ಬದ್ಧತೆ ಭಾರತದ ವಾಸ್ತವತೆಯನ್ನು ಆಧರಿಸಿತ್ತು. ನಿಜ ಹೇಳಬೇಕೆಂದರೆ, 1920ರಷ್ಟು ಹಿಂದೆಯೇ, ಭಾರತ ಕಮ್ಯುನಿಸ್ಟ್ ಪಕ್ಷ ಸ್ಥಾಪನೆಯಾದಾಗಲೇ, ಎಂ.ಎನ್. ರಾಯ್ ಪಕ್ಷದ ಪರವಾಗಿ ಬರೆದ ಲೇಖನದಲ್ಲಿ, ಕೋಮು ವಿಭಜನೆಯನ್ನು ಎದುರಿಸಿ ನಿಲ್ಲಬಹುದಾದ್ದು ಸಾಮ್ರಾಜ್ಯಶಾಹಿ ಮತ್ತು ಶೋಷಕವರ್ಗಗಳ ವಿರುದ್ಧ ಎಲ್ಲ ಜಾತಿಗಳು ಮತ್ತು ಸಮುದಾಯಗಳಿಗೆ ಸೇರಿದ ದುಡಿಯುವ ಜನಗಳ ವರ್ಗಐಕ್ಯತೆ ಮಾತ್ರ ಎಂದು ಪ್ರತಿಪಾದಿಸಿದ್ದರು. ಆಗ ದೇಶವನ್ನು ಆವರಿಸಿದ್ದ ಕೋಮುಗಲಭೆಗಳ ಹಿನ್ನೆಲೆಯಲ್ಲಿ ಅವರು ಇದನ್ನು ಬರೆದಿದ್ದರು.

ಅಪಾರ ವೈವಿಧ್ಯತೆ ಇರುವ ಭಾರತದ ಐಕ್ಯತೆ, ಈ ವೈವಿಧ್ಯತೆಯಲ್ಲಿ ಅಡಕವಾಗಿರುವ ಸಮಾನ ಅಂಶಗಳ ಎಳೆಗಳನ್ನು, ಬಂಧಗಳನ್ನು ಗಟ್ಟಿಗೊಳಿಸುವ ಮೂಲಕ ಸಾಧ್ಯವೇ ಹೊರತು, ಈ ವೈವಿಧ್ಯತೆಯ ಮೇಲೆ ಏಕರೂಪತೆಯನ್ನು ಹೇರುವ ಮೂಲಕ ಅಲ್ಲ. ಇಂದು ಕೋಮುವಾದಿ ಶಕ್ತಿಗಳು ಈ ಏಕರೂಪತೆಯ ಹೇರಿಕೆಯ ದಾರಿಯನ್ನೇ ಆಕ್ರಾಮಕ ರೀತಿಯಲ್ಲಿ ಅನುಸರಿಸುತ್ತಿವೆ.

ಈ ರೀತಿ ಸಮಾನ ಅಂಶಗಳನ್ನು ಗಟ್ಟಿಗೊಳಿಸುವುದು ಭಾರತದ ಸಾಮಾಜಿಕ ವೈವಿಧ್ಯತೆಯ ಎಲ್ಲ ಅಂಶಗಳಿಗೂ ಅನ್ವಯಿಸುತ್ತದಾದರೂ, ಧರ್ಮಗಳನ್ನು ಕುರಿತ ವಿಷಯದಲ್ಲಂತೂ ನಿರ್ಣಾಯಕ ಮಹತ್ವ ಹೊಂದಿದೆ. ಭಾರತದ ವಿಭಜನೆ ಮತ್ತು ನಂತರದ ಭಯಾನಕ ಘಟನೆಗಳನ್ನು ಕಂಡಾಗ, ಜಾತ್ಯತೀತತೆ ಒಂದು ಸರ್ವಗ್ರಾಹೀ ಭಾರತದ ಅವಿಭಾಜ್ಯ ಅಂಶವಾಯಿತು. ಈ ಜಾತ್ಯತೀತತೆ ಎಂದರೆ ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸುವುದು. ಅಂದರೆ ಪ್ರಭುತ್ವ ಒಬ್ಬ ವ್ಯಕ್ತಿಯ ನಂಬಿಕೆಯ ಆಯ್ಕೆಯನ್ನು ಚಾಚೂತಪ್ಪದೆ ರಕ್ಷಿಸುತ್ತದೆ, ಆದರೆ ಅದು ಯಾವುದೇ ಒಂದು ಧರ್ಮವನ್ನು ಪ್ರತಿಪಾದಿಸುವುದಿಲ್ಲ ಅಥವ ಆದ್ಯತೆ ನೀಡುವುದಿಲ್ಲ. ಆದರೆ ಕಾರ್ಯತ: ಸ್ವಾತಂತ್ರ್ಯದ ನಂತರ ಜಾತ್ಯತೀತತೆ ಎಂದರೆ ಎಲ್ಲ ಧರ್ಮಗಳ ಸಮಾನತೆ ಎಂಬ ಮಟ್ಟಕ್ಕೆ ಇಳಿಸಲಾಯಿತು. ಬಹುಸಂಖ್ಯಾತರ ಧಾರ್ಮಿಕ ನಂಬಿಕೆಯ ಪರವಾದ ಪಕ್ಷಪಾತ ಇದರೊಳಗೇ ಅಡಕವಾಗಿತ್ತು. ಇದೇ ಈಗ ಕೋಮುವಾದಿ ಮತ್ತು ಮೂಲಭೂತವಾದಿ ಶಕ್ತಿಗಳಿಗೆ ಗ್ರಾಸ ಒದಗಿಸುತ್ತಿದೆ.

ಆಳುವ ವರ್ಗಗಳ ಉದಯ
ಮತ್ತು ವರ್ಗ ಸಮರಗಳು

ಚಸಾಹತು ದೇಶಗಳಲ್ಲಿ ಬಹುಶಃ ಅತ್ಯಂತ ಅಭಿವೃದ್ಧಿ ಹೊಂದಿದ್ದ ಭಾರತೀಯ ಬೂರ್ಜ್ವಾ ವರ್ಗ ಸ್ವಾತಂತ್ರ್ಯದ ನಂತರ ಬಂಡವಾಳಶಾಹಿ ಅಭಿವೃದ್ಧಿಯ ದಾರಿಯನ್ನು ಅನಸರಿಸುವ ಆತುರದಲ್ಲಿತ್ತು. ಆಳುವ ವರ್ಗಗಳ ಪಾತ್ರವನ್ನು ವಹಿಸಲು ಅದು ಭೂಮಾಲಕರೊಂದಿಗೆ ಮೈತ್ರಿ ಏರ್ಪಡಿಸಿಕೊಂಡಿತು ಮತ್ತು ಅಧಿಕಾರದ ವರ್ಗಾವಣೆಗೆ ಸಾಮ್ರಾಜ್ಯಶಾಹಿಯೊಂದಿಗೆ ಚೌಕಾಸಿ ನಡೆಸಿತು. ಹೀಗೆ ಅವರು ಸ್ವಾತಂತ್ರ್ಯ ಆಂದೋಲನ ಭಾರತವನ್ನು ಸಾಮ್ರಾಜ್ಯಶಾಹಿ ಮತ್ತು ಪಾಳೆಯಗಾರಿಕೆ ಇವೆರಡರಿಂದಲೂ ವಿಮೋಚನೆಗೊಳಿಸುವ ಕಾರ್ಯಭಾರವನ್ನು ಪೂರ್ಣಗೊಳಿಸದಂತೆ ಖಾತ್ರಿಪಡಿಸಿಕೊಂಡರು. ಆದ್ದರಿಂದ, ಕಮ್ಯುನಿಸ್ಟ್ ಪಕ್ಷ ಪಾಲೆಯಗಾರಿ–ವಿರೋಧಿ, ಸಾಮ್ರಾಜ್ಯಶಾಹಿ–ವಿರೋಧಿ ಮತ್ತು ಗುತ್ತೇದಾರಿ–ವಿರೋಧಿ ಈ ಮೂರು ಕಾರ್ಯಭಾರಗಳನ್ನು ಪೂರ್ಣಗೊಳಿಸುವುದು ಭಾರತೀಯ ಕ್ರಾಂತಿಯ ಪ್ರಜಾಸತ್ತಾತ್ಮಕ ಘಟ್ಟ ಎಂದು ನಿರೂಪಿಸಿತು.

ದೇಶದ ಒಳಗೂ, ಹೊರಗೂ ಕಮ್ಯುನಿಸ್ಟ್ ಆಂದೋಲನದ ಹಿತೈಷಿಗಳು 1920ರಲ್ಲಿ ಸ್ಥಾಪನೆಗೊಂಡ ಪಕ್ಷ ಸಮಾಜವಾದದ ತನ್ನ ಗುರಿಯನ್ನು ಸಾಧಿಸಲು ಸಾಧ್ಯವಾಗಲಿಲ್ಲ ಎಂಬ ಪ್ರಶ್ನೆಯನ್ನು ಎತ್ತುತ್ತಾರೆ. ಸುಮಾರಾಗಿ ಇದೇ ಕಾಲಘಟ್ಟದಲ್ಲಿ ಸ್ಥಾಪನೆಗೊಂಡ ಚೀನಾ, ವಿಯೆಟ್ನಾಂ, ಕೊರಿಯಾದ ಕಮ್ಯುನಿಸ್ಟ್ ಪಕ್ಷಗಳು ಯಶಸ್ವಿಯಾದರೂ, ಭಾರತದಲ್ಲಿ ಇದು ಸಾಧ್ಯವಾಗಲಿಲ್ಲವೇಕೆ? ಸಮರ್ಪಣಾ ಭಾವದ, ತ್ಯಾಗ–ಬಲಿದಾನಗಳ ಕೊರತೆ ಇತ್ತು ಎಂಬುದು ಇದಕ್ಕೆ ಉತ್ತರವಲ್ಲ. ಭಾರತೀಯ ಕಮ್ಯುನಿಸ್ಟರು ದೊಡ್ಡ ವರ್ಗ ಸಮರಗಳಿಗೆ ನೇತೃತ್ವ ನೀಡಿರುವ, ರಾಷ್ಟ್ರೀಯ ವಿಮೋಚನೆಗೆ ಮತ್ತು ಕಾರ್ಮಿಕ ವರ್ಗ, ರೈತಾಪಿಗಳು ಹಾಗೂ ಇತರ ಕೋಟಿಗಟ್ಟಲೆ ದಮನಿತ ವಿಭಾಗಗಳ, ಶೋಷಿತ ವಿಭಾಗಗಳ ರಕ್ಷಣೆಯಲ್ಲಿ ಅಪಾರ ತ್ಯಾಗಗಳನ್ನು ಗೈದಿರುವ ಹೆಮ್ಮೆಯ ದಾಖಲೆಗಳನ್ನು ಹೊಂದಿದ್ದಾರೆ. ಅವರು ಭಾರತದಲ್ಲಿ ಕ್ರಾಂತಿಕಾರಿ ಆಂದೋಲನದ ಅತ್ಯುತ್ತಮ ಪರಂಪರೆಯನ್ನು ಪ್ರತಿನಿಧಿಸುತ್ತಾರೆ.

ಮಾರ್ಕ್ಸ್‌ವಾದ–ಲೆನಿನ್‌ವಾದ ಒಂದು ಸೃಜನಾತ್ಮಕ ವಿಜ್ಞಾನ. "ಮೂರ್ತ ಪರಿಸ್ಥಿತಿಗಳ ಮೂರ್ತ ವಿಶ್ಲೇಷಣೆ" ಅದರ ಜೀವಂತಿಕೆಯ ಸಾರ. 'ಪರಿಸ್ಥಿತಿ'ಗಳನ್ನು ಸರಿಯಾಗಿ ಅಂದಾಜಿಸದಿದ್ದಾಗ ಅಥವ 'ವಿಶ್ಲೇಷಣೆ' ಬದಲಾದ ಪರಿಸ್ಥಿತಿಗಳಿಗೆ ಅನುಗುಣವಾಗಿ ಇಲ್ಲದಿದ್ದಾಗ ತಪ್ಪುಗಳು ಸಂಭವಿಸುತ್ತವೆ. ಕಮ್ಯುನಿಸ್ಟರು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹತ್ವದ ಪಾತ್ರ ವಹಿಸಿದರೂ, ಚೀನಾ, ವಿಯೆಟ್ನಾಂ ಅಥವ ಉತ್ತರ ಕೊರಿಯಾದಂತೆ ವಿಮೋಚನಾ ಹೋರಾಟದ ನೇತೃತ್ವವನ್ನು ವಹಿಸಲಿಲ್ಲ.

ಭಾರತೀಯ ಆಳುವ ವರ್ಗಗಳ ವರ್ಗ ಚಾರಿತ್ರ್ಯ, ಭಾರತೀಯ ಕ್ರಾಂತಿ ಹಿಡಿಯಬೇಕಾದ ದಾರಿ ಇತ್ಯಾದಿ ಮೂರ್ತ ಪರಿಸ್ಥಿತಿಗಳನ್ನು ಕುರಿತಂತೆ ಕಮ್ಯುನಿಸ್ಟರ ನಡುವಿನ ಭಿನ್ನಾಭಿಪ್ರಾಯಗಳ ಫಲಿತಾಂಶವಾಗಿ ದಶಕಗಳ ಕಾಲ ವಿವಿಧ ವಿಭಜನೆಗಳು ಆದವು. ಭಾರತೀಯ ಆಳುವ ವರ್ಗಗಳ ಚಾರಿತ್ರ್ಯದ ಸರಿಯಾದ ವಿಶ್ಲೇಷಣೆಯೊಂದಿಗೆ ಸಿಪಿಐ(ಎಂ) ವರ್ಗಸಮರಗಳಲ್ಲಿ ಭಾರತೀಯ ಜನತೆಯ ದೊಡ್ಡ ವಿಭಾಗಗಳನ್ನು ಅಣಿನೆರೆಸುವುದು ಸಾಧ್ಯವಾಯಿತು, ಈ ಮೂಲಕ ಅದು ಸ್ವತಂತ್ರ ಭಾರತದಲ್ಲಿ ಪ್ರಮುಖ ಕಮ್ಯುನಿಸ್ಟ್ ಶಕ್ತಿಯಾಗಿ ಮೂಡಿ ಬಂತು. ಭಾರತದಲ್ಲಿ ರಾಜಕೀಯ ಬೆಳವಣಿಗೆಗಳ ದಾರಿಯ ಮೇಲೆ, ಮತ್ತು ಸರಕಾರಗಳನ್ನು ರಚಿಸುವಲ್ಲಿ ಮಹತ್ವದ ಪ್ರಭಾವ ಬೀರಲು ಸಾಧ್ಯವಾಯಿತು. ಕೇರಳದಲ್ಲಿ 1957ರಲ್ಲಿ ಮೊದಲ ಕಮ್ಯುನಿಸ್ಟ್ ಸರಕಾರ, ಪಶ್ಚಿಮ ಬಂಗಾಲದಲ್ಲಿ ಎಡರಂಗ ಸರಕಾರಗಳು ಮತ್ತು ನಂತರ ತ್ರಿಪುರಾದಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗ ಸರಕಾರ ಮೂಡಿಬಂದದ್ದು, ಜತೆಗೆ ಭಾರತೀಯ ಸಂಸತ್ತಿನಲ್ಲಿ ಅದರ ಪಾತ್ರ ಆಧುನಿಕ ಭಾರತೀಯ ರಾಜಕಾರಣದ ವಿಕಾಸದಲ್ಲಿ ಮಹತ್ವದ ಕೊಡುಗೆಗಳನ್ನು ನೀಡಿದೆ.

ಆದರೂ, ಕಳೆದ ಒಂದು ದಶಕದಲ್ಲಿ ಸಿಪಿಐ(ಎಂ)ನ ಸಂಸದೀಯ ಪ್ರಭಾವ ಗಣನೀಯವಾಗಿ ಇಳಿದಿದೆ. ಬಲಪಂಥೀಯ ರಾಜಕೀಯ ದಾಳಿ ಅದರ ರಾಜಕೀಯ ಯೋಜನೆಯ ಅತ್ಯಂತ ಅಚಲ ರಾಜಕೀಯ ವಿರೋಧಿಗಳೆಂದು ಮುಖ್ಯವಾಗಿ ಕಮ್ಯುನಿಸ್ಟರ ಮೇಲೆಯೇ ಗುರಿಯಿಟ್ಟಿದೆ. ದೈಹಿಕ ಹಲ್ಲೆಗಳು, ದಮನ ಮತ್ತು ಹಿಂಸಾಚಾರ ಹಾಗೂ ಭಯೋತ್ಪಾದನೆಯ ರಾಜಕೀಯ ಸಂಸ್ಕೃತಿಯನ್ನು ಉಂಟು ಮಾಡುವ ಮೂಲಕ ಇದನ್ನು ನಡೆಸಲಾಗಿದೆ. ಇದು ಬಂಗಾಲದಲ್ಲಿ ಸಂಭವಿಸಿತು, ನಂತರ ತ್ರಿಪುರಾದಲ್ಲಿ ಸಂಭವಿಸಿತು. ಈಗ ಕೇರಳದಲ್ಲಿ ಎಲ್‌ಡಿಎಫ್ ಸರಕಾರವನ್ನು ಅಸ್ಥಿರಗೊಳಿಸುವ ಅಯಶಸ್ವಿ ಪ್ರಯತ್ನಗಳು ನಡೆಯುತ್ತಿವೆ.

ಹೀಗಾಗ್ಯೂ, ಇದೇ ಅವಧಿಯಲ್ಲಿ ಸಿಪಿಐ(ಎಂ) ಶೋಷಿತ ವರ್ಗಗಳ, ಮುಖ್ಯವಾಗಿ ಕಾರ್ಮಿಕ ವರ್ಗ ಮತ್ತು ರೈತಾಪಿ ವರ್ಗಗಳ ಹೋರಾಟಗಳನ್ನು ಸಂಘಟಿಸುವಲ್ಲಿ ಪ್ರಧಾನ ಶಕ್ತಿಯಾಗಿದೆ. ಈ ಹೋರಾಟಗಳೇ ಹಲವು ಪ್ರಶ್ನೆಗಳನ್ನು ಸಾರ್ವಜನಿಕ ಚರ್ಚೆಗಳಿಂದ ಅಳಿಸಿ ಹಾಕದಂತೆ ತಡೆದಿವೆ, ಆ ಪ್ರಶ್ನೆಗಳನ್ನು ರಾಷ್ಟ್ರೀಯ ಅಜೆಂಡಾಕ್ಕೆ ತಂದಿವೆ, ತರುತ್ತಲೇ ಇವೆ.

ಇಂದಿನ ಸವಾಲುಗಳು

ಒಂದು ಕಾರ್ಪೊರೇಟ್–ಕೋಮುವಾದಿ ಮೈತ್ರಿಕೂಟ ಪ್ರಾಬಲ್ಯವನ್ನು ಪಡೆದಿದೆ, ಅದು ಕೋಮುವಾದಿ ಕದನಕಾರೀ ರಾಷ್ಟ್ರವಾದವನ್ನು ವೈಭವೀಕರಿಸುವ, 'ರಾಷ್ಟ್ರ' ಮತ್ತು ಅದರ ಹಿತಗಳು ಜನತೆಯ ಹಿತಗಳಿಗಿಂತ ಮೇಲಿನವು, ಆದಕ್ಕಾಗಿ ಜನಗಳು 'ರಾಷ್ಟ್ರ'ದ ಹೆಸರಿನಲ್ಲಿ ತ್ಯಾಗಗಳಿಗೆ, ತಮ್ಮ ಪ್ರಜಾಪ್ರಭುತ್ವ ಹಕ್ಕುಗಳನ್ನು ಬಿಟ್ಟು ಕೊಡಲೂ ಸಿದ್ಧವಾಗಬೇಕು ಎಂಬ ತತ್ವವನ್ನು ಜೋರಾಗಿ ಪ್ರತಿಪಾದಿಸುತ್ತಿದೆ. ಇತ್ತೀಚೆಗೆ, ಲೋಕಸಭೆಯಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ಕಾಯ್ದೆಗೆ ತಿದ್ದುಪಡಿಗಳನ್ನು ಪರಿಶೀಲಿಸುತ್ತಿದ್ದಾಗ, ಗೃಹಮಂತ್ರಿಗಳು, ಈ ತಿದ್ದುಪಡಿಗಳನ್ನು ವಿರೋಧಿಸುವವರು ಭಯೋತ್ಪಾದಕರನ್ನು ಬೆಂಬಲಿಸುತ್ತಿದ್ದಾರೆ ಮತ್ತು ರಕ್ಷಿಸುತ್ತಿದ್ದಾರೆ ಎಂದು ಗುಡುಗಿದರು! ಈ ಕರಾಳ ತಿದ್ದುಪಡಿಗಳು ಎಲ್ಲ ವ್ಯಕ್ತಿಗಳ ಪ್ರಜಾಪ್ರಭುತ್ವ ಹಕ್ಕುಗಳನ್ನು ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ತೀವ್ರವಾಗಿ ಕುಂಠಿತಗೊಳಿಸುತ್ತವೆ. ಬಿಜೆಪಿ ಸರಕಾರ ಮತ್ತು ಅದರ ಧೋರಣೆಗಳ ಬಗ್ಗೆ ಯಾವುದೇ ಭಿನ್ನಾಭಿಪ್ರಾಯ, ಅದು 'ರಾಷ್ಟ್ರ–ವಿರೋಧಿ' ಎಂಬ ಕಾರಣಕ್ಕೆ ಬಂಧನ ಅಥವ ಸ್ಥಾನಬದ್ಧತೆಗೆ ದಾರಿ ಮಾಡಿಕೊಡಬಹುದು. ಅಂದರೆ ಒಂದು 'ಪೋಲೀಸ್ ಪ್ರಭುತ್ವ'ಕ್ಕೆ ಕಾನೂನಿನ ಮುದ್ರೆ ಸಿಕ್ಕಿದಂತಾಗಿದೆ.

ಇತ್ತೀಚೆಗೆ ಜಮ್ಮು ಮತ್ತು ಕಾಶ್ಮೀರದ ರಾಜ್ಯದ ಸ್ಥಾನಮಾನವನ್ನು ರದ್ದುಗೊಳಿಸಿದ್ದು, ರಾಜ್ಯದಲ್ಲಿ ಜನಗಳ ಮೇಲೆ ಸಂಪೂರ್ಣ ನಿರ್ಬಂಧ ಹೇರಿಕೆ, ಅಸ್ಸಾಂನಲ್ಲಿ ಎನ್.ಆರ್.ಸಿ. ಧಾಂಧಲೆ, ಅದನ್ನು ದೇಶದ ಉಳಿದ ಭಾಗಗಳಿಗೂ ವಿಸ್ತರಿಸುವ ಬೆದರಿಕೆ, ಭಾರತದ ಪೌರತ್ವವನ್ನು ಧರ್ಮದ ಆಧಾರದಲ್ಲಿ ನಿರೂಪಿಸುವ. ಮುಸ್ಲಿಮರನ್ನು ಹೊರಗಿಡುವ ಪೌರತ್ವ ತಿದ್ದುಪಡಿ ಮಸೂದೆ ಇವೆಲ್ಲವೂ ಇಂದು ಜಾತ್ಯತೀತ ಪ್ರಜಾಸತ್ತಾತ್ಮಕ ಸಂವಿಧಾನ ವ್ಯವಸ್ಥೆಯ ಉಳಿವೇ ಪಣಕ್ಕೊಡ್ಡಲ್ಪಟ್ಟಿದೆ ಎಂಬುದರ ಸ್ಪಷ್ಟ ಸಂಕೇತಗಳು.

ಈ ಬಲಪಂಥೀಯ ರಾಜಕೀಯ ಕ್ರೋಡೀಕರಣಕ್ಕೆ ಸವಾಲು ಎಡಪಂಥ ಮತ್ತು ಮಧ್ಯ–ಎಡಪಂಥದ ರಾಜಕೀಯ ಕ್ರೋಡೀಕರಣದಿಂದಲೇ ಬರಬೇಕು

ಸಿಪಿಐ(ಎಂ) ಈ ಸವಾಲನ್ನು ಎದುರಿಸಲು ದೃಢನಿರ್ಧಾರ ಮಾಡಿದೆ. ಈ ಶತಮಾನೋತ್ಸವದ ಆಚರಣೆ ಒಂದು ಸ್ಫೂರ್ತಿಯ ಸ್ರೋತವೂ ಮತ್ತು ನಮ್ಮ ನ್ಯೂನತೆಗಳನ್ನು ನಿವಾರಿಸಿಕೊಂಡು ಕಮ್ಯುನಿಸ್ಟ್ ಆಂದೋಲನವನ್ನು ಗಟ್ಟಿಗೊಳಿಸುವ ಒಂದು ಸಂದರ್ಭವೂ ಆಗಿದೆ. ನಮ್ಮ ಸಂವಿಧಾನಿಕ ವ್ಯವಸ್ಥೆಯನ್ನು ರಕ್ಷಿಸಿಕೊಳ್ಳಲು ಮತ್ತು ಅದನ್ನು ಶೋಷಣೆಯನ್ನು ಕೊನೆಗೊಳಿಸುವತ್ತ ಒಯ್ಯಲು ಈ ಎರಡಕ್ಕೂ ಇದು ಅತ್ಯಗತ್ಯ.

ಮೌಲಾನಾ ಹಸ್ರತ್ ಮೊಹಾನಿ ರಚಿಸಿದ ಮತ್ತು ಭಗತ್ ಸಿಂಗ್ ಅಮರಗೊಳಿಸಿದ ಘೋಷಣೆ– ಇಂಕ್‌ಲಾಬ್ ಜಿಂದಾಬಾದ್–ಇಂದಿನ ಕೋಮುವಾದಿ ರಾಷ್ಟ್ರವಾದೀ ಅಬ್ಬರದ ದಾಳಿಯನ್ನು ಎದುರಿಸುವ ರಣಕಹಳೆಯಾಗಿದೆ. ಎಲ್ಲರನ್ನೂ ಒಳಗೊಳ್ಳುವ ಭಾರತ ಜಯಶಾಲಿಯಾಗುತ್ತದೆ. ಜನತಾ ಪ್ರಜಾಪ್ರಭುತ್ವವನ್ನು ಸ್ಥಾಪಿಸುವ ಮತ್ತು ಅದನ್ನು ಸಮಾಜವಾದದತ್ತ ಮುನ್ನಡೆಸುವ ಹೋರಾಟಗಳು ಕ್ರೋಡೀಕರಣಗೊಳ್ಳುತ್ತವೆ. ●

ಉದ್ಯೋಗ ಸೃಷ್ಟಿಸಿ, ನಿರುದ್ಯೋಗದಿಂದ ರಕ್ಷಿಸಿ ಉದ್ಯೋಗದಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಿ



ಉದ್ಯೋಗದ ಹಕ್ಕು ಯುವಜನರ ಮೂಲಭೂತ ಹಕ್ಕು. ಉದ್ಯೋಗ ವಂಚಿತ ಯುವಜನರ ಜೀವನ ನರಕ ಸದೃಶ. ಸ್ವತಂತ್ರ ಭಾರತದಲ್ಲಿ ನೆಮ್ಮದಿ, ಘನತೆಯ ಬದುಕು ಸಾಗಿಸಬಲ್ಲ ಉದ್ಯೋಗವನ್ನು ಪಡೆಯುವ ಯುವಜನರ ಕನಸು ಈಡೇರಲೇ ಇಲ್ಲ. ಉದ್ಯೋಗದ ಹಕ್ಕಿಗಾಗಿ ನಿರಂತರವಾಗಿ ಧ್ವನಿ ಎತ್ತುತ್ತಲೇ ಬಂದಿದ್ದರೂ 'ಸರ್ವರಿಗೂ ಉದ್ಯೋಗ' ಎಂಬ ಸಂವಿಧಾನದ ಆಶಯವನ್ನು ಜಾರಿಗೆ ತರಲು ನಮ್ಮನ್ನಾಳುವ ಸರಕಾರಗಳು ಗಂಭೀರ ಪ್ರಯತ್ನ ಮಾಡಲೇ ಇಲ್ಲ. ನವ ಉದಾರೀಕರಣದ ನೀತಿಗಳು ಜಾರಿಗೆ ಬಂದ ನಂತರವಂತೂ ಇರುವ ಉದ್ಯೋಗಗಳನ್ನೂ ಕಸಿದು ಕೊಳ್ಳಲಾಗುತ್ತಿದೆ. ಅದರಲ್ಲೂ ವರ್ಷಕ್ಕೆ ಎರಡು ಕೋಟಿ ಉದ್ಯೋಗ ಸೃಷ್ಟಿಯ ಭರವಸೆ ನೀಡಿ ಅಧಿಕಾರಕ್ಕೆ ಬಂದ ಮೋದಿ ಸರಕಾರದ ಅವಧಿಯಲ್ಲಿ ಇರುವ ಉದ್ಯೋಗಗಳೂ ದೊಡ್ಡ ಪ್ರಮಾಣದಲ್ಲಿ ನಷ್ಟಗೊಂಡ ಯುವಜನರು ಬೀದಿಗೆ ಬೀಳುತ್ತಿದ್ದಾರೆ.

ಕರ್ನಾಟಕ ರಾಜ್ಯ ಸರಕಾರದ ಅಧೀನದಲ್ಲಿ ಇರುವ ಇಲಾಖೆಗಳಲ್ಲಿ ಸರಿ ಸುಮಾರು ಎರಡು ಲಕ್ಷ ಉದ್ಯೋಗಗಳು ಖಾಲಿ ಬಿದ್ದಿವೆ. ಕೇಂದ್ರ ಸರಕಾರ, ಸಾರ್ವಜನಿಕ ರಂಗದ ಉದ್ಯಮಗಳಲ್ಲಿಯೂ ಲಕ್ಷಾಂತರ ಉದ್ಯೋಗಗಳು ಖಾಲಿ ಬಿದ್ದಿವೆ. ಹೊಸ ಉದ್ಯೋಗಗಳನ್ನು ಸೃಷ್ಟಿಮಾಡಲಾಗದ ಸರಕಾರಗಳು ಖಾಲಿ ಬಿದ್ದಿರುವ ಉದ್ಯೋಗಗಳನ್ನೂ ಭರ್ತಿ ಮಾಡುತ್ತಿಲ್ಲ. ಬದಲಿಗೆ ಲಕ್ಷಾಂತರ ಉದ್ಯೋಗವನ್ನು ಸೃಷ್ಟಿಸಿರುವ ರೈಲ್ವೆ, ಟೆಲಿಕಾಂ, ಬ್ಯಾಂಕಿಂಗ್ ಸಹಿತ ತನ್ನ ಅಧೀನದ ಇಲಾಖೆಗಳ ಉದ್ಯೋಗಗಳನ್ನು ಕಡಿತಗೊಳಿಸುತ್ತಿದೆ. ಮತ್ತೊಂದೆಡೆ ಸರಕಾರಗಳ ತಪ್ಪಾದ ಆರ್ಥಿಕ ನೀತಿಗಳಿಂದಾಗಿ ಖಾಸಗಿ ರಂಗದ ಉದ್ಯಮಗಳು ಲಕ್ಷಗಟ್ಟಲೆ ಸಂಖ್ಯೆಯ ಕಾರ್ಮಿಕರನ್ನು ಹೊರದಬ್ಬುತ್ತಿವೆ. ಗುತ್ತಿಗೆ, ಹೊರಗುತ್ತಿಗೆ ಪದ್ಧತಿಯಲ್ಲಿ ಅರೆ ಉದ್ಯೋಗ, ಅರೆ ಸಂಬಳ ಪದ್ಧತಿ ಮೂಲಕ ಕಾರ್ಮಿಕರ ಬದುಕನ್ನು ಅತಂತ್ರವಾಗಿಡುತ್ತಿವೆ.

ಇದಲ್ಲದೆ ಖಾಸಗಿ ಉದ್ದಿಮೆಗಳು ತಮ್ಮ ಕೈಗಾರಿಕೆ, ಉದ್ಯಮಗಳಲ್ಲಿ ಕನ್ನಡಿಗರನ್ನು, ಸ್ಥಳೀಯರನ್ನು ನೇಮಕಾತಿ ಮಾಡಿಕೊಳ್ಳದೆ ಹೊರ ರಾಜ್ಯದ ಕಾರ್ಮಿಕರನ್ನು ತಂದು ತುಂಬಿಕೊಳ್ಳುತ್ತವೆ. ಬ್ಯಾಂಕ್, ರೈಲ್ವೆಯಂತಹ ಕ್ಷೇತ್ರದಲ್ಲಿ ಹಿಂದಿ ಭಾಷಿಕರೇ ತುಂಬಿಕೊಂಡಿದ್ದಾರೆ. ಈ ಹಿನ್ನಲೆಯಲ್ಲಿ ಉದ್ಯೋಗ ಸೃಷ್ಟಿಯಲ್ಲಿ ಸರಕಾರದ ವೈಫಲ್ಯವನ್ನು ಖಂಡಿಸಿ, ಸ್ಥಳೀಯವಾಗಿ ಉದ್ಯೋಗವನ್ನು ಸೃಷ್ಟಿಸಬೇಕು, ಸ್ಥಳೀಯರನ್ನೇ ಆದ್ಯತೆಯಲ್ಲಿ ನೇಮಕಾತಿ ಮಾಡಿಕೊಳ್ಳಬೇಕು, ಖಾಲಿ ಬಿದ್ದಿರುವ ಸರಕಾರಿ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಿ ಡಿವೈಎಫ್ಐ ರಾಜ್ಯಾದ್ಯಂತ ಆಂದೋಲನಕ್ಕೆ ಕರೆ ನೀಡಿದ್ದು, ಅದರಂತೆ ಗೌರಿಬಿದನೂರು ತಾಲೂಕು ಕಚೇರಿಯ ಮಾನ್ಯ ತಹಶೀಲ್ದಾರ್ ರವರಿಗೆ ಮನವಿ ನೀಡಲಾಯಿತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸ್ಥಳೀಯ ಸಂಪನ್ಮೂಲ ಬಳಸಿ ಉದ್ಯೋಗಗಳನ್ನು ಸೃಷ್ಟಿಸಬೇಕು, ಜಿಲ್ಲೆಯಲ್ಲಿ ಖಾಲಿ ಬಿದ್ದಿರುವ ಸರಕಾರಿ ಉದ್ಯೋಗಗಳನ್ನು ಭರ್ತಿಮಾಡಬೇಕು ಆ ಮೂಲಕ ಚಿಕ್ಕಬಳ್ಳಾಪುರ ಜಿಲ್ಲೆಯ ಯುವಜನರಿಗೆ ಘನತೆಯ ಬದುಕಿಗೆ ತಕ್ಕುದಾದದ ಉದ್ಯೋಗಗಳನ್ನು ಸೃಷ್ಟಿಸಲು ಸರಕಾರ ಮುಂದಾಗಬೇಕು ಎಂದು ಅಗ್ರಹಿಸಿದರು.

ಕುಡಮಲಕುಂಟೆ ಕೈಗಾರಿಕ ಪ್ರದೇಶದಲ್ಲಿ ಜಮೀನು ಕಳೆದುಕೊಂಡಿರುವ ರೈತರ ಕುಟುಂಬಕ್ಕೆ ಎರಡು ಉದ್ಯೋಗ ನೀಡಬೇಕು. ಕುಡುಮಲಕುಂಟೆ ಕೈಗಾರಿಕ ಪ್ರದೇಶದಲ್ಲಿರುವ ಕಾರ್ಖಾನೆಗಳಲ್ಲಿ ಕಡ್ಡಾಯವಾಗಿ ಸ್ಥಳೀಯರಿಗೆ ಉದ್ಯೋಗದ ಅದ್ಯತೆ ನೀಡಬೇಕು. ಕೃಷಿ ಅಧಾರಿತ ಕೈಗಾರಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು.

ಗುತ್ತಿಗೆ, ಹೊರ ಗುತ್ತಿಗೆ ಅರೆ ಗುತ್ತಿಗೆ ಕ್ರಮವನ್ನು ಕೈಬಿಡಬೇಕು. ಗೌರಿಬಿದನೂರು ತಾಲೂಕಿನಲ್ಲಿ ಹೊಸ ಕೈಗಾರಿಕೆಗಳನ್ನು ಸೃಷ್ಟಿಸಿ ನಿರುದ್ಯೋಗಿ ಯುವಕರಿಗೆ ಉದ್ಯೋಗ ಸೃಷ್ಟಿಸಬೇಕು. ಕೈಗಾರಿಕೆಗಳಲ್ಲಿ ಹಿಂದಿ ಭಾಷೆ ಹೇರಿಕೆಯನ್ನು ಬಿಡಬೇಕು. ಚಿಕ್ಕಬಳ್ಳಾಪುರ ಜಿಲ್ಲಾಯಲ್ಲಿನ ಖಾಲಿ ಸರ್ಕಾರಿ ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಮಾಡಬೇಕು.

ತಾಷ್ಕೆಂಟಿನಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ ಸ್ಥಾಪನೆ

ಪುಟ 9 ರಿಂದ

ರಾಜಕೀಯ ಪಕ್ಷ ಅಥವಾ ಗುಂಪು ಭಾರತದಲ್ಲಿ ಎತ್ತುವ ಮುಂಚೆಯೇ ಸಂಪೂರ್ಣ ಸ್ವಾತಂತ್ರ್ಯದ ಘೋಷಣೆಯನ್ನು ಸಿಪಿಐ ಎತ್ತಿದೆ. ಗಮನಾರ್ಹವಾದ ಅಂಶವೆಂದರೆ ಎಂ.ಎನ್.ರಾಯ್ ಮತ್ತು ಅಬಾನಿ ಮುಖರ್ಜಿ ಅಹಮದಾಬಾದ್ ಕಾಂಗ್ರೆಸ್ಸಿಗೆ ತಮ್ಮ ಪ್ರಣಾಳಿಕೆಯನ್ನು ಕಳಿಸಿದ ಸಮಯದಲ್ಲೇ, ಕಾಂಗ್ರೆಸ್ಸಿನಲ್ಲೇ ಹಸ್ರತ್ ಮೋಹಾನಿಯವರು ಒಂದು ನಿರ್ಣಯ ಮಂಡಿಸಿ ಸ್ವರಾಜ್ ಎಂದರೆ ವಿದೇಶಿ ಆಳ್ವಿಕೆಯಿಂದ ಸಂಪೂರ್ಣ ಸ್ವಾತಂತ್ರ್ಯ ಎಂದು ಸ್ಪಷ್ಟಪಡಿಸಿದ್ದರು. ಹಸ್ರತ್ ಮೋಹಾನಿಯವರು ಸಮತಾವಾದ (ಕಮ್ಯುನಿಸಂ)ದಿಂದ ಪ್ರಭಾವಿತರಾಗಿದ್ದರು ಮತ್ತು ಪಕ್ಷದ ಸದಸ್ಯರಾದರು. ಅದು ಕಾರ್ಯಸಾಧ್ಯವಲ್ಲದ್ದು ಎಂದು ಆ ನಿರ್ಣಯವನ್ನು ಗಾಂಧಿ ವಿರೋಧಿಸಿದ್ದರು.

ಎಂ.ಎನ್.ರಾಯ್ ಭಾರತದಲ್ಲಿ ಎದ್ದುಬರುತ್ತಿದ್ದ ಹಲವಾರು ಕಮ್ಯುನಿಸ್ಟ್ ಗುಂಪುಗಳ ಮುಖಂಡರುಗಳನ್ನು ಕಾಮಿಂಟರ್ನ್‌ನ ಸಹಾಯದೊಂದಿಗೆ ಸಂಪರ್ಕಿಸಲು, ಪ್ರಯತ್ನಿಸಿದರು. ಎಸ್.ಎ.ಡಾಂಗೆ(ಮುಂಬೈ), ಮುಜಫರ್ ಅಹಮದ್(ಕಲ್ಕತ್ತಾ), ಸಿಂಗಾರವೇಲು ಚೆಟ್ಟಿಯಾರ್(ಮದ್ರಾಸ್) ಮತ್ತಿತರರಿಗೆ ಪತ್ರ ಬರೆದು ಪಕ್ಷವನ್ನು ಹೇಗೆ ರಚಿಸಬೇಕು ಮತ್ತು ಚಟುವಟಿಕೆಗಳನ್ನು ಸಂಘಟಿಸಬೇಕು ಎನ್ನುವ ಸೂಚನೆ ನೀಡಿದರು.

1922-23ರ ಅವಧಿಯಲ್ಲಿ, ಬರ್ಲಿನ್ನಿನಿಂದ ರಾಯ್ ಅವರಿಂದ ಪ್ರಕಟವಾಗುತ್ತಿದ್ದ ಭಾರತ ಕಮ್ಯುನಿಸ್ಟ್ ಪಕ್ಷದ ಮೊದಲ ಘೋಷಿತ ಪತ್ರಿಕೆ ವ್ಯಾನ್‌ಗಾರ್ಡ್ ಆಫ್ ಇಂಡಿಯನ್ ಇಂಡಿಪೆಂಡೆನ್ಸ್(ಭಾರತೀಯ ಸ್ವಾತಂತ್ರ್ಯದ ಮುಂಚೂಣಿ) ಭಾರತದಲ್ಲಿ ಕಮ್ಯುನಿಸ್ಟ್ ಪ್ರಚಾರವನ್ನು ಮತ್ತು ವಿಚಾರಗಳನ್ನು ಹರಡಲು ಸಹಾಯಮಾಡಿತು. ಇಂತಹ ಪ್ರಚಾರದ ಅಪಾಯವನ್ನು ಅರಿತ ಬ್ರಿಟಿಷ್ ಸರ್ಕಾರವು ಭಾರತದೊಳಕ್ಕೆ ವ್ಯಾನ್‌ಗಾರ್ಡ್ ಪ್ರವೇಶಿಸುವುದನ್ನು ನಿಷೇಧಿಸಿತು.

1920 ಮತ್ತೊಂದು ಗಮನಾರ್ಹವಾದ ವರ್ಷ, ಆಗ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್(ಎಐಟಿಯುಸಿ) ಪ್ರಾರಂಭವಾಯಿತು. ಸುಧಾರಣಾವಾದಿ ದೃಷ್ಟಿಕೋನದೊಂದಿಗೆ ಅದು ಪ್ರಾರಂಭವಾದರೂ, ಕೆಲವೇ ವರ್ಷಗಳೊಳಗೆ ಕಮ್ಯುನಿಸ್ಟರ ಭಾಗವಹಿಸುವಿಕೆಯಿಂದ, ಕಾರ್ಮಿಕ ಸಂಘಗಳ ಈ ಕೇಂದ್ರವು ಕಾರ್ಮಿಕ ವರ್ಗದ ಸಮರಶೀಲ ವೇದಿಕೆಯಾಗಿ ಹೊರಹೊಮ್ಮಿತು.

ಆದ್ದರಿಂದಲೇ 1920ರಲ್ಲಿ ತಾಷ್ಕೆಂಟನಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯನ್ನು ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಿದ ಮೊದಲನೆಯ ಹೆಜ್ಜೆಯೆಂದು ಕಾಣಬೇಕು. ●

ಆ ರಾಮ ಈ ರಾಮನಲ್ಲ

ಕವನ

ಕಾಡಿ ಬೇಡಿದರೂ ಬೇಡಿ ಸುತ್ತಿದರೂ
ತಲೆಯ ಸಾಣೆಮಾಡಿ
ಬಂಧೂಕದ ತಿದಿ
ಗಸಗಸನೆ ತೇಯ್ದರೂ
ಮೆದುಳು ಲಾಡಿಯ ಮಾಡಿ
ಹೊಸೆಹೊಸೆದು ಬೀಸಿದರೂ
ಕೂಗಲಾರೆನಯ್ಯ
ಜೈ ಶ್ರೀರಾಮ್
ಕೊನರು ಕೊರಡುವುದಯ್ಯ


ಆ ರಾಮ ಈ ರಾಮನಲ್ಲ
ಮೀನು ಆಮೆ ಹಂದಿ ತೊಡದೆ
ಬುದ್ಧನಗೊಗ್ಗದ ಕಳ್ಳ
ಅನಿಮೇಷನ್ ಹೊಡದ ಬಣ್ಣ ತಿಂದು ಧರ್ಮದ ಕಳ್ಳು
ಕುಡಿದು ಮತ್ತೇರಿದ ಮಳ್ಳ

ಆ ರಾಮ ಈ ರಾಮನಲ್ಲ
ಅಗೆದಷ್ಟು ಮೊಗೆಮಗೆವ
ವರ್ತೀನೀರಲ್ಲ
ಹುತ್ತದಲಿ ಕಾಪಿಟ್ಟು ಚರಿತೆಯಾದವನಲ್ಲ
ಅಪ್ಪನಿಲ್ಲ ಅಮ್ಮನಿಲ್ಲ ಬಂಧುಬಾಂಧವರಿಲ್ಲ ಪ್ರಶ್ನೆ ಉತ್ತರವಿಲ್ಲ
ಅರಾಮಿ ಜನರ ಹರಾಮಿ ಹದಕೆ
ಕೊಳೆತು ಮಲೆಮಲೆತು
ಕುರ್ಚಿಕಾಮೇಷ್ಠಿಯಲಿ ದುತ್ತೆಂದು ಎದ್ದವ
91ಕ್ಕೆ ಹುಟ್ಟಿ 92ಕ್ಕೆ ಚಿಗಿತು
ಮಾರುದ್ದ ಬೆಳೆದ ದಂಡ
ಉದ್ದಂಡ ಕೋದಂಡ ತೋರ್ದಂಡ ಕೇಸರಿಯ ಕೆಂಡ.
ಚಡ್ಡಿ ವೀರರ ತುರಿಕೆಗೆ ಗೋರಿ ಕೆಬರಿದ ಕಿಡಿಗೇಡಿ
ಬಡವನೆದೆ ಅಂಗಳದ ಆಕಸ್ಮಿಕ ಬಣ್ಣಕೆ
ಬಾಣದ ಗುರಿಇಟ್ಟ ಬುದ್ಧಿಗೇಡಿ
ಹಾಲಾಹಲಕಿಳಿದು ವಿಷದ ಪಣಬಡಿದ ತೆರೆಯ ಮೈತೀಡಿ
ಕೋಲಾಹಲ ಕೆರಳಿಸಿದ ಮಾಯಾವಾಡಿ
ಹೆದ್ದಾರಿ ತುಂಬೆಲ್ಲ
ರಕ್ತ ಮಾಂಸದ ಕೆಸರು ಬೀದಿರಾಡಿ.

ಆ ರಾಮ ಇದ್ದಾನೆ ಇಲ್ಲೆ
ನನ್ನಲ್ಲಿ ನಿಮ್ಮಲ್ಲಿ ಈ ನೆಲದ ಪ್ರೀತಿಯಲಿ
ಕೂಗಿ ಕರೆವುದೆ ಬೇಡ.
ಕಾಡು ಮೇಡನು ಅಲೆದು
ಬಳಲಿ ಬಸವಳಿದು ಹಸಿದು
ಶಬರಿ ಎಂಜಲು ತಿಂದು ಎತ್ತಾದ ರಾಮ.
ಬೆವರ ಕೌದಿಯಹೊದ್ದು ಕೋಟಿ ಸೂರ್ಯರ ಹೆಣೆದು
ಸೀತೆಯ ಒಡಲೊಳಗೆ ನೇಗಿಲದ ಗೆರೆ ಕೊರೆದು
ನಗೆಯ ತೆನೆ ಚಿಮ್ಮಿಸಿದ ರಾಗಿರಾಮ.
ಗೋರಿ ಬೆದಕುವನಲ್ಲ ಗುಡಿಯ ಬಯಸುವನಲ್ಲ
ರಾಮರಾಮ ಜಯ ಸೀತಾರಾಮ
ಈಶ್ವರ ಅಲ್ಲಾ ತೇರೇ ನಾಮ.

– *ಪಿ.ಆರ್. ವೆಂಕಟೇಶ್*

ಕಾಶ್ಮೀರ ಕಣಿವೆಯಲ್ಲಿ ಎರಡು ತಿಂಗಳು ದಾಟಿದ ನಿರ್ಬಂಧ



ಚಿತ್ರ: ಮಿರ್ ಸುಹೈಲ್, ನ್ಯೂಸ್18

ಇರುವುದು 4 ಸಾವಿರ ದೇವಾಲಯಗಳು, ತೆರೆಸುವುದು 50 ಸಾವಿರ!


ಕಾಶ್ಮೀರ ಕಣಿವೆಯಲ್ಲಿ 90ರ ದಶಕದಲ್ಲಿ ತೀವ್ರವಾದ ಉಗ್ರಗಾಮಿತ್ವದ ಹಿನ್ನೆಲೆಯಲ್ಲಿ ಮುಚ್ಚಿದ, ಹಾಳಾದ ದೇವಸ್ಥಾನಗಳನ್ನು ತೆರೆಯಬೇಕು, ದುರಸ್ತಿ ಮಾಡಬೇಕು ಎನ್ನುವುದು ಕಾಶ್ಮೀರಿ ಪಂಡಿತ ಸಮುದಾಯದ ಒಂದು ಬೇಡಿಕೆ. ಕಲಮು 370ನ್ನು ನಿಷ್ಕ್ರಿಯಗೊಳಿಸಿದ ನಂತರ ಕೇಂದ್ರ ಮಂತ್ರಿ ಜಿ.ಕೃಷ್ಣ ರೆಡ್ಡಿಯವರು ಸರಕಾರ 50 ಸಾವಿರ ದೇವಸ್ಥಾನಗಳು ಮತ್ತೆ ತೆರೆಯುವಂತೆ ಮಾಡುತ್ತದೆ ಎಂದು 'ಆಶ್ವಾಸನೆ' ನೀಡಿದ್ದಾರೆ. ಈ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿರುವ 'ಕಾಶ್ಮೀರಿ ಪಂಡಿತ್ ಸಂಘರ್ಷ ಸಮಿತಿ'(ಕೆಪಿಎಸ್‌ಎಸ್)ಯ ಮುಖ್ಯಸ್ಥರಾದ ಸಂಜಯ್ ಟಿಕ್ಕೂ ಇದೊಂದು ಅಪಾಯಕಾರಿ ಹೇಳಿಕೆ ಎಂದಿದ್ದಾರೆ.(ದಿ ವೈರ್, ಅಕ್ಟೋಬರ್ 5)

ಆಶ್ಚರ್ಯ ಏಕೆಂದರೆ ಕಾಶ್ಮೀರ ಕಣಿವೆಯಲ್ಲಿ ಇರುವುದು ಹೆಚ್ಚೆಂದರೆ 4000 ದೇವಸ್ಥಾನಗಳು, ಹೀಗಿರುವಾಗ ಸರಕಾರ 50,000 ದೇವಸ್ಥಾನಗಳನ್ನು ಮತ್ತೆ ತೆರೆಸುವುದು ಹೇಗೆ? ಅಪಾಯಕಾರಿ ಏಕೆಂದರೆ, ಈಗಾಗಲೇ ಕಲಮು 370ರ ರದ್ದತಿ ಕಣಿವೆಯಲ್ಲಿ ಕೋಮುಧ್ರುವೀಕರಣಕ್ಕೆ ಕಾರಣವಾಗುತ್ತಿದೆ. ಸರಕಾರದ ಪ್ರತಿನಿಧಿಗಳ ಇಂತಹ ಹೇಳಿಕೆಗಳು ಇದನ್ನು ಇನ್ನಷ್ಟು ಆಳಗೊಳಿಸಿ ಇನ್ನೂ ಕಣಿವೆಯಲ್ಲಿ ಉಳಿದಿರುವ ಪಂಡಿತ ಸಮುದಾಯದ ಕುಟುಂಬಗಳನ್ನು ಮತ್ತೆ ಅಭದ್ರಗೊಳಿಸಬಹುದು ಎಂದು ಅವರು ಹೇಳುತ್ತಾರೆ. ವಾಸ್ತವವಾಗಿ ಈ ಸರಕಾರಕ್ಕೆ ಪಂಡಿತ್ ಸಮುದಾಯದ ಭದ್ರತೆಯ, ಕಲ್ಯಾಣದ ಗೊಡವೆ ಇಲ್ಲ, ಅವರಿಗೆ ವಲಸಿಗರ ಭದ್ರತೆಯೇ ಮುಖ್ಯ, ವಾಸ್ತವವಾಗಿ ಅವರಿಗೆ ಕಾಶ್ಮೀರಿಗಳೇ ಬೇಕಿಲ್ಲ, ಕಾಶ್ಮೀರ ಮಾತ್ರ ಬೇಕು ಎಂದು ಇವರು ಖೇದದಿಂದ ಹೇಳುತ್ತಾರೆ.

'ಬದುಕು ಸಾಮಾನ್ಯವಾಗಿಲ್ಲ' ಎಂದು ಒಪ್ಪಿಕೊಂಡ ಸರಕಾರೀ ಜಾಹೀರಾತು!

ಈ ನಡುವೆ ಜಮ್ಮು ಮತ್ತು ಕಾಶ್ಮೀರದಲ್ಲಿ ಸಂಪೂರ್ಣ ನಿರ್ಬಂಧದ 68ನೇ ದಿನ, ಅಕ್ಟೋಬರ್ 11ರಂದು ರಾಜ್ಯ ಸರಕಾರ(?) ಸ್ಥಳೀಯ ಪತ್ರಿಕೆಗಳಲ್ಲಿ ಮುಖಪುಟದ ಬಣ್ಣದ ಜಾಹೀರಾತುಗಳನ್ನು ಕೊಟ್ಟಿದೆ. ಅದರಲ್ಲಿ ಜನಗಳು ತಮ್ಮ "ಸಾಮಾನ್ಯ ಬದುಕ"ನ್ನು ಮತ್ತೆ ಆರಂಭಿಸಬೇಕು ಎಂದು ಆಗ್ರಹಿಸಲಾಗಿದೆ. ಅಂದರೆ ಇದುವರೆಗೆ ಅವರ ಬದುಕು ಸಾಮಾನ್ಯವಾಗಿಲ್ಲ ಎಂದು ಸರಕಾರ ಒಪ್ಪಿಕೊಳ್ಳುತ್ತಿದೆಯೇ? ಹಾಗಿದ್ದರೆ, ಜಮ್ಮು ಮತ್ತು ಕಾಶ್ಮೀರದಲ್ಲಿ ಎಲ್ಲವೂ ಸಾಮಾನ್ಯವಾಗಿದೆ, ಸಮಸ್ಯೆಗಳಿಲ್ಲ, ಅದು ಏನಾದರೂ ಇದ್ದರೆ ಪ್ರತಿಪಕ್ಷಗಳ ತಲೆಯಲ್ಲಿ ಮಾತ್ರ ಎಂದು ದೇಶದ ಗೃಹಮಂತ್ರಿಗಳೇ ಸಾರಿದ್ದರಲ್ಲಾ ಎಂದು ಮಾಧ್ಯಮಗಳಲ್ಲಿ ಪ್ರಶ್ನಿಸಲಾಗುತ್ತಿದೆ.

"ಮುಚ್ಚಿದ ಅಂಗಡಿಗಳು, ಸಾರ್ವಜನಿಕ ಸಾರಿಗೆ ಇಲ್ಲ, ಇದರಿಂದ ಪ್ರಯೋಜನ ಯಾರಿಗೆ?" ಎಂಬ ಶಿರೋನಾಮೆಯ ಈ ಸರಕಾರೀ ಜಾಹೀರಾತು ನಾವು ಉಗ್ರಗಾಮಿಗಳಿಗೆ ತಲೆಬಾಗಬೇಕೇ ಎಂದು ಪ್ರಶ್ನಿಸುತ್ತಿದೆ. ಇದು ಯಾರು ಯಾರಿಗೆ ಕೇಳಬೇಕಾದ ಪ್ರಶ್ನೆ?



(ವಿದೇಶಿ)ಪ್ರವಾಸಿಗರಿಗೆ 'ಸ್ವಾಗತ' –ಪ್ರೆಸ್ ಕೌನ್ಸಿಲ್ ತಂಡಕ್ಕೆ 'ಕಾಯಿರಿ'

ಆಗಸ್ಟ್2 ರಂದು ಜಮ್ಮು ಮತ್ತು ಕಾಶ್ಮೀರದ ರಾಜ್ಯಪಾಲರು ಆಗ ಕಾಶ್ಮೀರಕ್ಕೆ ಬಂದಿದ್ದ ಪ್ರವಾಸಿಗರಿಗೆ ಬೇಗನೇ ಇಲ್ಲಿಂದ ಹೊರಡಿ ಎಂದು 'ಸಲಹಾ ಆದೇಶ' ಜಾರಿ ಮಾಡಿದ್ದರು. ಅಕ್ಟೋಬರ್ 9ರಂದು ಅದನ್ನು ಹಿಂತೆಗೆದುಕೊಳ್ಳಲಾಗಿದೆ ಎಂದು ಪ್ರಕಟಿಸಲಾಗಿದೆ. ಅಂದರೆ ಪ್ರವಾಸಿಗರಿಗೆ 'ಸ್ವಾಗತ' ಈಗ ಚಳಿಗಾಲ ಆರಂಭವಾಗಿರುವುದರಿಂದಾಗಿ ದೇಶದೊಳಗಿನ ಪ್ರವಾಸಿಗರು ಈ ಅವಧಿಯಲ್ಲಿ ಸಾಮಾನ್ಯವಾಗಿ ಬರುವುದಿಲ್ಲ, ವಿದೇಶಿ ಪ್ರವಾಸಿಗರೇ ಹೆಚ್ಚಾಗಿ ಬರುವುದು. ಅಂದರೆ ವಿದೇಶಿ ಪ್ರವಾಸಿಗರಿಗೆ ಸ್ವಾಗತ ಎಂದರೂ ತಪ್ಪಾಗಲಿಕ್ಕಿಲ್ಲ ಎಂದು ಒಬ್ಬ ವಿಶ್ಲೇಷಕರು ಹೇಳಿದ್ದಾರೆ.

ಅದೇ ದಿನ, ರಾಜ್ಯಕ್ಕೆ ಭೇಟಿ ನೀಡಲು ಅನುಮತಿ ಕೋರಿದ್ದ ಭಾರತದ ಪತ್ರಿಕಾ ಮಂಡಳಿ (ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ)ಗೆ ಸರಕಾರದಿಂದ ಒಂದು ಪತ್ರ ಹೋಗಿದೆ.– 'ನವಂಬರ್ 4ರ ನಂತರ' ಯಾವಾಗ ಬೇಕಾದರೂ ಬರಬಹುದು ಎಂದು!

ಕಾಶ್ಮೀರದಲ್ಲಿ ಪತ್ರಿಕಾ ಸ್ವಾತಂತ್ರ್ಯದ ಮೇಲೆ ತೀವ್ರ ನಿರ್ಬಂಧದ ಬಗ್ಗೆ ಬಹಳಷ್ಟು ಪ್ರತಿಭಟನೆಗಳು ಬಂದಿದ್ದು, ಸುಪ್ರಿಂ ಕೋರ್ಟಿಗೂ ಈ ದೂರು ಹೋಗಿದೆ. ಆದರೆ ಪತ್ರಿಕಾ ಮಂಡಳಿಯ ಅಧ್ಯಕ್ಷರು ಈ ವಿಚಾರದಲ್ಲಿ ಸರಕಾರದ ಪರ ಮಧ್ಯಪ್ರವೇಶಿಸುವುದಾಗಿ ಹೇಳಿದಾಗ ವಿವಾದ ಸೃಷ್ಟಿಯಾಗಿತ್ತು. ಪತ್ರಕರ್ತರ ಪ್ರತಿಭಟನೆಗಳ ನಂತರ ಪತ್ರಿಕಾಮಂಡಳಿ ತನ್ನ ನಿಲುವನ್ನು ಬದಲಿಸಿತು. ಈ ಹಿನ್ನೆಲೆಯಲ್ಲಿ ಮಂಡಳಿಯ ನಾಲ್ವರು ಸದಸ್ಯರ ಒಂದು ಸತ್ಯಶೋಧನ ತಂಡವನ್ನು ರಾಜ್ಯಕ್ಕೆ ಕಳುಹಿಸಲು ನಿರ್ಧರಿಸಿದ ಮಂಡಳಿ ಈ ಬಗ್ಗೆ ಸರಕಾರಕ್ಕೆ ಆಗಸ್ಟ್ 27ರಂದು ಪತ್ರ ಬರೆದಿತ್ತಂತೆ. ಅದಕ್ಕೆ ಸರಕಾರದ 'ಸ್ಪಂದನೆ' ಹೀಗಿದೆ!

ಹೇಬಿಯಸ್ ಕಾರ್ಪಸ್ ಮತ್ತು ಆಪಾದನೆಗಳು ವಾಪಾಸ್!

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಯವರು ರಾಜ್ಯದಲ್ಲಿ ಪಕ್ಷದ ಹಿರಿಯ ಮುಖಂಡ ತರಿಗಾಮಿಯವರನ್ನು ಭೇಟಿ ಮಾಡಲು ಬಿಡದಾಗ ಮತ್ತು ಅವರು ಎಲ್ಲಿದ್ದಾರೆಂದೂ ತಿಳಿಸದಿದ್ದಾಗ ಸುಪ್ರಿಂ ಕೋರ್ಟಿನಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿ ಹಾಕಿದ ನಂತರ ಅವರನ್ನು ಭೇಟಿ ಮಾಡಲು ಸಾಧ್ಯವಾಯಿತು. ಈ ಅರ್ಜಿಯ ವಿಚಾರಣೆ ಇನ್ನೂ ಮುಗಿದಿಲ್ಲ. ಏಕೆಂದರೆ ತರಿಗಾಮಿಯವರನ್ನು ಬಂಧಿಸಲಾಗಿದೆಯೇ, ಬಂಧಿಸಿದ್ದರೆ ಯಾವ ಕಾರಣಕ್ಕಾಗಿ ಎಂಬ ನ್ಯಾಯಾಲಯದ ಪ್ರಶ್ನೆಗೆ ಸರಕಾರ ಇನ್ನೂ ಉತ್ತರಿಸಿಲ್ಲ.

ಇದೇ ಮಾದರಿಯಲ್ಲಿ ರಾಜ್ಯ ಮಾಜಿ ಮುಖ್ಯಮಂತ್ರಿ ಮತ್ತು ಹಾಲಿ ಎಂಪಿ. ಫಾರುಕ್ ಅಬ್ದುಲ್ಲ ಎಲ್ಲಿದ್ದಾರೆ ಎಂಬ ಹೇಬಿಯಸ್ ಕಾರ್ಪಸ್ ಅರ್ಜಿಯ ವಿಚಾರಣೆಯ ಹಿಂದಿನ ದಿನ ಅವರನ್ನು ಸಾರ್ವಜನಿಕ ಭದ್ರತಾ ಕಾಯ್ದೆ(ಪಿಎಸ್‌ಎ) ಅಡಿಯಲ್ಲಿ ಬಂಧಿಸಲಾಯಿತು. ನ್ಯಾಯಾಲಯ ಈ ಅರ್ಜಿ ಇತ್ಯರ್ಥವಾಯಿತು ಎಂದಿತು.

ಜಮ್ಮು ಮತ್ತು ಕಾಶ್ಮೀರ ಹೈಕೋರ್ಟಿನಲ್ಲಿ ಈ ರೀತಿಯ 250 ಹೇಬಿಯಸ್ ಕಾರ್ಪಸ್ ಅರ್ಜಿಗಳಿದ್ದು, ಇವೆಲ್ಲ ಈ ಪಿಎಸ್‌ಎ ಅಡಿಯಲ್ಲಿ ಕಾನೂನುಬಾಹಿರ ಬಂಧನಕ್ಕೆ ಬಂದ ಸವಾಲುಗಳು ಎನ್ನಲಾಗಿದೆ. ರಾಜ್ಯ ಸರಕಾರದ ಗೃಹ ಮಂತ್ರಾಲಯ ಇಂತಹ ಮೊದಲ ಮೂರು ಕೇಸುಗಳಲ್ಲೂ ಪಿಎಸ್‌ಎ ಅಡಿಯಲ್ಲಿ ಆಪಾದನೆಗಳನ್ನು ಹಿಂತೆಗೆದುಕೊಂಡಿದೆ ಎಂದು ವರದಿಯಾಗಿದೆ. ಒಬ್ಬರನ್ನು ಆಗಸ್ಟ್ 17ರಂದು ಬಂಧಿಸಲಾಗಿತ್ತು, ಅವರ ಸಂಬಂಧಿಕರು ಆಗಸ್ಟ್ 27ರಂದು ಅರ್ಜಿ ಹಾಕಿದ ಮೇಲೆ ಸಪ್ಟಂಬರ್ 2ರಂದು ಪಿಎಸ್‌ಎ ಆರೋಪವನ್ನು ಹಿಂತೆದುಕೊಳ್ಳಲಾಗಿದೆ ಎಂದು ತಿಳಿಸಲಾಯಿತು. ಇನ್ನೊಬ್ಬರನ್ನು ಆಗಸ್ಟ್ 8ರಂದು ಬಂಧಿಸಲಾಗಿತ್ತು, ಸಪ್ಟಂಬರ್ 2ರಂದು ಅದಕ್ಕೆ ಸವಾಲು ಹಾಕಲಾಯಿತು, ಸಪ್ಟಂಬರ್ 19ರಂದು ಪಿಎಸ್‌ಎ ಆರೋಪ ತೆಗೆಯಲಾಯಿತು. ಮೂರನೇಯವರ ಮೇಲೆ ಆಗಸ್ಟ್ 27ರಂದು ಆರೋಪ ಹಾಕಲಾಯಿತು, ಸಪ್ಟಂಬರ್ 19ರಂದು ಸವಾಲು ಹಾಕಿದ ಮೇಲೆ ಸಪ್ಟಂಬರ್ 28ರಂದು ಹಿಂತೆಗೆದುಕೊಳ್ಳಲಾಯಿತು. ಈ "ಹೇಬಿಯಸ್ ಕಾರ್ಪಸ್" ಅರ್ಜಿಗಳು 'ಇತ್ಯರ್ಥ'ವಾದ ಈ ಬಗೆ ಈ ಪಿಎಸ್‌ಎ ಯ ದುರುಪಯೋಗವನ್ನು ಬಿಂಬಿಸುತ್ತದೆ ಎಂದು ವಿಶ್ಲೇಷಕರು ಹೇಳುತ್ತಾರೆ.

ತರಿಗಾಮಿಯವರನ್ನು ಬಂಧನದಲ್ಲೇನೂ ಇಟ್ಟಿರಲಿಲ್ಲ ಎಂದ ಸರಕಾರ ಆಮೇಲೆ ಅವರು ದಿಲ್ಲಿಯಲ್ಲಿ ಕೇಂದ್ರಸಮಿತಿ ಸಭೆಗೆ ಹಾಜರಾಗಲು ಬಿಡಲಿಲ್ಲ ಎಂಬುದನ್ನೂ ಇಲ್ಲಿ ಗಮನಿಸಬಹುದು.

ಕೊನೆಗೂ 'ಜ್ಞಾನೋದಯ':'ರಾಜದ್ರೋಹ'ದ ಕೇಸ್ ವಾಪಾಸ್


ಬಿಹಾರದ ಮುಝಫ್ಫರ್‌ಪುರ ಪೋಲೀಸರು ಕಳೆದ ವಾರ ಅಡೂರ್ ಗೋಪಾಲಕೃಷ್ಣನ್, ಶ್ಯಾಮ್ ಬೆನೆಗಲ್, ಶುಭಾಮುದ್ಗಲ್, ರಾಮಚಂದ್ರ ಗುಹ ಮತ್ತು ಅಪರ್ಣಾ ಸೆನ್ ಮೇಲೆ ಹಾಕಿದ್ದ 'ರಾಜದ್ರೋಹ'ದ ಕೇಸನ್ನು ಹಿಂತೆಗದುಕೊಳ್ಳಲು ಬಿಹಾರ ಪೋಲೀಸ್ ನಿರ್ಧರಿಸಿದೆಯಂತೆ. ಇವರನ್ನು ಸೇರಿದಂತೆ ಒಟ್ಟು 49 ಪ್ರತಿಷ್ಠಿತ ನಾಗರಿಕರ ಮೇಲೆ ಈ ಕೇಸು ಹಾಕಲಾಗಿತ್ತು. ಇವರ ಅಪರಾಧವೆಂದರೆ ಜುಲೈ ತಿಂಗಳಲ್ಲಿ ಇವರು ದಲಿತರು, ಮುಸ್ಲಿಮರು ಮತ್ತು ಇತರ ಅಲ್ಪಸಂಖ್ಯಾತರ ವಿರುದ್ಧ ಹೆಚ್ಚುತ್ತಿರುವ 'ಲಿಂಚಿಂಗ್' ಘಟನೆಗಳ ಬಗ್ಗೆ ಆತಂಕ ವ್ಯಕ್ತಪಡಿಸುತ್ತ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದದ್ದು!

"ತಾವು ಸಂಸತ್ತಿನಲ್ಲಿ ಇದನ್ನು ಟೀಕಿಸಿದ್ದೀರಿ. ಆದರೆ ಇಷ್ಟೇ ಸಾಲದು" ಎಂದು ಅವರು ಈ ಪತ್ರದಲ್ಲಿ ಹೇಳಿದ್ದರು. ಯಾರೂ ತನ್ನದೇ ದೇಶದಲ್ಲಿ ಭಯದಿಂದ ಬದುಕುವಂತಾಗಬಾರದು ಎಂದಿದ್ದ ಈ ಪತ್ರ "ಜೈಶ್ರೀರಾಮ್" ಉದ್ರೇಕಕಾರಿ ಯುದ್ಧಘೋಷವಾಗಿ ಬಿಟ್ಟಿದೆ ಎಂದು ಖೇದ ವ್ಯಕ್ತಪಡಿಸಿದ್ದರು. ನಾವೇನೂ ಮಧ್ಯಯುಗದಲ್ಲಿ ಬದುಕುತ್ತಿಲ್ಲ, ಶ್ರೀರಾಮನ ಹೆಸರನ್ನು ಹೀಗೆ ಅಪವಿತ್ರಗೊಳಿಸಲು ಬಿಡಬಾರದು ಎಂದಿದ್ದರು.

ಸರಕಾರದ ಧೋರಣೆಗಳ ಬಗ್ಗೆ ಅಸಹಮತಿ ವ್ಯಕ್ತಪಡಿಸುವರನ್ನು, ಆಳುವ ಪಕ್ಷವನ್ನು ಟೀಕಿಸುವವರನ್ನು ರಾಷ್ಟ್ರ–ವಿರೋಧಿಗಳೆಂದೋ, 'ನಗರ ನಕ್ಸಲ'ರೆಂದೋ ಹಣೆಪಟ್ಟಿ ಹಚ್ಚಿ ಕಿರುಕುಳ ಕೊಡುವುದನ್ನು ಈ ಪತ್ರದಲ್ಲಿ ವಿರೋಧಿಸಲಾಗಿತ್ತು. ಆಳುವ ಪಕ್ಷವನ್ನು ರಾಷ್ಟ್ರದೊಂದಿಗೆ ಸಮೀಕರಿಸಲು ಸಾಧ್ಯವಿಲ್ಲ ಎಂಬ ಸಂಗತಿಯನ್ನೂ ಈ ಪತ್ರ ಪ್ರಧಾನಿಗಳ ಗಮನಕ್ಕೆ ತಂದಿತ್ತು.

ಪ್ರಧಾನ ಮಂತ್ರಿಗಳು ಈ ಪತ್ರಕ್ಕೆ ಉತ್ತರಿಸಲಿಲ್ಲ. ಆದರೆ ಸುಮಾರು ಮೂರುತಿಂಗಳ ನಂತರ ಈ ಪತ್ರಕ್ಕೆ ಸಹಿ ಹಾಕಿದವರ ಮೇಲೆ 'ರಾಜದ್ರೋಹ'ದ ಕೇಸು ಹಾಕಲಾಯಿತು. ಆಳುವ ಪಕ್ಷದ ಮುಖಂಡರು ಇದನ್ನು ಖಂಡಿಸಲಿಲ್ಲ, ಬದಲಿಗೆ ಪರೋಕ್ಷವಾಗಿ ಬೆಂಬಲಿಸಿದರು ಕೂಡ. ಆದರೆ ಇದಕ್ಕೆ ದೇಶವ್ಯಾಪಿಯಾಗಿ ಆಕ್ರೋಶ ವ್ಯಕ್ತವಾಯಿತು. ಒಂದು ಸಾವಿರಕ್ಕೂ ಹೆಚ್ಚು ಪ್ರತಿಷ್ಠಿತ ಕಲಾವಿದರು, ಲೇಖಕರು, ಬುದ್ಧಿಜೀವಿಗಳು ಇವರನ್ನು ಬೆಂಬಲಿಸಿ ಪತ್ರ ಬರೆದರು. ಕೇರಳದಲ್ಲಿ ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ನೇತೃತ್ವದಲ್ಲಿ ಈ 49 ಪ್ರತಿಷ್ಠಿತರ ಪತ್ರದ ಒಕ್ಕಣಿಕೆಯನ್ನು ಹೊಂದಿದ್ದ 1.5 ಲಕ್ಷ ಪ್ರತಿಭಟನಾ ಪತ್ರಗಳನ್ನು ಪ್ರಧಾನ ಮಂತ್ರಿಗಳಿಗೆ ಕಳಿಸಲಾಗಿದೆ.

ಇವನ್ನೆಲ್ಲ ನೋಡಿದ ಬಿಹಾರದ ಪೋಲೀಸರಿಗೆ 'ಜ್ಞಾನೋದಯ'ವಾದಂತೆ ಕಾಣುತ್ತದೆ. ಈ ದೂರಿನಲ್ಲಿ ಹುರುಳಿಲ್ಲ, ಅದು 'ತುಂಟತನ'ದಿಂದ ಕೂಡಿದೆ ಎಂದು ತನಿಖೆಯಿಂದ ತಿಳಿದು ಬಂತಂತೆ. ಆದ್ದರಿಂದ ಈ ಎಫ್‌ಐಆರ್‌ನ್ನು ಹಿಂತೆಗೆದುಕೊಂಡು ದೂರುದಾರನ ಮೇಲೆಯೇ ಎಫ್‌ಐಆರ್ ಹಾಕಲಾಗುವುದಂತೆ!




ಆಯುಧ ಪೂಜೆಯ ದಿನ ಫ್ರಾನ್ಸ್ ನಲ್ಲಿ ಮೊದಲ ರಫೇಲ್ ಯುದ್ಧ ವಿಮಾನವನ್ನು ದೇಶದ ಪರವಾಗಿ ರಕ್ಷಣಾ ಮಂತ್ರಿಗಳು ಸ್ವೀಕರಿಸಿ ವಿಧಿವತ್ತಾಗಿ ಶಸ್ತ್ರ ಪೂಜೆ ನಡೆಸಿದರು. ಈ ವಿಮಾನ ಸದ್ಯ ಅಲ್ಲೇ ಇರುತ್ತದೆ. ಮೊದಲ ನಾಲ್ಕು ವಿಮಾನಗಳು ಭಾರತೀಯ ವಾಯುಪಡೆಯನ್ನು ಸೇರುವುದು ಮೇ 2020ರಲ್ಲೇ

–ಸುದ್ದಿ

ವ್ಯಂಗ್ಯಚಿತ್ರ: ಪಿ.ಮಹಮ್ಮದ್, ವಾರ್ತಾಭಾರತಿ

ವ್ಯಂಗ್ಯಚಿತ್ರ : ಮಂಜುಲ್, ಫಸ್ಟ್‌ಪೋಸ್ಟ್





ದುಡಿಯುವ ಜನಗಳ ಮೇಲೆ ಪ್ರಹಾರಗಳಿಗೆ ಹಿಂದುತ್ವದ ಮುಸುಕು

ನರೇಂದ್ರ ಮೋದಿ ಸರ್ಕಾರದ ನಿಜವಾದ ಉದ್ದೇಶ, ಕಾರ್ಮಿಕ ವರ್ಗದ ಸೊಲ್ಲಡಗಿಸುವ ದಾಳಿಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುವ ಕಾರ್ಪೋರೇಟ್ ಕುಳಗಳ ಬಯಕೆಯ ಈಡೇರಿಕೆ. ಈ ವರೆಗೆ ಸಾಧ್ಯವಾಗದ ಇಂತಹ ದಾಳಿಯನ್ನು ಹಿಂದುತ್ವದ ಮುಸುಕಿನ ಮರೆಯಲ್ಲಿ ನಡೆಸಲು ಹವಣಿಸುತ್ತಿದೆ ಮೋದಿ ಸರ್ಕಾರ.ಇದು ಆಕಸ್ಮಿಕವಲ್ಲ. ಏಕೆಂದರೆ, ಕಟ್ಟಾ ಹಿಂದುತ್ವವಾದಿಗಳು, ವಾಸ್ತವಿಕವಾಗಿ, ಬಂಡವಾಳಶಾಹಿ ಆರ್ಥಿಕ ಸಿದ್ಧಾಂತದ ಸಮರ್ಥಕರೇ ಆಗಿರುತ್ತಾರೆ. ಕಾರ್ಪೋರೇಟ್ ಪರ ಆರ್ಥಿಕ ನೀತಿಗಳನ್ನು ಅವರು ಯಾವ ನಾಚಿಕೆಯೂ ಇಲ್ಲದೆ ಸಮರ್ಥಿಸುತ್ತಾರೆ. ಬಂಡವಾಳಗಾರರು ಈ ದೇಶದ "ಸಂಪತ್ತಿನ ಸೃಷ್ಟಿಕರ್ತರು" ಎಂಬುದಾಗಿ ಸ್ವತಃ ಮೋದಿಯವರೇ ಹೇಳಿದ್ದಾರೆ. ಬಂಡವಾಳಗಾರರೇ "ಸಂಪತ್ತಿನ ಸೃಷ್ಟಿಕರ್ತರು" ಎಂದು ಹೇಳಲು ಬೂರ್ಷ್ವಾ ಅರ್ಥಶಾಸ್ತ್ರಜ್ಞರೂ ಸಹ ಮುಜುಗುರಪಡುತ್ತಾರೆ. ಅಷ್ಟು ಮಟ್ಟಿನ ಸಂಕೋಚವೂ ಇವರಿಗಿಲ್ಲ. ಹಿಂದುತ್ವವು, ಅಲ್ಪ-ಸಂಖ್ಯಾತ ವಿರೋಧಿ ಮಾತ್ರವಲ್ಲ, ದಲಿತ-ವಿರೋಧಿ, ಬುಡಕಟ್ಟು-ವಿರೋಧಿ, ಮಹಿಳಾ-ವಿರೋಧಿ, ಸಾರಭೂತವಾಗಿ ಮತ್ತು ಮೂಲಭೂತವಾಗಿ ದುಡಿಯುವ ಜನ-ವಿರೋಧಿಯೂ ಹೌದು.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ದಿನ ಕಳೆದಂತೆ ಹಿಂದುತ್ವದ ವರ್ಗ ಕರ್ತವ್ಯ ಪರಿಪಾಲನೆ ಸ್ಪಷ್ಟವಾಗಿ ಪ್ರಕಟಗೊಳ್ಳುತ್ತಿದೆ. ಮೋದಿ ಸರ್ಕಾರವು ಹಿಂದುತ್ವದ ಮುಸುಕಿನ ಮರೆಯಲ್ಲಿ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಖಾಸಗೀಕರಿಸುವ ಮತ್ತು ದುಡಿಯುವ ಜನತೆಯ ಹಕ್ಕುಗಳ ಮೇಲೆ ದಾಳಿ ಮಾಡುವ ಒಂದು ಬೃಹತ್ ಕಾರ್ಯಕ್ರಮ ಹಾಕಿಕೊಂಡಿದೆ. ಸಾಮಾನ್ಯ ಪರಿಸ್ಥಿತಿಯಲ್ಲಿ ಇಂತಹ ಒಂದು ಕಾರ್ಯಕ್ರಮ ಕೈಗೊಳ್ಳುವುದು ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ, ಭಾರಿ ವಿರೋಧ ಎದುರಾಗುತ್ತಿತ್ತು. ಆದರೆ, ಹಿಂದುತ್ವದ ಹೆಸರಿನಲ್ಲಿ, ಬಹುಸಂಖ್ಯಾತರಲ್ಲಿ "ಅನ್ಯ"ರ ಭಯ ಹುಟ್ಟಿಸಿ ಮತ್ತು ಅವರಲ್ಲಿ ದ್ವೇಷ ಪ್ರಚೋದಿಸಿದ ಪರಿಣಾಮವಾಗಿ ದೇಶವು ಅನ್ಯ ಮನಸ್ಕವಾಗಿರುವ ಸಂದರ್ಭದಲ್ಲಿ, ಸರ್ಕಾರವು ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣವನ್ನು ಪ್ರತಿರೋಧಿಸುವ ಜನರನ್ನು ದಮನಿಸುವ ಧೈರ್ಯ ಪಡೆದುಕೊಂಡಿದೆ.

ಮನಸ್ಸಿನಲ್ಲಿ ಭಯ ತುಂಬಿದಾಗ ಜನರಿಗೆ ಒಬ್ಬ "ಉದ್ಧಾರಕ" ಅಗತ್ಯವಾಗುತ್ತಾನೆ. ಆ "ಉದ್ಧಾರಕ"ನೇ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಿಸಲು ಮುಂದಾದರೆ, ಅವರ ವಿರೋಧ ಕರ್ಕಶವಾಗುವುದಿಲ್ಲ. ಹಿಂದುತ್ವದ ಕಥನವು ಅವರ ತಲೆ ಕೆಡಿಸಿದ ಪರಿಣಾಮವಾಗಿ ಅವರು ಖಾಸಗೀಕರಣದ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಅಂದರೆ, ಸಾರ್ವಜನಿಕ ಸಂಪನ್ಮೂಲಗಳ ಮತ್ತು ಉದ್ದಿಮೆಗಳ ಖಾಸಗೀಕರಣವನ್ನು ಬಯಸುವ ಕಾರ್ಪೋರೇಟ್ ಹಿತಾಸಕ್ತಿಯ ಅಜೆಂಡಾದ ಪರವಾಗಿ ಹಿಂದುತ್ವದ ಕಥನ ಕೆಲಸಮಾಡುತ್ತದೆ.

ನಾನಾರೀತಿಯಲ್ಲಿ ಖಾಸಗೀಕರಣ

ಖಾಸಗೀಕರಣವು ನಾನಾ ರೀತಿಯಲ್ಲಿ ಜಾರಿಯಾಗುತ್ತದೆ. ಕೆಲವು ಸಾರ್ವಜನಿಕ ಉದ್ದಿಮೆಗಳನ್ನು, ಅವು ನಷ್ಟದಲ್ಲಿರಲಿ ಅಥವಾ ಹೇರಳ ಲಾಭ ಗಳಿಸುತ್ತಿರಲಿ, ಹಠಾತ್ ಮಾರಾಟ ಮಾಡಲಾಗುತ್ತದೆ. ಕೆಲವು ಉದ್ದಿಮೆಗಳ ಒಡೆತನವನ್ನು ಶೇ.51ಕ್ಕಿಂತ ಕೆಳಗಿಳಿಸಿದ ಮಟ್ಟದಲ್ಲಿ ಮಾರಾಟ ಮಾಡಲಾಗುತ್ತದೆ. ಇನ್ನೂ ಕೆಲವು ಉದ್ದಿಮೆಗಳ ಕಾರ್ಯ ಚಟುವಟಿಕೆಗಳನ್ನು ವಿಂಗಡಿಸಿ ಅವುಗಳನ್ನು ತಮಗೆ ಬೇಕಾದವರಿಗೆ ಮಾರಾಟ ಮಾಡಲಾಗುತ್ತದೆ. ಈ ಕ್ರಮವನ್ನು ರೈಲ್ವೆಯಲ್ಲಿ ಅನುಸರಿಸಲಾಗುತ್ತಿದೆ.

ಈ ರೀತಿಯಲ್ಲಿ ಹಲವಾರು ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಿಸುತ್ತಿರುವುದರ ಜೊತೆಗೆ, ಕೆಲವು ಉದ್ದಿಮೆಗಳ ಶಕ್ತಿ ಸಾಮರ್ಥ್ಯವನ್ನು ಎಷ್ಟು ಸಾಧ್ಯವೂ ಅಷ್ಟು ತಗ್ಗಿಸುವ ಪ್ರಯತ್ನಗಳೂ ನಡೆಯುತ್ತಿವೆ. ಇಲ್ಲಿಯವರೆಗೆ ಸಾರ್ವಜನಿಕ ವಲಯಕ್ಕೆ ಮೀಸಲಾಗಿಡಲಾಗಿದ್ದ ಕಲ್ಲಿದ್ದಲು ಗಣಿಗಾರಿಕೆಯನ್ನು ಈಗ ವಿದೇಶಿ ಹೂಡಿಕೆದಾರರಿಗೆ ತೆರದಿಡಲಾಗಿದೆ. ರೈಲ್ವೆ ಇಂಜಿನ್ ಮತ್ತು ಕೆಲವು ಬಿಡಿ ಭಾಗಗಳನ್ನು ಆಮದು ಮಾಡಿಕೊಳ್ಳುವ ಮೂಲಕ ದೇಶದ ಸಾರ್ವಜನಿಕ ವಲಯದಲ್ಲಿ ಈ ಸಂಬಂಧದ ಉತ್ಪಾದನೆಯನ್ನು ಮೊಟಕು ಮಾಡಲಾಗಿದೆ. ಈ ಕ್ರಮಗಳು ಸಾರ್ವಜನಿಕ ವಲಯವನ್ನು ನಿರ್ನಾಮ ಮಾಡುವ ಪೀಠಿಕೆಯಾಗಿವೆ.

ಅದೇ ರೀತಿಯಲ್ಲಿ, ಕಾರ್ಮಿಕರನ್ನು ಕೆಲಸದಿಂದ ಸುಲಭವಾಗಿ ಕಿತ್ತೆಸೆಯಲು ಅನುಕೂಲವಾಗುವಂತೆ ಈಗಿರುವ ಕಾರ್ಮಿಕ ಕಾನೂನುಗಳ "ಸುಧಾರಣೆ" ಮಾಡುವ ಮಸೂದೆಯನ್ನು ಮುಂಬರುವ ಲೋಕ ಸಭಾ ಅಧಿವೇಶನದಲ್ಲಿ ಮಂಡಿಸಲಾಗುವುದು. ವಾಸ್ತವವಾಗಿ, ಈಗಿರುವ ಕಾರ್ಮಿಕ ಕಾನೂನುಗಳು ಒದಗಿಸುವ ಅಷ್ಟೊ ಇಷ್ಟೊ ರಕ್ಷಣೆಯನ್ನು ಕಾರ್ಮಿಕರ ಒಟ್ಟು ಸಂಖ್ಯೆಯಲ್ಲಿ ಸುಮಾರು ಶೇ.4ರಷ್ಟು ಮಂದಿ ಮಾತ್ರ ಪಡೆಯುತ್ತಿದ್ದಾರೆ. ಆದ್ದರಿಂದ, ಸಂಘಟಿತ ವಲಯದಲ್ಲಿಯೂ ಸಹ ದಿನಗೂಲಿ ಉದ್ಯೋಗಿಗಳ ಸಂಖ್ಯೆ ವೇಗವಾಗಿ ಹೆಚ್ಚುತ್ತಿರುವ ಪರಿಸ್ಥಿತಿಯಲ್ಲಿ, ಕಾರ್ಮಿಕ ಕಾನೂನುಗಳ ಬದಲಾವಣೆಗಳ ಉದ್ದೇಶವು ಯೂನಿಯನ್ ಸೇರುವ ಕಾರ್ಮಿಕರನ್ನು ವಜಾ ಮಾಡುವ ಮೂಲಕ ಯೂನಿಯನ್ ಕಟ್ಟದಂತೆ ತಡೆಯುವುದೇ ಆಗಿದೆ.

ವಿಶ್ವದ ಎಲ್ಲ ದೇಶಗಳಲ್ಲೂ ಖಾಸಗಿ ವಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳು ಯೂನಿಯನ್ ಸ್ಥಾಪಿಸಿಕೊಳ್ಳುವುದು ಸಲಭ ಸಾಧ್ಯವಲ್ಲ. ಉದಾಹರಣೆಗೆ, ಅಮೇರಿಕಾದ ಶಿಕ್ಷಣ ವಲಯವೂ ಸೇರಿದಂತೆ ಸಾರ್ವಜನಿಕ ವಲಯದಲ್ಲಿ ಸುಮಾರು 33% ಉದ್ಯೋಗಿಗಳು ಯೂನಿಯನ್ ಸ್ಥಾಪಿಸಿಕೊಂಡಿದ್ದರೆ, ಅಲ್ಲಿನ ಖಾಸಗಿ ವಲಯದಲ್ಲಿ ಕೇವಲ 7% ಉದ್ಯೋಗಿಗಳು ಯೂನಿಯನ್ ಸ್ಥಾಪಿಸಿಕೊಂಡಿದ್ದಾರೆ. ಹಾಗಾಗಿ, ಒಂದು ಸಾರ್ವಜನಿಕ ವಲಯದ ಉದ್ದಿಮೆಯು ಖಾಸಗಿಕರಣಗೊಂಡಾಗ ಉದ್ಯೋಗಿಗಳು ಯೂನಿಯನ್ ಉಳಿಸಿಕೊಳ್ಳುವ ಸಾಧ್ಯತೆ ಕ್ಷೀಣಿಸುತ್ತದೆ ಮತ್ತು ಯೂನಿಯನ್ ಸ್ಥಾಪಿಸಿಕೊಂಡು ತಮ್ಮ ಸ್ಥಿತಿ-ಗತಿಗಳನ್ನು ಉತ್ತಮಪಡಿಸಿಕೊಳ್ಳುವ ಪ್ರಕ್ರಿಯೆ ಸ್ಥಗಿತವಾಗುತ್ತದೆ.

ಆದ್ದರಿಂದ, ನರೇಂದ್ರ ಮೋದಿ ಸರ್ಕಾರದ ನಿಜವಾದ ಉದ್ದೇಶ, ಕಾರ್ಮಿಕ ವರ್ಗದ ಸೊಲ್ಲಡಗಿಸುವ ದಾಳಿಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುವ ಕಾರ್ಪೋರೇಟ್ ಕುಳಗಳ ಬಯಕೆಯ ಈಡೇರಿಕೆ. ಈ ವರೆಗೆ ಸಾಧ್ಯವಾಗದ ಇಂತಹ ದಾಳಿಯನ್ನು ಹಿಂದುತ್ವದ ಮುಸುಕಿನ ಮರೆಯಲ್ಲಿ ನಡೆಸಲು ಹವಣಿಸುತ್ತಿದೆ ಮೋದಿ ಸರ್ಕಾರ.

"ಸಂಪತ್ತಿನ ಸೃಷ್ಟಿಕರ್ತರು"!

ಹಿಂದುತ್ವದ ಮುಸುಕಿನ ಮರೆಯಲ್ಲಿ ಇಂತಹ ದಾಳಿ ನಡೆಸಲು ಹವಣಿಸುತ್ತಿರುವುದು ಆಕಸ್ಮಿಕವಲ್ಲ. ಕಟ್ಟಾ ಹಿಂದುತ್ವವಾದಿಗಳು, ವಾಸ್ತವಿಕವಾಗಿ, ಬಂಡವಾಳಶಾಹಿ ಆರ್ಥಿಕ ಸಿದ್ಧಾಂತದ ಸಮರ್ಥಕರೇ ಆಗಿರುತ್ತಾರೆ. ಕಾರ್ಪೋರೇಟ್ ಪರ ಆರ್ಥಿಕ ನೀತಿಗಳನ್ನು ಅವರು ಯಾವ ನಾಚಿಕೆಯೂ ಇಲ್ಲದೆ ಸಮರ್ಥಿಸುತ್ತಾರೆ. ಬಂಡವಾಳಗಾರರು ಈ ದೇಶದ "ಸಂಪತ್ತಿನ ಸೃಷ್ಟಿಕರ್ತರು" ಎಂಬುದಾಗಿ ಸ್ವತಃ ಮೋದಿಯವರೇ ಹೇಳಿದ್ದಾರೆ. ಬಂಡವಾಳಗಾರರೇ "ಸಂಪತ್ತಿನ ಸೃಷ್ಟಿಕರ್ತರು" ಎಂದು ಹೇಳಲು ಬೂರ್ಷ್ವಾ ಅರ್ಥಶಾಸ್ತ್ರಜ್ಞರೂ ಸಹ ಮುಜುಗುರಪಡುತ್ತಾರೆ. ಅಷ್ಟು ಮಟ್ಟಿನ ಸಂಕೋಚವೂ ಇವರಿಗಿಲ್ಲ.

ಭೂಮಿ, ಶ್ರಮ (ಕಾರ್ಮಿಕರು), ಬಂಡವಾಳ ಮತ್ತು ಉದ್ಯಮಶೀಲತೆ ಎಂಬ ನಾಲ್ಕು ಉತ್ಪಾದನಾ ಅಂಶಗಳು ಸಂಯೋಜನೆಗೊಂಡಾಗ ಸಂಪತ್ತು ಸೃಷ್ಟಿಯಾಗುತ್ತದೆ ಎಂಬುದಾಗಿ ಬೂರ್ಷ್ವಾ ಅರ್ಥಶಾಸ್ತ್ರದ ಶಿಷ್ಟ ಪಠ್ಯ ಪುಸ್ತಕಗಳು ತಿಳಿಸುತ್ತವೆ. ಇಂತಹ ಬೋಧನೆಯು, ಸಂಪತ್ತನ್ನು ಸೃಷ್ಟಿಸುವ ಪ್ರಕ್ರಿಯೆಯಲ್ಲಿ ಶ್ರಮ ಶಕ್ತಿಯ ಕೊಡುಗೆಗಿಂತ ಬಂಡವಾಳದ ಕೊಡುಗೆ ಕಡಿಮೆಯೇನಲ್ಲ ಮತ್ತು ಬಂಡವಾಳಗಾರರು ಶೋಷಕರು ಎಂದು ಸಮಾಜವಾದಿಗಳು ಹೇಳುವುದಕ್ಕಿಂತ ಭಿನ್ನವಾಗಿ ಅವರು ಸಂಪತ್ತಿನ ಸೃಷ್ಟಿಕರ್ತರು ಎಂಬುದನ್ನು ಸೂಚ್ಯವಾಗಿ ತಿಳಿಸುತ್ತದೆ.

ಆದರೆ, ಹಿಂದೂ ಬಲಪಂಥವು ಬೂರ್ಷ್ವಾ ಅರ್ಥಶಾಸ್ತ್ರದ ಶಿಷ್ಟ ಪಠ್ಯ ಪುಸ್ತಕಗಳಿಗಿಂತಲೂ ಒಂದು ಹೆಜ್ಜೆ ಮುಂದೆ ಹೋಗುತ್ತದೆ. ಅದು, ಶ್ರಮ ಶಕ್ತಿಯನ್ನು (ಕಾರ್ಮಿಕರನ್ನು) ಸಂಪತ್ತು ಸೃಷ್ಟಿಸುವವರ ಪಟ್ಟಿಯಿಂದ ಕಿತ್ತೆಸೆಯುತ್ತದೆ. ಸಂಪತ್ತಿನ ಸೃಷ್ಟಿಯಲ್ಲಿ ಬಂಡವಾಳಗಾರ ಮತ್ತು ಶ್ರಮ (ಕಾರ್ಮಿಕರು) ಸಮಾನ ಕೊಡುಗೆ ನೀಡುತ್ತವೆ ಎಂದು ಬೂರ್ಷ್ವಾ ಅರ್ಥಶಾಸ್ತ್ರದ ಪಠ್ಯ ಪುಸ್ತಕಗಳು ಹೇಳುವಾಗ, ಬಂಡವಾಳಗಾರರು ಮಾತ್ರ ಸಂಪತ್ತಿನ ಸೃಷ್ಟಿಕರ್ತರು ಎನ್ನುತ್ತದೆ, ಹಿಂದೂ ಬಲಪಂಥ. ಇಂದಿನ ಕಾರ್ಪೋರೇಟ್‌ಗಳಿಗಾಗಿರುವ ಜಗತ್ತಿನಲ್ಲಿ ಬಂಡವಾಳಗಾರರನ್ನು ಪರವಾಗಿ ಇಷ್ಟೊಂದು ಹಲ್ಲುಗಿಂಜಿಕೊಂಡು ಸಮರ್ಥಿಸುವವರಿದ್ದಾರೆ ಎಂಬುದು ಊಹೆಗೂ ನಿಲುಕದ ವಿಷಯ.

ಹಿಂದೂ ಬಲಪಂಥದ ಅಜ್ಞಾನ ಪ್ರದರ್ಶನ

ಬೂರ್ಷ್ವಾ ಅರ್ಥಶಾಸ್ತ್ರದ ಪಠ್ಯ ಪುಸ್ತಕಗಳ ಆಚೆಗೆ ನೋಡುವುದಾದರೆ, ಮಾನವ ಶ್ರಮವನ್ನು ಪ್ರಕೃತಿಯ ಮೇಲೆ ವಿನಿಯೋಗಿಸಿದಾಗಲೇ ಎಲ್ಲ ವಸ್ತುಗಳಿಗೂ ಉಪಯೋಗ-ಮೌಲ್ಯ ಉಂಟಾಗುತ್ತದೆ. ಈ ವಸ್ತುಗಳಲ್ಲಿ ಕೆಲವು ಮಾನವನು ಪ್ರಕೃತಿಯ ಮೇಲೆ ಬಳಸುವ ಪ್ರಕ್ರಿಯೆಯಲ್ಲಿ ಶ್ರಮದ ಉಪಕರಣವಾಗಿ(ಬಂಡವಾಳ ದಾಸ್ತಾನ-capital stock) ಬಳಕೆಯಾಗುತ್ತವೆ. ವ್ಯಕ್ತಿಗಳ ಒಂದು ಗುಂಪು, ಅಂದರೆ, ಬಂಡವಾಳಗಾರರು ತಾವೇ ಈ ಶ್ರಮದ ಉಪಕರಣಗಳ ಮಾಲಿಕರಾಗಿಯೇ ಬಿಡುತ್ತಾರೆ. ಮತ್ತು, ತಾವು ಯಾವುದೇ ಶ್ರಮ ವಿನಿಯೋಗಿಸದಿದ್ದರೂ ಸಹ, ಉತ್ಪಾದಿಸಲ್ಪಟ್ಟ ವಸ್ತುಗಳಲ್ಲಿ ಒಂದು ಭಾಗದ ಹಕ್ಕನ್ನು ಕೇಳುತ್ತಾರೆ. ತಾವು ಸ್ವಾಧೀನಪಡಿಸಿಕೊಂಡ ಹಕ್ಕಿನ ಒಂದು ಭಾಗವನ್ನು ಸ್ವಂತ ಉಪಯೋಗಕ್ಕೆ ಬಳಸಿಕೊಳ್ಳುತ್ತಾರೆ ಮತ್ತು ಉಳಿದ ಭಾಗವನ್ನು ಶ್ರಮದ ಉಪಕರಣಗಳ ದಾಸ್ತಾನಿಗೆ ಸೇರಿಸುತ್ತಾರೆ.

ಬಂಡವಾಳಗಾರರು ಶ್ರಮದ ಉಪಕರಣಗಳ ದಾಸ್ತಾನು ವೃದ್ಧಿಸುತ್ತಾರೆ ಎಂಬ ಕಾರಣದ ಮೇಲೆ ಮೋದಿಯವರು ಅವರನ್ನು ಹೊಗಳಿದ್ದಾರೆ ಎಂದೇ ಉದಾರವಾಗಿ ಒಪ್ಪಿಕೊಳ್ಳೋಣ. ಆದರೂ, ಬಂಡವಾಳಗಾರರು ಸ್ವಾಧೀನಪಡಿಸಿಕೊಂಡ ಎಲ್ಲದ್ದನ್ನೂ ಸ್ವಂತಕ್ಕೆ ಬಳಸಿಕೊಳ್ಳುವುದಿಲ್ಲ; ಅದನ್ನು ಶ್ರಮದ ಉಪಕರಣಗಳ ದಾಸ್ತಾನಿಗೆ ಸೇರಿಸುತ್ತಾರೆ ಎಂಬ ಕಾರಣದ ಮೇಲೆ ಅವರನ್ನು "ಸಂಪತ್ತಿನ ಸೃಷ್ಟಿಕರ್ತರು" ಎಂದು ಕರೆಯುವುದು, ಈ ಇಡೀ ಪ್ರಕ್ರಿಯೆಯ ಬಗ್ಗೆ ಇರುವ ಅಜ್ಞಾನವನ್ನು ತೋರಿಸಿದಂತಾಗುತ್ತದೆ.

ಅದಕ್ಕಿಂತಲೂ ದೊಡ್ಡ ಅಜ್ಞಾನದ ಪ್ರದರ್ಶನವೆಂದರೆ, ಕಾರ್ಪೋರೇಟ್ ತೆರಿಗೆ ಕಡಿತದ ಬಗ್ಗೆ ಮೋದಿಯವರ ಹೇಳಿಕೆ. ಸರ್ಕಾರವು ಕಾರ್ಪೋರೇಟ್‌ಗಳಿಗೆ ಕೊಟ್ಟಿರುವ 1.45 ಲಕ್ಷ ಕೋಟಿ ರೂಗಳ ತೆರಿಗೆ ವಿನಾಯ್ತಿಯು 120 ಕೋಟಿ ಭಾರತೀಯರಿಗೂ ಅನುಕೂಲವಾಗುವ ಒಂದು "ಎಲ್ಲರ ವಿಜಯ" ಎಂದು ಮೋದಿ ಹೇಳುತ್ತಾರೆ!

ಇಲ್ಲಿ, ಮೋದಿಯವರು ವ್ಯಕ್ತಪಡಿಸಿದ ಬಂಡವಾಳಗಾರರು "ಸಂಪತ್ತಿನ ಸೃಷ್ಟಿಕರ್ತರು" ಎಂಬ ಅಭಿಪ್ರಾಯದ ಆಚೆಗೆ ಹೋಗಿದ್ದಾರೆ. ಒಂದು ವೇಳೆ, ಕಾರ್ಪೋರೇಟ್‌ಗಳು ತಮಗೆ ಕೊಟ್ಟಿರುವ ತೆರಿಗೆ ವಿನಾಯ್ತಿಯ 1.45 ಲಕ್ಷ ಕೋಟಿ ರೂಗಳನ್ನು ಶ್ರಮದ ಉಪಕರಣಗಳ ದಾಸ್ತಾನಿಗೆ ಸೇರಿಸದೆ ಆ ಹಣವನ್ನು ಹಾಗೆಯೇ ಸುಮ್ಮನೇ ತಮ್ಮ ಬಳಿಯೇ ಇಟ್ಟುಕೊಂಡರೂ ಮೇಲ್ನೋಟದಲ್ಲಿ ಅದು "ಎಲ್ಲರ ವಿಜಯ"ವಾಗಿಯೇ ಕಾಣುತ್ತದೆ! (ಪ್ರಾಸಂಗಿಕವಾಗಿ ಹೇಳುವುದಾದರೆ, ಕೊರತೆ ಬೇಡಿಕೆಯ ಕಾರಣದಿಂದಾಗಿ ಈ ಕ್ರಮವು ಬೃಹತ್ ಪ್ರಮಾಣದ ನಿರುದ್ಯೋಗ ಉಂಟುಮಾಡುತ್ತದೆ).

ಅರ್ಥಶಾಸ್ತ್ರದ ಬಗ್ಗೆ ಹಿಂದುತ್ವದ ದೃಷ್ಟಿ ಸರಳವಾಗಿದೆ: ಕಾರ್ಪೋರೇಟ್‌ಗಳಿಗೆ ಹೆಚ್ಚು ಹಣ ಹಸ್ತಾಂತರಿಸಿದರೆ, ಸಮಾಜಕ್ಕೆ ಒಳ್ಳೆಯದಾಗುತ್ತದೆ. ಅವರಿಗೆ ಹಸ್ತಾಂತರಿಸುವ ಹಣದ ಮಿತಿ ಎಷ್ಟು ಎಂಬುದನ್ನು, ದುಡಿಯುವ ಜನರಿಗೆ ಎಷ್ಟನ್ನು ಕೊಡಲೇಬೇಕಾಗುತ್ತದೆ ಎಂಬುದು ನಿರ್ಧರಿಸುತ್ತದೆ. ಹಾಗಾಗಿ, ಹಿಂದುತ್ವದ ದೃಷ್ಟಿಯಲ್ಲಿ, ದುಡಿಯುವ ಜನರಿಗೆ ಕಡಿಮೆ ಕೊಟ್ಟಷ್ಟೂ, ಸಮಾಜಕ್ಕೆ ಒಳ್ಳೆಯದಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಎಲ್ಲರಿಗೂ ಗೊತ್ತಿರುವಂತೆ ಹಿಂದುತ್ವವು, ಅಲ್ಪ-ಸಂಖ್ಯಾತ ವಿರೋಧಿ ಮಾತ್ರವಲ್ಲ, ದಲಿತ-ವಿರೋಧಿ, ಬುಡಕಟ್ಟು-ವಿರೋಧಿ, ಮಹಿಳಾ-ವಿರೋಧಿ, ಸಾರಭೂತವಾಗಿ ಮತ್ತು ಮೂಲಭೂತವಾಗಿ ದುಡಿಯುವ ಜನ-ವಿರೋಧಿಯೂ ಹೌದು.

ಕುತ್ಸಿತ ಜಿಜ್ಞಾಸೆ

ಇಲ್ಲೊಂದು ಕುತ್ಸಿತ ಜಿಜ್ಞಾಸೆ ಕೆಲಸ ಮಾಡುತ್ತಿದೆ. ದೇಶವನ್ನು ಆವರಿಸಿರುವ ಪ್ರಸಕ್ತ ಬಿಕ್ಕಟ್ಟಿಗೆ ಹಿಂದುತ್ವವು ಸೂಚಿಸುವ ಪರಿಹಾರವೆಂದರೆ, ಕಾರ್ಪೋರೇಟ್‌ಗಳ ಕೈಗೆ ಒದಗಿಸುವ ಹಣವನ್ನು ಮತ್ತಷ್ಟು ಹೆಚ್ಚಿಸುವುದು. ಅರ್ಥಶಾಸ್ತ್ರದ ಬಗ್ಗೆ ಹಿಂದುತ್ವವು ಹೊಂದಿರುವ ದೃಷ್ಟಿಯನ್ನು ಪರಿಗಣಿಸಿದರೆ, ಅದು ಸೂಚಿಸುವ ಈ ಒಂದು ಪರಿಹಾರವನ್ನು ಬಿಟ್ಟರೆ, ಬೇರೆ ಯಾವ ಪರಿಕಲ್ಪನೆಯೂ ಅದಕ್ಕೆ ಎಟುಕುವುದಿಲ್ಲ. ಹಾಗಾಗಿ, ಅದನ್ನು ಸಾಕಾರಗೊಳಿಸಲು ಹಿಂದುತ್ವವು ಒಂದು ಆಕ್ರಮಣಕಾರಿ ಕಥನದತ್ತ ಹೊರಳಬೇಕಾಗುತ್ತದೆ. ಅದು ಜನರಲ್ಲಿ "ಆಘಾತ ಮತ್ತು ಭಯ ಭಕ್ತಿ" ಉಂಟುಮಾಡುವ "ಒಂದು ದೇಶ- ಒಂದು ಭಾಷೆ", ನಾಗರೀಕರ ರಾಷ್ಟ್ರೀಯ ದಾಖಲೆ ಮತ್ತು ನಾಗರೀಕತ್ವದ ತಿದ್ದುಪಡಿ ಮಸೂದೆಯಂತಹ ದೊಡ್ಡ ಕಾರ್ಯಾಚರಣೆಗಳಲ್ಲಿ ತೊಡಗಿಕೊಳ್ಳಬೇಕಾಗುತ್ತದೆ. ಈ ಕ್ರಮಗಳು, ಜನ ಜೀವನದ ಮೇಲೆ ಮತ್ತು ದೇಶದ ಐಕ್ಯತೆಯ ಮೇಲೆ ವಿನಾಶಕಾರಿ ಪರಿಣಾಮ ಬೀರುತ್ತವೆ.

ಅದರ ಜತೆಯಲ್ಲಿ, ಕಾರ್ಪೋರೇಟ್‌ಗಳ ಕೈಗೆ ಹೆಚ್ಚು ಹಣ ಒದಗಿಸುವ ಕ್ರಮವು, ಬಿಕ್ಕಟ್ಟಿನಿಂದ ಹೊರ ಬರುವುದರ ಬದಲಾಗಿ, ಬಿಕ್ಕಟ್ಟನ್ನು ತೀವ್ರಗೊಳಿಸುವ ಪರಿಣಾಮ ಬೀರುತ್ತದೆ. ಹಿಂದುತ್ವದ ಸರ್ಕಾರವು ಇಂತಹ ಅಪಾಯಕಾರಿ ಕ್ರಮಗಳಿಂದ ಹಿಂದೆ ಸರಿಯುವುದರ ಬದಲು, ಅವುಗಳನ್ನು ತೀವ್ರಗೊಳಿಸುತ್ತದೆ. ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ, ಬಿಕ್ಕಟ್ಟು ಆಳವಾದಷ್ಟೂ ಮತ್ತು ಅದನ್ನು ಉಪಶಮನಗೊಳಿಸುವ ವ್ಯರ್ಥ ಪ್ರಯತ್ನದಲ್ಲಿ ಕಾರ್ಪೋರೇಟ್‌ಗಳ-ಪರ ಕ್ರಮಗಳೂ ಹಂತ ಹಂತವಾಗಿ ಹೆಚ್ಚುತ್ತಾ ಹೋಗುವಂತೆಯೇ, ಅದೃಷ್ಟಹೀನ ಅಲ್ಪ-ಸಂಖ್ಯಾತರ ಮೇಲಿನ ಕೋಮುವಾದಿ ಹಲ್ಲೆಗಳೂ ಸಹ ಹೆಚ್ಚುತ್ತಾ ಹೋಗುತ್ತವೆ.

ಹಿಂದುತ್ವವು ಮೈಗೂಡಿಸಿಕೊಂಡಿರುವ ವರ್ಗ ತಿಳುವಳಿಕೆಯ ಮೂಲಕ ಕಟ್ಟಿಕೊಂಡಿರುವ ಹಿಂದುತ್ವ-ಕಾರ್ಪೋರೇಟ್ ಕೂಟವು ಇಂತಹ ಒಂದು ಕುತ್ಸಿತ ಜಿಜ್ಞಾಸೆಯನ್ನು ಹರಿಯಬಿಡುತ್ತಿರುವಾಗ, ಅದರ ಮರ್ಮಸ್ಥಾನವೂ ಈ ಜಿಜ್ಞಾಸೆಯಲ್ಲೇ ಅನಾವರಣಗೊಳ್ಳುತ್ತದೆ, ಏಕೆಂದರೆ ಅದು ಬಿಕ್ಕಟ್ಟನ್ನು ಪರಿಹರಿಸಲಾಗದೆ ಬಿಕ್ಕಟ್ಟು ಇನ್ನಷ್ಟು ಆಳಗೊಳ್ಳುತ್ತದೆ, ಅದರಿಂದಾಗಿ ಅಂತಿಮವಾಗಿ ಅದನ್ನು ನಿವಾರಿಸುವ ಪ್ರತಿರೋಧವೂ ಪ್ರಕಟಗೊಳ್ಳುತ್ತದೆ.

ಹಟ್ಟಿ ಪಟ್ಟಣದ ಮೆಟ್ರಿಕ್ ನಂತರ ಹಾಸ್ಟೆಲ್‌ಗೆ ಮೂಲಭೂತ ಸೌಕರ್ಯ ನೀಡಲು ಎಸ್‌ಎಫ್‌ಐ ಪ್ರತಿಭಟನೆ



ಪಟ್ಟಣದ ಮೆಟ್ರಿಕ್ ನಂತರದ ಹಾಗೂ ಮೆಟ್ರಿಕ್ ಪೂರ್ವ ಹಾಸ್ಟೆಲ್‌ಗಳಿಗೆ ಕನಿಷ್ಠ ಮೂಲಭೂತ ಸೌಕರ್ಯ ನೀಡಲು ಒತ್ತಾಯಿಸಿ ಎಸ್‌ಎಫ್‌ಐ ಅನಿರ್ದಿಷ್ಟಾವಧಿ ಪ್ರತಿಭಟನಾ ಧರಣಿ ಆರಂಭಿಸಿದೆ.

ಪ್ರತಿಭಟನಾ ಧರಣಿಯನ್ನುದ್ದೇಶಿಸಿ ಮಾತನಾಡಿದ ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ರಮೇಶ್ ವೀರಾಪೂರು, ಹಾಸ್ಟೆಲ್ ನಲ್ಲಿ ಕನಿಷ್ಠ ಮೂಲಭೂತ ಸೌಕರ್ಯಗಳಿಲ್ಲದೇ ಜ್ವಲಂತ ಸಮಸ್ಯೆಗಳಿಂದ ಬಳಲುತ್ತಿದೆ. ಸಾಕಷ್ಟು ಬಾರಿ ಈ ಬಗ್ಗೆ ವಿದ್ಯಾರ್ಥಿಗಳು ತಾಲೂಕು ಸಮಾಜಕಲ್ಯಾಣ ಅಧಿಕಾರಿಗಳ ಗಮನಕ್ಕೆ ತಂದರೂ ಅವರು ಅಸಡ್ಡೆ ತೋರಿಸಿದ್ದಾರೆ. ವಾರ್ಡನ್ ಚಂದ್ರಶೇಖರ್ ಅವರಿಗೆ ಸಮಸ್ಯೆಗಳನ್ನು ಗಮನಕ್ಕೆ ತಂದು ಪರಿಹರಿಸಲು ಕೇಳಿದರೆ, ತಾಲೂಕಾ ಸಮಾಜಕಲ್ಯಾಣ ಅಧಿಕಾರಿಗಳನ್ನು ಕೇಳಿ, ನಾನು ಏನು ಮಾಡಬೇಕು? ನಾನು ಖರ್ಚು ಮಾಡಿದರೆ ಅಧಿಕಾರಿಗಳು ಹಣ ಬಿಡುಗಡೆ ಮಾಡುವುದಿಲ್ಲ ಎಂದು ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಾರೆ ಎಂದರು.

ಈ ಅವ್ಯವಸ್ಥೆಯಿಂದಾಗಿ ವಿದ್ಯಾರ್ಥಿಗಳಿಗೆ ಓದಲು ಸೂಕ್ತ ವಾತಾವರಣವಿಲ್ಲದೇ ನರಕಯಾತನೆ ಅನುಭವಿಸುತ್ತಿದ್ದಾರೆ. ಇಷ್ಟಾದರೂ ತಾಲೂಕಾ ಹಾಗೂ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಇತ್ತ ಗಮನ ಹರಿಸದೇ ಇರೋದು ನಾಚಿಕೆಗೇಡಿನ ಸಂಗತಿ ಎಂದು ವಾಗ್ದಾಳಿ ನಡೆಸಿದರು.

ಈ ವರ್ಷದ ಫುಡ್‌ಚಾರ್ಟ್ ಹಾಕಬೇಕು. ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಅಡುಗೆ ಭಟ್ಟರನ್ನು ನೇಮಿಸಬೇಕು. ಹಾಸ್ಟೆಲ್‌ಗಳಿಗೆ ಗೇಟ್ ವ್ಯವಸ್ಥೆ ಮಾಡಿ, ಸೆಕ್ಯೂರಿಗಳನ್ನು ನೇಮಿಸಬೇಕು. ತಿಂಗಳಿಗೊಮ್ಮೆ ನೀಡಬೇಕಾದ ಬ್ರೆಶ್, ಸಾಬೂನು, ಪೇಸ್ಟ್ ಒಳಗೊಂಡ ಕಿಟ್ ವಿತರಿಸಬೇಕು. ನಿರ್ಮಾಣ ಹಂತದಲ್ಲಿರುವ ಡೈನಿಂಗ್ ಹಾಲ್ ಹಾಗೂ ಶೌಚಾಲಯ ಕಾಮಗಾರಿ ಕೂಡಲೇ ಪೂರ್ಣಗೊಳಿಸಬೇಕು. ಅಲ್ಲದೇ ಇನ್ನೂ ಹೆಚ್ಚುವರಿ ಶೌಚಾಲಯ ಹಾಗೂ ಸ್ನಾನ ಗೃಹಗಳನ್ನು ನಿರ್ಮಿಸಬೇಕು. ರೂಮ್‌ಗಳು ಸೋರುತ್ತಿದ್ದು, ಕಟ್ಟಡ ನವೀಕರಣ ಮಾಡಬೇಕು. ಹಾಗೂ ಹೆಚ್ಚುವರಿ ಕೊಟಡಿಗಳನ್ನು ನಿರ್ಮಿಸಬೇಕು. ಫ್ಯಾನ್, ಲೈಟ್, ವೈರಿಂಗ್, ಕಂಪ್ಯೂಟರ್, ವೈಫೈ, ಲೈಬ್ರರಿ, ಪ್ರಥಮ ಚಿಕಿತ್ಸೆ ಪೆಟ್ಟಿಗೆ, ಸೊಳ್ಳೆ ಪರದೆ, ಸೋಲಾರ್, ಕ್ರೀಡಾ ಸಾಮಗ್ರಿ, ದಿನಪತ್ರಿಕೆಗಳು, ಪಠ್ಯಪುಸ್ತಕ, ಸ್ಟಡಿ ಚೇರ್, ಕಿಟಕಿ ರೀಪೇರಿ, ಚಂಬು ಬಕೇಟ್, ಬೆಡ್‌ಶೀಟ್ ಸೇರಿದಂತೆ ಇನ್ನಿತರ ಮೂಲಭೂತ ಸೌಲಭ್ಯಗಳನ್ನು ನೀಡಬೇಕು ಎಂದು ಮನವಿ ಪತ್ರದಲ್ಲಿ ಆಗ್ರಹಿಸಲಾಗಿದೆ.

ಸ್ಥಳೀಯ ಪುಂಡರ ಹಾವಳಿ ತಡೆಯಬೇಕು. ಹಾಸ್ಟೆಲ್ ಸ್ವಚ್ಛತೆಗೆ ಒತ್ತು ನೀಡಬೇಕು. ಹಾಸ್ಟೆಲ್‌ನಲ್ಲಾದ ಪೇಟಿಂಗ್ ಟೆಂಡರ್‌ನಲ್ಲಾದ ಅವ್ಯವಹಾರ ತನಿಖೆ ಮಾಡಿ, ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸಬೇಕು. ಹಾಗೂ ಮತ್ತೆ ಪೇಟಿಂಗ್ ಮಾಡಿಸಬೇಕು. ಬೇಜವಾಬ್ದಾರಿ ವಾರ್ಡನ್ ಮೇಲೆ ಸೂಕ್ತ ಕ್ರಮ ಜರುಗಿಸಬೇಕು. ಅಡುಗೆ ಸಿಬ್ಬಂದಿಯವರ ವೇತನ ನೀಡಬೇಕು. ವೇತನದಲ್ಲಾಗುತ್ತಿರುವ ವ್ಯಾಪಕ ಭ್ರಷ್ಟಾಚಾರದ ವಿರುದ್ಧ ತನಿಖೆ ಮಾಡಿ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಲಾಗಿದೆ.

ಈ ಸಂದರ್ಭದಲ್ಲಿ ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ರಮೇಶ್ ವೀರಾಪೂರು, ಜಿಲ್ಲಾ ಉಪಾಧ್ಯಕ್ಷ ಲಿಂಗರಾಜ್ ಕಂದಗಲ್, ಜಿಲ್ಲಾ ಸಮಿತಿ ಸದಸ್ಯರಾದ ತಿಪ್ಪಣ್ಣ ನಿಲೋಗಲ್, ಶಿವಲಿಂಗ, ಶಿವಪ್ಪ ನಿಲೋಗಲ್, ಹಾಸ್ಟೆಲ್ ಘಟಕದ ಅಧ್ಯಕ್ಷ ಶರಣಬಸವ, ಸಂಘಟನಾ ಕಾರ್ಯದರ್ಶಿ ಪ್ರಭು, ಮುಖಂಡರಾದ ನಿಖಿಲ್, ಆದಿ ಕೋಠಾ, ಡಿವೈಎಫ್‌ಐನ ಮುಖಂಡರಾದ ರಮೇಶ್ ಮಡ್ಡಿಕಾರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಇದೀಗ "ಸಂಪೂರ್ಣ ಖಾಸಗೀಕರಣ"ದ ಪರ್ವ.... ಪುಟ 6 ರಿಂದ

ಎಂಬುದು ಸರಕು–ಸಾಮಗ್ರಿಗಳಿಗೆ ಸಂಬಂಧಿಸಿದ್ದಲ್ಲ ಎಂದು ಅಮರ್ತ್ಯ ಸೆನ್, ಈ. ಎಫ್. ಶುಮಾಕರ್, ಮೆಹಬೂಬ್ ಉಲ್ ಹಕ್ ಅವರು ಹೇಳುತ್ತಿದ್ದಾರೆ.

ಮೆಹಬೂಬ್ ಉಲ್ ಹಕ್ ಹೇಳುವಂತೆ 'ವರಮಾನವೇ ಜನರ ಬದುಕಿನ ಒಟ್ಟು ಮೊತ್ತವಲ್ಲ'. ಅಭಿವೃದ್ಧಿಯು ಜನರಿಗೆ, ಜನರ ಜೀವನೋಪಾಯಕ್ಕೆ ಸಂಬಂಧಿಸಿದ ಸಂಗತಿ.

ಈ. ಎಫ್. ಶುಮಾಕರ್ ಹೀಗೆ ಹೇಳುತ್ತಾರೆ : 'ಅಭಿವೃದ್ಧಿಯ ಎನ್ನುವುದು ಸರಕು–ಸಾಮಗ್ರಿಗಳಿಂದ ಆರಂಭವಾಗುವುದಿಲ್ಲ. ಅದು ಜನರಿಂದ, ಆರಂಭವಾಗುತ್ತದೆ. ಇಲ್ಲದಿದ್ದರೆ ಸಂಪನ್ಮೂಲಗಳೆಲ್ಲವೂ ಅನುಪಯುಕ್ತವಾಗಿರುತ್ತವೆ, ನಿಸ್ತೇಜವಾಗಿರುತ್ತವೆ ಮತ್ತು ಬಳಸದೆ ಹಾಗೆ ಉಳಿಯುತ್ತವೆ'.

ಅಮರ್ತ್ಯ ಸೆನ್ ಪ್ರಕಾರ 'ಆರ್ಥಿಕ ಸಮೃದ್ಧತೆಯ ವಿಸ್ತೃತತೆಯು ಅಭಿವೃದ್ಧಿಯಲ್ಲ. ಜನರ ಬದುಕಿನ ಸಮೃದ್ಧತೆಯನ್ನು ವಿಸ್ತೃತಗೊಳಿಸುವ ಪ್ರಕ್ರಿಯೆಯೇ ಅಭಿವೃದ್ಧಿ',

ಅಂದಮೇಲೆ 'ಅಭಿವೃದ್ಧಿಯು ಸಂಪತ್ತಿನ ಉತ್ಪಾದನೆಗೆ ಸಂಬಂಧಿಸಿದ ಸಂಗತಿಯಲ್ಲ. ಇದು ಕಾನೂನುಬದ್ಧ ಲಾಭ ಸಂಪಾದನೆಗೂ ಸಂಬಂಧಿಸಿದ ಸಂಗತಿಯಲ್ಲ ಅಥವಾ ಇದು ಜನರ ಆಸ್ತಿಗಳನ್ನು ಖಾಸಗೀಕರಣಗೊಳಿಸುವುದಕ್ಕೆ ಸಂಬಂಧಿಸಿದ ಸಂಗತಿಯಲ್ಲ'. ಇವೆಲ್ಲವು ಅಭಿವೃದ್ಧಿಗೆ ಬೇಡವೇ ಎಂದರೆ ಉತ್ತರ ಸ್ಪಷ್ಟವಾಗಿ 'ಬೇಕು'. ಆದರೆ ಅದೇ/ಅವುಗಳೇ ಅಭಿವೃದ್ಧಿಯಲ್ಲ.

ಇದು ಜನರಿಗೆ, ಜನರ ಬದುಕಿಗೆ, ಜನರ ಜೀವನೋಪಾಯಕ್ಕೆ, ಅವರ ಪರಿಶ್ರಮಕ್ಕೆ, ಅವರ ಬೆವರಿಗೆ, ಅವರ ಕಣ್ಣೀರಿಗೆ ಸಂಬಂಧಿಸಿದ ಸಂಗತಿ. ಕಾರ್ಮಿಕ ವರ್ಗ, ರೈತ ಸಮುದಾಯ, ಮಹಿಳೆಯರು–– ಇಂತಹ ಅಭಿವೃದ್ಧಿಯನ್ನು, ಇಂತಹ ಮೌಲ್ಯಗಳನ್ನು ಪ್ರತಿನಿಧಿಸುತ್ತವೆ.

ಈ ಹಿನ್ನೆಲೆಯಲ್ಲಿ 'ನಮ್ಮ ಸಮಾಜದ ಸಾರ್ವಜನಿಕ ಆಸ್ತಿಗಳ ಮಾರಾಟಕ್ಕೆ–ಖಾಸಗೀಕರಣಕ್ಕೆ ಅವಕಾಶ ಕೊಡುವುದಿಲ್ಲ' ಎಂದು ನಾವು ಶಪಥ ಮಾಡಬೇಕಾದ ಸಮಯ ಬಂದಿದೆ. ನಮ್ಮಲ್ಲಿ ಆಸ್ತಿ ಮಾರುವುದು ಅವಮಾನದ ಸಂಗತಿ. ಅದೊಂದು ಅವಮಾನದ ಕ್ರಿಯೆ. ಅದೊಂದು ಕಳಂಕದ ಸಂಗತಿ. ಈ ಶಪಥದ ಚಳುವಳಿಯಲ್ಲಿ ರೈತ ಸಂಘಗಳು, ಕಾರ್ಮಿಕ ಸಂಘಟನೆಗಳು, ಯುವ ಸಮೂಹ ಗಂಭೀರವಾಗಿ ಭಾಗವಹಿಸಬೇಕು. ಸಾರ್ವಜನಿಕ ಆಸ್ತಿಗಳನ್ನು ಮಾರಾಟ ಮಾಡುವುದು ಅಭಿವೃದ್ಧಿಯಲ್ಲ.

ಕೊನೆಯದಾಗಿ ಇಂದು ಅಭಿವೃದ್ಧಿಯನ್ನು ವೆಲ್ಥ್ ಕ್ರಿಯೆಟರ್ಸ್‌ಗೆ, ಖಾಸಗಿ ಕಂಪನಿಗಳಿಗೆ, ಕಾರ್ಪೋರೇಟ್ ಕುಳಗಳಿಗೆ, ಪ್ರಾಫಿಟ್ ಮೇಕಿಂಗ್ ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗುತ್ತಿದೆ. ರೈತರು, ಕಾರ್ಮಿಕರು, ಮಹಿಳೆಯರು ಇನ್ನು ಮೇಲೆ ವೆಲ್ಥ್ ಕ್ರಿಯೇಟರ್ಸ್‌ಗಳ ಮರ್ಜಿಯಲ್ಲಿ ಬದುಕಬೇಕಾಗುತ್ತದೆ. ವೆಲ್ಥ್ ಕ್ರಿಯೇಟರ್ಸ್ ಅವರಾದರೆ ಅಭಿವೃದ್ಧಿಯ ಮೇಲೂ ಅವರದೇ ಮಾಲೀಕತ್ವ ಇರುತ್ತದೆ. ಶ್ರೀ ನರೇಂದ್ರ ಮೋದಿ, ಶ್ರೀಮತಿ ನಿರ್ಮಲ ಸೀತಾರಾಮನ್, ಅಮಿತಾಭ್ ಕಾಂತ್, ಪ್ರಹ್ಲಾದ್ ಜೋಷಿ ––– ಎಲ್ಲರೂ ಖಾಸಗೀ ವಲಯದ ಗುಣಗಾನದಲ್ಲಿ ನಿರತರಾಗಿದ್ದಾರೆ. ಅವರ ಚಟುವಟಿಕೆಗಳನ್ನು ಅನುಮಾನದಿಂದ ನೋಡಬಾರದು ಎಂದು ಒಬ್ಬರು ಹೇಳಿದರೆ ಅವರನ್ನು ಕೀಳಾಗಿ ನೋಡಬಾರದು ಎಂದು ಮತ್ತೊಬ್ಬರು ಹೇಳುತ್ತಿದ್ದಾರೆ. ಆದರೆ ಜನರ ಉದ್ಯೋಗದ ಬಗ್ಗೆ, ಹಸಿವಿನ ಬಗ್ಗೆ, ಬದುಕಿನ ಬವಣೆ ಬಗ್ಗೆ ಯಾರು ಮಾತನಾಡಬೇಕು? ರೈತ ಸಂಘಗಳು, ಕಾರ್ಮಿಕ ಸಂಘಟನೆಗಳು ಯುವಜನರ ಸಮೂಹ ಇನ್ನು ಮೇಲೆ ಹಕ್ಕುಗಳ ಬಗ್ಗೆ ಮಾತನಾಡುವುದು ಕಷ್ಟವಾಗುತ್ತದೆ.

ಅಭಿವೃದ್ಧಿ ಎನ್ನುವುದು ವರಮಾನಕ್ಕೆ, ಬಂಡವಾಳಕ್ಕೆ, ವಿಲ್ಥ್ ಕ್ರಿಯೆಟರ್ಸ್‌ಗಳಿಗೆ, ಪ್ರಾಫಿಟ್ ಮೇಕಿಂಗ್ ಸಂಸ್ಥೆಗಳಿಗೆ, ಸಾರ್ವಜನಿಕ ಆಸ್ತಿಗಳ ಮಾರಾಟಕ್ಕೆ ಅಥವಾ 5 ಟ್ರಿಲಿಯನ್ ಡಾಲರ್ ಜಿಡಿಪಿಗೆ–10 ಟ್ರಿಲಿಯನ್ ಡಾಲರ್ ಜಿಡಿಪಿಗೆ, ಡಬ್ಬಲ್ ಇನ್‌ಕಮ್‌ಗೆ ಸಂಬಂಧಿಸಿದ ಸಂಗತಿಯಲ್ಲ. ಏರಿಕೆಯಾದ ವರಮಾನದ ಮೇಲೆ ಹಕ್ಕನ್ನು ಸ್ಥಾಪಿಸುವ ಜನರ ಧಾರಣ ಸಾಮರ್ಥ್ಯದ ವಿಸ್ತರಣೆಯೇ ಅಭಿವೃದ್ಧಿ. ಆದರೆ ಈ 5 ಟ್ರಿಲಿಯನ್ ಡಾಲರ್ ಜಿಡಿಪಿ ಮೇಲೆ ಯಾರ ಅಧಿಕಾರವಿದೆ? ಕರ್ನಾಟಕದ 137 ಲಕ್ಷ ರೈತಾಪಿ ಜನಗಳ, ಕೃಷಿಯನ್ನು ಅವಲಂಬಿಸಿರುವವರ ಹಕ್ಕಿದೆಯೇ? ಮಹಿಳೆಯರ ಹಕ್ಕಿದೆಯೇ? ದಲಿತರ ಹಕ್ಕಿದೆಯೇ? ಬುಡಕಟ್ಟಿನವರ ಹಕ್ಕಿದೆಯೇ? ಅದು ಸುಮ್ಮ ಸುಮ್ಮನೆ ಬಡವರ ಪಾಲಾಗುತ್ತದೆಯೇ? ಈ ಸಂಗತಿಗಳ ಬಗ್ಗೆ ನಾವು ಚಿಂತಿಸಬೇಕಾಗಿದೆ.

ಪೋರ್ಚುಗಲ್ ಸಂಸತ್ತಿನ ಚುನಾವಣೆ: ಮತ್ತೆ ಸೋಶಲಿಸ್ಟ್ ಪಾರ್ಟಿ ನೇತೃತ್ವದ ಮೈತ್ರಿ ಸರಕಾರ

ಕಳೆದ ಭಾನುವಾರ (06.10.2019) ಪೋರ್ಚುಗಲ್‌ನ ಸಂಸತ್ತಿನ ಒಟ್ಟು 230 ಅಸನಗಳಿಗೆ ನಡೆದ ಚುನಾವಣೆಯಲ್ಲಿ, ಪ್ರಧಾನಿ ಆಂಟೋನಿಯೊ ಕೋಸ್ಟಾರ ಆಡಳಿತಾರೂಢ ಸೋಶಲಿಸ್ಟ್ ಪಾರ್ಟಿ(ಪಿಎಸ್) 106 ಸ್ಥಾನ ಗಳನ್ನು ಮತ್ತು 36.7% ಮತಗಳನ್ನು ಪಡೆದು ಅತಿ ದೊಡ್ಡ ಪಕ್ಷವಾಗಿ ಹೊರ ಹೊಮ್ಮಿದೆ. ಸರಕಾರ ರಚಿಸಲು ಬಹುಮತಕ್ಕೆ ಇನ್ನು 10 ಸ್ಥಾನಗಳು ಕಡಿಮೆ ಇದೆ. ಪ್ರತಿ ಪಕ್ಷವಾದ ಮಧ್ಯ–ಬಲ ಪಂಥೀಯ ಸೋಷಿಯಲ್ ಡೆಮಾಕ್ರೆಟಿಕ್ ಪಕ್ಷ (ಪಿಎಸ್‌ಡಿ) ತನ್ನ ಇತಿಹಾಸದಲ್ಲಿಯೇ ಅತ್ಯಂತ ಕಡಿಮೆ ಅಂದರೆ, ಶೇ.28 ಮತ ಪಡೆದು, 77 ಸ್ಥಾನ ಗಳನ್ನು ಮಾತ್ರ ಗಳಿಸಲು ಸಾಧ್ಯವಾಗಿದೆ.



ಈಕ್ವೇಡಾರ್‌ನಲ್ಲಿ ಐಎಂಎಫ್ ಧೋರಣೆಗಳ ವಿರುದ್ಧ ಬೃಹತ್ ಪ್ರತಿಭಟನೆ, ಮುಷ್ಕರ ತುರ್ತು ಪರಿಸ್ಥಿತಿ ಘೋಷಣೆ–ದಮನಚಕ್ರ: ಸಾವಿರಾರು ಜನರ ಬಂಧನ, 8 ಜನರ ಸಾವು



ದಕ್ಷಿಣ ಅಮೆರಿಕಾದ ದೇಶ ಇಕ್ವೆ ಡೋರ್‌ನ ಅಧ್ಯಕ್ಷ ಲೆನಿನ್ ಮೊರೆನೊ ಆಡಳಿತದ ನವ ಉದಾರವಾದಿ ನೀತಿಗಳ ವಿರುದ್ದ ಅಕ್ಟೋಬರ್ 9ರಂದು ರಾಷ್ಟ ವ್ಯಾಪ್ತಿ ಮುಷ್ಕರದಲ್ಲಿ ಬಾರಿ ಜನಸ್ತೋಮ ಭಾಗವಹಿಸಿದೆ. ಇದು "ಬೃಹತ್ ರಾಷ್ಟ್ರೀಯ ಮುಷ್ಕರ" ವಾಗಿ ಪರಿಣಮಿಸಿದೆ. ರಾಜಧಾನಿ ಕ್ವಿಟೊದ ಬೀದಿಗಳಲ್ಲಿ ನೂರಾರು ಸಾವಿರಾರು ಕಾರ್ಮಿಕರು, ವಿದ್ಯಾರ್ಥಿಗಳು, ಸ್ಥಳೀಯ ರೈತರು ಮತ್ತು ನಾಗರೀಕರು, ಆಫ್ರೋ–ವಂಶಸ್ಥರು, ಮಹಿಳೆಯರು ಸಹಾ ದೊಡ್ಡ ಪ್ರಮಾಣದಲ್ಲಿ ಮುಷ್ಕರದಲ್ಲಿ ಭಾಗಿಯಾಗಿದ್ದರು. ಕಳೆದ ಮಾರ್ಚ್ ನಲ್ಲಿ ಐ.ಎಂ.ಎಫ್ ನೊಂದಿಗೆ 10.2 ದಶಲಕ್ಷ ಅಮೆರಿಕನ್ ಡಾಲರ್ (ಯುಎಸ್ ಡಿ) ಸಾಲಕ್ಕೆ ಸಹಿ ಮಾಡಿದ ಹಿನ್ನೆಲೆಯಲ್ಲಿ, ಆ ಸಾಲದ ಹೊರೆಯನ್ನು, ಸಾಮಾನ್ಯ ಜನರು, ಸಣ್ಣಪುಟ್ಟ ವ್ಯಾಪಾರಸ್ತರು, ಹಾಗೂ ದುಡಿಯುವ ಜನರ ಮೇಲೆ ಹೇರಿ, ಆರ್ಥಿಕ "ಮಿತವ್ಯಯ" ಕ್ರಮವನ್ನು ಜಾರಿಗೆ ತರಲಾಗಿತ್ತು. ಈ ಆರ್ಥಿಕ ಕ್ರಮಗಳನ್ನು ಈಕ್ವೆಡಾರ್‌ನ ಜನಸ್ತೋಮ ಸಾರಸಗಟಾಗಿ ನಿರಾಕರಿಸಿದೆ.

ಈಕ್ವೆಡಾರ್‌ನ ದುಡಿಯುವ ಜನರು, ಕಳೆದ ಮಾರ್ಚ್ ನಿಂದ ಭಾರೀ ಪ್ರತಿಭಟನೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಕಳೆದ ಜುಲೈ ನಲ್ಲಿ 5 ದಿನಗಳ ಕಾಲ ರಾಷ್ಟ್ರೀಯ ಮುಷ್ಕರವನ್ನು ನಡೆಸಲಾಗಿತ್ತು. ಆದಾಗ್ಯೂ, ಮೊರೆನೊ ಆಡಳಿತ ಮುಷ್ಕರ ನಿರತರ ಬೇಡಿಕೆಗಳಿಗೆ ಸ್ಪಂದಿಸಲಿಲ್ಲ. ಬದಲಿಗೆ ತನ್ನ ನವ ಉದಾರವಾದಿ ನೀತಿಗಳನ್ನು ಮತ್ತಷ್ಟು ತೀವ್ರಗೊಳಿಸಿತು. ಮುಷ್ಕರ ತೀವ್ರ ಸ್ವರೂಪ ತಾಳಿದೆ. ಇದರ ಮಧ್ಯೆ ಇದೀಗ "ರಾಷ್ಟ್ರೀಯ ತುರ್ತುಪರಿಸ್ಥಿತಿ" ಯನ್ನು ಘೋಷಿಸಿಲಾಗಿದೆ. ಪೋಲಿಸ್ ಹಾಗೂ ಮಿಲಿಟರಿ ಪಡೆಯನ್ನು ಬಿಟ್ಟು ಪ್ರತಿಭಟನೆಗಳನ್ನು ದಮನ ಮಾಡಲು ಲೆನಿನ್ ಮೊರೆನೊ ಆಡಳಿತ ಆದೇಶಿಸಿದೆ. ಇದರ ಪರಿಣಾಮವಾಗಿ, ಅಶ್ರುವಾಯು ಮತ್ತು ಲಾಠಿ ದಾಳಿಗಳು ತೀವ್ರಗೊಂಡು, ದಾಳಿಯು ಉಗ್ರ ಸ್ವರೂಪ ತಾಳಿದೆ. ಸಾವಿರಾರು ಪ್ರತಿಭಟನೆಕಾರರನ್ನು ಬಂಧಿಸಲಾಗಿದೆ. ಹಿಂಸಾತ್ಮಕ ಕೃತ್ಯಗಳು ಹಾಗೂ ದಬ್ಬಾಳಿಕೆ ಹೆಚ್ಚಾಗಿದೆ. ಈ ದಾಳಿಯುಲ್ಲಿ ಇಲ್ಲಿಯವರೆಗೂ, ಸುಮಾರು 8 ಜನರು ಕೊಲ್ಲಲ್ಪಟ್ಟಿದ್ದಾರೆ.

ದುಡಿಯುವ ಜನರ ಮೇಲೆ ದಾಳಿ

ಕಳೆದ ಮಾರ್ಚ್ ನಲ್ಲಿ ಐ.ಎಂ.ಎಫ್. ನೊಂದಿಗೆ ಒಪ್ಪಂದ ಮಾಡಿಕೊಂಡ ನಂತರ, ಈಕ್ವೆಡಾರ್ ಅಧ್ಯಕ್ಷ ಲೆನಿನ್ ಮೊರೆನೊ 4.2 ಮಿಲಿಯನ್ ಯುಎಸ್ ಡಿ ಸಾಲವನ್ನು ಮಂಜೂರು ಮಾಡಿಸಿಕೊಂಡರು. ಈ ಒಪ್ಪಂದದ ಶರತ್ತನನು ಪಾಲಿಸಲು ಅಕ್ಟೋಬರ್ 1 ರಂದು, "ಆರ್ಥಿಕ ಮಿತವ್ಯಯದ ಕ್ರಮ"ಗಳನ್ನು ತರಬೇಕೆಂಬ ಐಎಂಎಫ್ ಶರತ್ತುಗಳನ್ನು ಪಾಲಿಸಲು ದುಡಿಯುವ ಜನರ ಮೇಲೆ 'ಮಿತವ್ಯಯ'ದ ಹೆಸರಲ್ಲೇ ಭಾರೀ ಹೊರೆಗಳನ್ನು ಹಾಕಲಾಗುತ್ತಿದೆ. ಇವುಗಳಲ್ಲಿ ಪ್ರಮುಖವಾಗಿ, ಪೆಟ್ರೋಲಿಯಂ ಮತ್ತು ಡೀಸಲ್ ಮೇಲಿನ ತೆರಿಗೆಗಳನ್ನು ಬದಲಾಯಿಸಿ, ಗ್ರಾಹಕರ ಮೇಲೆ ಹೆಚ್ಚಿನ ಹೊರೆ ಹೇರಲಾಗಿದೆ, ಸುಮಾರು 120% ದರ ಏರಿಕೆ ಇದರಿಂದ ಆಗಿದೆ. ಕಳೆದ ನಾಲ್ಕು ದಶಕಗಳಿಂದಲೂ ಜಾರಿಯಲ್ಲಿದ್ದ, ಕಾರ್ಮಿಕ ಹಕ್ಕುಗಳ ಹಳೆಯ ಸಬ್ಸಿಡಿಗಳನ್ನು ಏಕಾಏಕಿ ತೆಗೆದು ಹಾಕಿದ್ದಾರೆ. ಈ ಮಿತವ್ಯಯ ಕ್ರಮಗಳಿಂದ, ಕ್ರಮೇಣವಾಗಿ ಕಾರ್ಮಿಕರ ಕಠಿಣ ಹೋರಾಟದ ಭಾಗವಾಗಿ ಗಳಿಸಿಕೊಂಡಿದ್ದ ಅನೇಕ ಹಕ್ಕುಗಳು ನಾಶವಾಗುತ್ತವೆ ಎಂಬುದು ಪ್ರತಿಭಟನೆಕಾರರ ಆತಂಕ. ಇದು ವಾಸ್ತವವು ಹೌದು.

ಅಕ್ಟೋಬರ್ 3 ರ ಮುಂಜಾನೆಯಿಂದಲೇ, ಪ್ರತಿಭಟನೆಗಳು ಇಡೀ ಈಕ್ವೆಡಾರ್‌ನಾದ್ಯಂತ, ಪ್ರಮುಖ ಹೆದ್ದಾರಿಗಳು ಮತ್ತು ರಸ್ತೆಗಳಲ್ಲಿ ಮತ್ತೆ ಶುರುವಾಯಿತು. ಈ ರಸ್ತೆಗಳಲ್ಲಿ ನಿರ್ಬಂಧಗಳನ್ನು ವಿಧಿಸಿದ್ದರು ಸಹಾ, ಇದನ್ನು ಲೆಕ್ಕಿಸದೆ, ಸಾವಿರಾರು ಜನರು ಒಟ್ಟಾಗಿ, ಅಧ್ಯಕ್ಷ ಲೆನಿನ್ ಮೊರೆನೊ ಘೋಷಿಸಿದ ಇತ್ತೀಚಿನ ಆರ್ಥಿಕ ಕ್ರಮಗಳ 'ಪ್ಯಾಕೇಜ್'ನ್ನು ಪ್ರತಿಭಟಿಸಲು ನಿರ್ಧರಿಸಿದರು. ಸಾಮೂಹಿಕ ಪ್ರತಿಭಟನೆಗಳಿಗೆ ಪ್ರತಿಕ್ರಿಯೆಯಾಗಿ ಅಂದೇ ಮಧ್ಯಾಹ್ನ ಮೊರೆನೊ ಅವರು "ತುರ್ತುಪರಿಸ್ಥಿತಿ" ಯನ್ನು ಘೋಷಿಸಿದರು. ಮಾಧ್ಯಮಗಳ ಮೇಲೆ ನಿರ್ಬಂಧ, ದಾಳಿಗಳು ಕೂಡ ನಡೆದಿವೆ. ಪೋಲೀಸ್ ಮತ್ತು ಮಿಲಿಟರಿಯನ್ನು ನಿಯೋಜಿಸುವ ಮತ್ತು ಸಾರಿಗೆ ಕೇಂದ್ರಗಳನ್ನು ಮುಚ್ಚುವಂತಹ ಹೆಚ್ಚಿನ ಅಧಿಕಾರಗಳನ್ನು "ಭದ್ರತೆ" ಹೆಸರಿನಲ್ಲಿ ಸರಕಾರ ಪಡೆದುಕೊಂಡಿದೆ. ತುರ್ತು ಪರಿಸ್ಥಿತಿ ಘೋಷಣೆ ನಂತರ, ಪ್ರತಿಭಟನೆಕಾರರ ಮೇಲೆ ಅಶ್ರುವಾಯು ಪ್ರಯೋಗ ಮತ್ತು ಲಾಠಿದಾಳಿಯೊಂದಿಗೆ ಭಾರೀ ಪೋಲಿಸ್ ದಾಳಿ ನಡೆಸಲಾಗಿದೆ. ಈ ಘಟನೆಗಳಲ್ಲಿ ಸಾವಿರಾರು ಪ್ರತಿಭಟನೆಕಾರರನ್ನು ಬಂಧಿಸಲಾಗಿದೆ ಎಂದು ವರದಿಯಾಗಿದೆ.

ಈ ದಾಳಿಗಳು ಮತ್ತು ದಬ್ಬಾಳಿಕೆಗಳು ಈಕ್ವೆಡಾರ್ ಜನರನ್ನುಮತ್ತಷ್ಟುರೊಚ್ಚಿಗೆಬ್ಬಿಸಿವೆ.ಅವರುರಾತ್ರಿಯಿಡೀ ಸಜ್ಜುಗೊಳ್ಳುತ್ತಿದ್ದಾರೆ. ತುರ್ತುಪರಿಸ್ಥಿತಿ ಹೆಸರಿನಲ್ಲಿ, ನಡೆಸುತ್ತಿರುವ ದಾಳಿ ದಬ್ಬಾಳಿಕೆಗಳನ್ನು ಎದುರಿಸಲು ಚಳವಳಿಗಾರರು ದೃಢತೆಯಿಂದ ಸಜ್ಜುಗೊಳ್ಳುತ್ತಿದ್ದಾರೆ. ಇದರಲ್ಲಿ ಸಾಮಾಜಿಕ ಚಳುವಳಿಗಳು, ಕಾರ್ಮಿಕ ಸಂಘಗಳು, ರೈತ ಸಂಘಟನೆಗಳು, ಮೀನುಗಾರಿಕೆ ಸಮುದಾಯಗಳು, ನೆರೆಹೊರೆಯ ಸಂಘಟನೆಗಳು, ವಿದ್ಯಾರ್ಥಿಗಳು ಮತ್ತು ರಾಜಕೀಯ ಸಂಸ್ಥೆಗಳು ಐಕ್ಯತೆಯನ್ನು ಪ್ರದರ್ಶಿಸುತ್ತಿದ್ದಾರೆ. ಸಾರಿಗೆ ಕಾರ್ಮಿಕ ಸಂಘಗಳು ತಾವು ಕೂಡ ಮುಷ್ಕರದಲ್ಲಿ ಸೇರಿಕೊಳ್ಳವುದಾಗಿ ಘೋಷಿಸಿದ್ದಾರೆ. ಇಂಧನದ ಮೇಲಿನ ಸಬ್ಸಿಡಿಗಳನ್ನು ತೆಗೆದು ಹಾಕಿದಾಗ ಸಾರಿಗೆ ಕಾರ್ಮಿಕ ಸಂಘಗಳು ನಡೆಸಿದ ಮುಷ್ಕರಗಳು ಇಡೀ ಈಕ್ವೆಡಾರ್ ದೇಶವನ್ನು ತಲ್ಲಣಗೊಳಿಸಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಹಾಗಾಗಿ, ಇವರ ಪ್ರವೇಶದಿಂದಾಗಿ ಮುಷ್ಕರ ಮತ್ತಷ್ಟು ಪರಿಣಾಮಕಾರಿಯಾಗ ಬಲ್ಲದು ಎಂದು ಅಂದಾಜಿಸಲಾಗಿದೆ.

ಅಮೆರಿಕಾದ ಆಳರಸರ ಬೆಂಬಲ ಪಡೆದಿರುವ ಮೊರೆನೊ ಆಡಳಿತವು ಕಳೆದ ಮೂರು ವರ್ಷಗಳಿಂದ ಶ್ರೀಮಂತರಿಗೆ 4.295 ಬಿಲಿಯನ್ ಮೌಲ್ಯದ ಭಾರೀ ತೆರಿಗೆ ಕಡಿತವನ್ನು ಕೊಟ್ಟು, ಇನ್ನೊಂದೆಡೆಯಲ್ಲಿ ದುಡಿವ ಜನರ ಮೇಲೆ ಹೆಚ್ಚಿನ ತೆರಿಗೆ ಹೇರುವ ಮೂಲಕ ಇದನ್ನು ಸರಿದೂಗಿಸುವ ಪ್ರಯತ್ನ ಮಾಡುತ್ತಿದೆ. ಐ.ಎಂ.ಎಫ್. ನಿಂದ ಪಡೆದ ಸಾಲಕ್ಕೆ ಈಕ್ವೆಡಾರ್ ಬಲಿಯಾಗುತ್ತಿದೆ. ಇದರಿಂದ ಭಾರೀ ಸಂಕಟಗಳನ್ನು ಅನುಭವಿಸಬೇಕಾಗಿ ಬಂದಿರುವ ಜನರು ಮೊರೆನೊ ಸರಕಾರದ 'ನವ–ಉದಾರವಾದಿ ಪ್ಯಾಕೇಜ್' ವಿರುದ್ಧ ರೊಚ್ಚಿಗೆದ್ದಿದಾರೆ.



ನಾಗರಾಜ ನಂಜುಂಡಯ್ಯ

➘ 2015ರ ಚುನಾವಣೆಗಳಲ್ಲಿ ಪಿಎಸ್‌ಡಿ 89 ಸ್ಥಾನಗಳನ್ನು ಪಡೆದು ಅತ್ಯಂ ತದೊಡ್ಡಪಕ್ಷವಾಗಿ ಹೊಮ್ಮಿತ್ತು. ಪಿಎಸ್ 86 ಸ್ಥಾನಗಳನ್ನು ಪಡೆದಿತ್ತು. ಆಗ ಮೊದಲಿಗೆ ಪಿಎಸ್‌ಡಿ ನೇತೃತ್ವದ ಮಧ್ಯ–ಬಲಪಂಥೀಯ ಸರಕಾರ ರಚನೆಯಾಗಿತ್ತು. ಆದರೆ ಅದು ಬಹಳ ದಿನ ಉಳಿಯಲಿಲಲ್. ನಂತರ ಸೋಶಲಿಸ್ಟ್ ಪಕ್ಷದ ಎಡ ಪಕ್ಷಗಳ ಬೆಂಬಲದಿಂದ ಸರಕಾರ ರಚಿಸಿತ್ತು.

ಈ ಬಾರಿಯೂ 19 ಸ್ಥಾನಗಳನ್ನು ಪಡೆದಿರುವ ಬ್ಲೊಲೊ ಎಸ್ಕ್ವೆರ್ದ (ಎಡ ಮೈತ್ರಿಕೂಟ) ಮತ್ತು ಪೊರ್ಚುಗೀಸ್ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಸಿಡಿಯು ಮೈತ್ರಿಕೂಟ 12 ಸ್ಥಾನಗಳನ್ನು ಪಡೆದಿದೆ. ಇವು ಹೊರಗಿನಿಂದ ಬೆಂಬಲ ಘೋಷಿಸಿ, ಎರಡನೇ ಬಾರಿಗೆ, ಪ್ರಧಾನಿ ಆಂಟೋನಿಯೊ ಕೋಸ್ಟಾ ಆಡಳಿತ ನಡೆಸಲು ಅನುವು ಮಾಡಿಕೊಡುತ್ತದೆ ಎಂಬುದು ಖಾತ್ರಿ ಯಾಗಿದೆ.

ಆಂಟೋನಿಯೊರ ತಂದೆ ಒರ್ಲ್ಯಾಂಡೊ ಡಾ ಕೋಸ್ಟಾ, ಗೋವಾದ ಮಾಜಿ ಪೋರ್ಚುಗೀಸ್ ವಸಾಹತು ಪ್ರದೇಶದ ಬರಹಗಾರರಾಗಿದ್ದರು ಮತ್ತು ಪೋರ್ಚುಗಲ್ ನಲ್ಲಿನ ಸರ್ವಾಧಿಕಾರದ ವಿರುದ್ಧ ಹೋರಾಡಿದ ಕಮ್ಯೂನಿಸ್ಟ್ ಕಾರ್ಯಕರ್ತರಾಗಿದ್ದರು ಎನ್ನಲಾಗಿದೆ. ಆ ಸರ್ವಾಧಿಕಾರಿ ಅವರನ್ನು ಹಲವಾರು ಬಾರಿ ಜೈಲಿಗೆಸೆದಿದ್ದ, ಅವರ ಪುಸ್ತಕಗಳನ್ನು ನಿಷೇದಿಸಲಾಗಿತ್ತು.

ಆಂಟೋನಿಯೊ ಕೋಸ್ಟಾ, ಕಳೆದ ಬಾರಿ ಅಧಿಕಾರ ಹಿಡಿಯುವಾಗ, ಮಧ್ಯ–ಬಲ ಪಂಥೀಯರೊಂದಿಗೆ, ಸೇರಿಕೊಂಡು ಸರಕಾರ ರಚಿಸಬಹುದಾಗಿತ್ತು. ಆದರೆ, ಅವರು ಎಡ ಪಕ್ಷಗಳ ಬೆಂಬಲದೊಂದಿಗೆ ಸರಕಾರ ರಚಿಸಿಕೊಂಡರು. ಇದರಿಂದಾಗಿ, ಮಧ್ಯ– ಬಲಪಂಥೀಯರ ಶಕ್ತಿ ಕ್ಷೀಣಿಸ ತೊಡಗಿತು. ಆಂಟೋನಿಯೊ ಸರಕಾರದ ದೊಡ್ಡ ಸಾಧನೆಯೆಂದರೆ ಈ ಹಿಂದಿನ ಹಲವು ಜನ–ವಿರೋಧಿ "ಮಿತವ್ಯಯ'ದ ಕ್ರಮಗಳನ್ನು ಹಿಂತೆಗೆದುಕೊಂಡದ್ದು ಮತ್ತು ಅವರು ಮೂರು ಎಡಪಕ್ಷಗಳಾದ, ಕಮ್ಯೂನಿಸ್ಟ್ ಪಕ್ಷ, ಗ್ರೀನ್ಸ್ ಮತ್ತು ಮಾರ್ಕ್ಸ್‌ವಾದಿ ಎಡಪಂಥೀಯ ಪಕ್ಷಗಳೊಂದಿಗೆ ವ್ಯವಸ್ಥಿತವಾಗಿ ಆಡಳಿತ ನಡೆಸಿದ್ದ ರೀತಿ. ಈ ಬಾರಿಯೂ, ಈಗಾಗಲೇ, ಕೋಸ್ಟಾರವರು, ಕಮ್ಯೂನಿಸ್ಟ್ ಪಕ್ಷದ ವರ್ಚಸ್ವಿ ಮುಖ್ಯಸ್ಥ ಜೆರೊನಿಮೊ ಡಿ ಸೂಸಾ ಅವರೊಂದಿಗೆ ಒಪ್ಪಂದ ಮಾಡಿಕೊಂಡಿದ್ದಾರೆ. ಎಡಪಕ್ಷಗಳು ವೇತನ ಏರಿಕೆ, ಕಾರ್ಮಿಕ ಕಾನೂನುಗಳನ್ನು ಉತ್ತಮಪಡಿಸಬೇಕು ಮತ್ತು ಸಾರ್ವಜನಿಕ ವೆಚ್ಚಗಳನ್ನು ಹೆಚ್ಚಿಸಬೇಕು ಎಂಬ ಬೇಡಿಕೆಗಳ ಮೇಲೆ ಬೆಂಬಲ ನೀಡುತ್ತಿರುವುದಾಗಿ ವರದಿಯಾಗಿದೆ.

JANASHAKTHI KANNADA VARA PATRIKE October 14-20, 2019 Price: Rs. 10/- Date of Publication: 11 October 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಬ್ಯಾನರ್ ತೆರವುಗೊಳಿಸಲು ಹೋದ ಪೌರಕಾರ್ಮಿಕ ವಿದ್ಯುತ್ ಪ್ರವಹಿಸಿ ಸಾವು

10 ಲಕ್ಷ ಪರಿಹಾರ ನೀಡಲು ಜಿಲ್ಲಾಧಿಕಾರಿ ಭರವಸೆ



ಹೆಲ್ತ್ ಇನ್ಸ್‌ಪೆಕ್ಟರ್ ಮತ್ತು ಪರಿಸರ ಇಂಜಿನಿಯರ್ ಸೂಚನೆ ಮೇರೆಗೆ ಬ್ಯಾನರ್ ಮತ್ತು ಬಂಟಿಂಗ್ ತೆರವುಗೊಳಿಸಲು ಹೋದ ಪೌರ ಕಾರ್ಮಿಕ ನರಸಿಂಹಯ್ಯ (34) ವಿದ್ಯುತ್ ಶಾಕ್ ಹೊಡೆದು ಸಾವನ್ನಪ್ಪಿರುವ ಘಟನೆ ತುಮಕೂರು ನಗರದಲ್ಲಿ ಗುರುವಾರ ಬೆಳಗ್ಗೆ ನಡೆದಿದೆ.

ಹದಿನೈದನೇ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಟೌನ್‌ಹಾಲ್ ಸರ್ಕಲ್‌ನಲ್ಲಿ ಅಕ್ಟೋಬರ್ 10ರಂದು ಬೆಳಗ್ಗೆ 7 ಗಂಟೆ ಸಮಯದಲ್ಲಿ ಅಧಿಕಾರಿಗಳ ಸೂಚನೆ ಮೇರೆಗೆ ಕಬ್ಬಿಣದ ಸಲಾಕೆ ತೆಗೆದುಕೊಂಡು ಬ್ಯಾನರ್ ತೆರವುಗೊಳಿಸಲು ಹೋದಾಗ ಈ ದುರಂತ ನಡೆದಿದೆ. ಮೃತನ ಸಾವಿಗೆ ಸುರಕ್ಷತಾ ಸಲಕರಣೆಗಳನ್ನು ನೀಡದೇ ಇರುವುದೇ ಕಾರಣ ಎಂದು ಪೌರಕಾರ್ಮಿಕರ ಸಂಘ ಸಿಐಟಿಯು ಆರೋಪಿಸಿದೆ. ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹಿಸಿದೆ.

ಶಾಂತಿನಗರದ ವಾಸಿ ನರಸಿಂಹಯ್ಯ ಮೃತಪಟ್ಟಿರುವ ದುರ್ದೈವಿ. ಪೌರಕಾರ್ಮಿಕ ನರಸಿಂಹಯ್ಯ ಮೃತಪಟ್ಟ ವಿಷಯ ತಿಳಿಯುತ್ತಿದ್ದಂತೆಯೇ ಎಲ್ಲಾ ಪೌರಕಾರ್ಮಿಕರು ಕೆಲಸ ಸ್ಥಗಿತಗೊಳಿಸಿ ಪ್ರತಿಭಟನೆ ನಡೆಸಿದರು. 20 ಲಕ್ಷ ಪರಿಹಾರ, ಪತ್ನಿಗೆ ಉದ್ಯೋಗ, ಮಕ್ಕಳವಿದ್ಯಾಭ್ಯಾಸಕ್ಕೆ ನೆರವು ನೀಡದೆ ಶವ ಎತ್ತಲು ಅವಕಾಶ ನೀಡುವುದಿಲ್ಲ ಎಂದು ಪ್ರತಿಭಟನೆ ನಡೆಸಿದರು.

ಬೆಳಗ್ಗೆ 8.30ರಿಂದ 10.30ರವರೆಗೂ ಪ್ರತಿಭಟನೆ ನಡೆಸಲಾಯಿತು. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ರಾಕೇಶ್ ಸಿಂಗ್, ನಗರಪಾಲಿಕೆ ಹಂಗಾಮಿ ಆಯುಕ್ತರು, ಮೇಯರ್, ಉಪಮೇಯರ್, ಪಾಲಿಕೆ ಸದಸ್ಯರು ಮತ್ತು ಶಾಸಕ ಜ್ಯೋತಿಗಣೇಶ್ ಸ್ಥಳಕ್ಕೆ ಬಂದರು.

ಜಿಲ್ಲಾಧಿಕಾರಿ ರಾಕೇಶ್ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಯಿತು. ಮೃತರ ಕುಟುಂಬಕ್ಕೆ 20 ಲಕ್ಷ ಪರಿಹಾರ ನೀಡುವಂತೆ ಕಾರ್ಮಿಕರು ಒತ್ತಡ ಹೇರಿದ್ದರಿಂದ ತಕ್ಷಣವೇ ಪಾಲಿಕೆಯಿಂದ 5 ಲಕ್ಷ ಪರಿಹಾರ, ಮುಂದಿನ ದಿನಗಳಲ್ಲಿ ಸರ್ಕಾರದಿಂದ 5 ಲಕ್ಷ ರೂಪಾಯಿ, ಮೃತನ ಪತ್ನಿ ರತ್ನಮ್ಮ ಅವರಿಗೆ ನೇರಪಾವತಿಯಡಿ ಕೆಲಸ ಮತ್ತು ದಿಬ್ಬೂರಿನಲ್ಲಿ ಒಂದು ಮನೆ ನೀಡುವ ಭರವಸೆ ನೀಡಿದ ನಂತರ ಪ್ರತಿಭಟನೆ ಹಿಂಪಡೆಯಲಾಯಿತು.

ಸಿಐಟಿಯು ಜಿಲ್ಲಾಧ್ಯಕ್ಷ ಸೈಯದ್ ಮುಜೀಬ್ ಮಾತನಾಡಿ ಪೌರಕಾರ್ಮಿಕರಿಗೆ ಸುರಕ್ಷತಾ ಸಲಕರಣೆಗಳನ್ನು ನೀಡುವಂತೆ ಎರಡು ಬಾರಿ ಮನವಿ ಪತ್ರ ನೀಡಿದ್ದರೂ ಪಾಲಿಕೆ ಕ್ರಮ ಕೈಗೊಂಡಿಲ್ಲ. ಗಮ್‌ಬೂಟ್ ಮತ್ತು ಕೈಗೆ ಹಾಕಿಕೊಳ್ಳುವ ಕೈಗವಸು ನೀಡಿದ್ದರೆ ಇಂತಹ ಅನಾಹುತಗಳು ಸಂಭವಿಸುತ್ತಿರಲಿಲ್ಲ. ಈ ಸಂಬಂಧ ಕೂಡಲೇ ಸಭೆ ನಡೆಸಿ ಚರ್ಚೆ ನಡೆಸಿ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಯಾವುದೇ ತರಬೇತಿ ನೀಡದೆ ಎಲ್ಲಾ ಕೆಲಸಗಳನ್ನು ಪೌರ ಕಾರ್ಮಿಕರಿಂದಲೇ ಮಾಡಿಸಲಾಗುತ್ತಿದೆ. ಮ್ಯಾನ್‌ಹೋಲ್‌ಗೆ ಇಳಿಸುವುದು, ಚರಂಡಿ ಸ್ವಚ್ಛತೆ, ಹಂದಿ, ದನ ಹಿಡಿಯುವುದು, ವಿದ್ಯುತ್ ಕಂಬ ಹತ್ತಿಸಿ ಬಂಟಿಂಗ್ ತೆರೆವುಗೊಳಿಸುವುದು ಸೇರಿದಂತೆ ಇನ್ನಿತರ ಕೆಲಸಗಳನ್ನು ಮಾಡಿಸಲಾಗುತ್ತಿದೆ. ಹೀಗಾಗಿ ವಿಭಾಗವಾರು ವಿಂಗಡಣೆ ಮಾಡಿ ತರಬೇತಿ ನೀಡಿ ಕೆಲಸದ ಜವಾಬ್ದಾರಿಯನ್ನು ಹಂಚಿಕೆ ಮಾಡಬೇಕು ಎಂದು ಒತ್ತಾಯಿಸಿದರು.

ಬ್ಯಾನರ್ ಕಟ್ಟಲು ಅನುಮತಿ ಪಡೆದಿಲ್ಲ ಮತ್ತು ಬ್ಯಾನರ್ ಕಟ್ಟಿದವರೇ ಅವುಗಳನ್ನು ತೆರವುಗೊಳಿಸಬೇಕು ಎಂಬ ನಿಯಮವಿದ್ದರೂ ಅದು ಪಾಲನೆಯಾಗಿಲ್ಲ ಎಂಬ ಮಾತುಗಳು ಕೇಳಿಬಂದಿವೆ.



ಭೀಮಾ ಜಲಾಶಯ ಯೋಜನೆ ಪೂರ್ಣಗೊಳಿಸಿ ಕೆರೆ ಕಟ್ಟೆಗಳಿಗೆ ನೀರು ತುಂಬಿಸಲು ಒತ್ತಾಯಿಸಿ – ಪ್ರಾಂತ ರೈತ ಸಂಘದಿಂದ ಪ್ರತಿಭಟನೆ

ಭೀಮಾ ಜಲಾಶಯ ಯೋಜನೆ ಪುರ್ಣಗೋಳಿಸಿ ಹಲಗೂರು ಹೋಬಳಿಯ ಕೆರೆ ಕಟ್ಟೆಗಳಿಗೆ ನೀರು ತುಂಬಿಸಲು ಒತ್ತಾಯಿಸಿ ಹಲಗೂರಿನ ನಾಡ ಕಛೇರಿ ಮುಂದೆ ಕರ್ನಾಟಕ ಪ್ರಾಂತ ರೈತ ಸಂಘ. ಹಾಗೂ ಹಲಗೂರು ಹೋಬಳಿ ಏತ ನೀರಾವರಿ ಹೋರಾಟ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯನ್ನ ಉದ್ದೇಶಿಸಿ ಪ್ರಾಂತ ರೈತ ಸಂಘದ ಅದ್ಯಕ್ಷರಾದ ಎನ್.ಎಲ್. ಭರತ್‌ರಾಜ್ ಮಾತನಾಡುತ್ತ. ಭೀಮಾ ಜಲಾಶಯದ ಏತ ನೀರಾವರಿ ಕಾಮಗಾರಿ ಯೋಜನೆಯು 2013 ರಲ್ಲಿ ಕಾರ್ಯಾರಂಭವಾದರೂ ಅಧಿಕಾರಿಗಳು ಮತ್ತು ಶಾಸಕರಗಳ ಬೇಜವಾಬ್ದಾರಿತನದಿಂದ ವಿಳಂಬವಾಗಿರುವುದು ಕಂಡು ಬಂದಿದೆ. ಈ ಯೋಜನೆಯನ್ನ ಚುನಾವಣೆ ಸಂದರ್ಭದಲ್ಲಿ ಉಭಯ ಪಕ್ಷಗಳು ರಾಜಕೀಯ ಲಾಭಕ್ಕಾಗಿ ಬಳಸಿಕೊಂಡು ರೈತರನ್ನು ವಂಚಿಸಿದ್ದಾರೆ. ಒಂದೆರಡು ರೈತರು ಕಾಮಗಾರಿಗೆ ಅಡ್ಡಿ ಪಡಿಸಿದರೆಂಬ ನೆಪವನ್ನ ಮುಂದಿಟ್ಟುಕೊಂಡು ರಾಜಕೀಯ ಮೇಲಾಟಗಳು ನಡೆದಿವೆ. ರೈತರ ಭೂಮಿಯನ್ನ ಕಾನೂನಾತ್ಮಕವಾಗಿ ಸ್ವಾಧೀನಪಡಿಸಿಕೊಂಡು ಭೂಮಿ ಕಳೆದುಕೊಂಡ ರೈತರಿಗೆ ಪ್ರಸ್ತುತ ಮಾರುಕಟ್ಟೆ ದರವನ್ನು ನಿಗದಿಗೊಳಿಸಿ ನ್ಯಾಯಯುತ ಪರಿಹಾರ ನೀಡಲು ಕ್ರಮ ವಹಿಸಬೇಕಿತ್ತು ಹಾಗೂ ಪರಿಹಾರ ಮತ್ತು ಪರ್ಯಾಯಕ್ಕೆ ಬೇರೆ ದಾರಿ ಗಳಿದ್ದಾಗಲೂ ಅಧಿಕಾರಿಗಳು ಶಾಸಕರು ಗುತ್ತಿಗೆದಾರರು ನಿರ್ಲಕ್ಷಿಸಿದ್ದಾರೆ. ಯೋಜನೆಯ ಉದ್ದೇಶಕ್ಕಾಗಿ ರೈತರ ಭೂಮಿ ಸ್ವಾಧೀನಪಡಿಸಿಕೊಂಡು ರೈತರಿಗೆ ನೋಟಿಸ್ ನೀಡಿ ಹಲವು ವರ್ಷಗಳೇ ಕಳೆದರು ಹಣವು ಇಲ್ಲ ನೀರು ಇಲ್ಲ ಭೂಮಿಯು ಇಲ್ಲಾದಾಗಿದೆ. ಯೋಜನೆಯಲ್ಲಿ ಹೊನಗಳ್ಳಿ ಕೆರೆ 583 ಹೆಕ್ಟೇರ್ ಅಚ್ಚುಕಟ್ಟು ನಂದಿಪುರ ಕೆರೆ 48.33. ಹೇಕ್ಟೇರ್ ಅಚ್ಚುಕಟ್ಟು ಹೊಂದಿರುತ್ತದೆ ಎಂದು ನಮೂದಾಗಿರುತ್ತದೆ.

ಇದರ ಜೊತೆಗೆ 24 ಕೆರೆ ಕಟ್ಟೆಗಳನ್ನ ತುಂಬಿಸಿ. ಅಂತರ್ ಜಲ ಹೆಚ್ಚಿಸುವ ಉದ್ದೇಶಕ್ಕಾಗಿ ಶಿಂಷಾ ನದಿಯಿಂದಲು 11.47 ಕ್ಯೂಸೆಕ್ಸ್ ನೀರನ್ನು ತುಂಬಿಸಲು ಯೋಜಿಸಲಾಗಿದೆ. ಈ ಯೋಜನೆಯಲ್ಲಿ 225 ಹೆಚ್.ಪಿ. ಯ ಮೂರು ಪಂಪ್ ಗಳನ್ನ ಅಳವಡಿಸಲಾಗಿದೆ. ಏರು ಕೊಳವೆ ಮೇಲ್ಮಟ್ಟದ ತೊಟ್ಟಿಯಿಂದ ಮತ್ತು ತೆರೆದ ಕಾಲುಗಳಿಂದ 11 ಕಿ.ಮಿ. ದೂರದ ವ್ಯಾಪ್ತಿಯ ಜಮೀನುಗಳಿಗೆ ಮುಂಗಾರು ಋತುವಿನಲ್ಲಿ 123 ದಿನಗಳ ಕಾಲ ನೀರನ್ನ ಅರಿಸುವ ಉದ್ದೇಶಕ್ಕಾಗಿ. ಹತ್ತು ಕೋಟಿ ಹದಿನೈದು ಲಕ್ಷ ಹಣ ನೀಡಿದೆ. ಆದರೆ ಶಿಂಷಾ ನದಿ ಕಾವೇರಿ ನದಿ ತುಂಬಿ ಆಪಾಯದ ಮಟ್ಟ ಮೀರಿ ತಮಿಳುನಾಡಿನ ಮೂಲಕ ಸಮುದ್ರಕ್ಕೆ 20 ಟಿಎಂಸಿ ನೀರು ಹೋಗಿದೆ. ಶಿಂಷಾ ನದಿಯಿಂದ ಕನಕಪುರ ರಾಮನಗರ ತಾಲೊಕಿನ 27 ಕೆರೆ ಕಟ್ಟೆಗಳಿಗೆ ಹಾಗೂ ಕಾವೇರಿ ನದಿಯಿಂದ ಬೆಂಗಳೂರು ಚನ್ನಪಟ್ಟಣ ರಾಮನಗರ ಮಾಗಡಿ ತಾಲೂಕು ಗಳಿಗೆ ಕುಡಿಯುವ ನೀರು ಹೋಗುತ್ತಿದೆ. ಅದರೆ ನಮ್ಮ ಪಕ್ಕದಲ್ಲಿ ಹರಿಯುವ ನದಿ ಕಾಲುವೆಗಳಿಂದ ಕುಡಿಯುವ ನೀರಾಗಲಿ. ಹಲಗೂರು ಹೋಬಳಿಯ ಹೊನಗಳ್ಳಿ ಕೆರೆ. ನಿಟ್ಟೂರು ಹಲಗೂರು ಬ್ಯಾಡರಹಳ್ಳಿ ಮುಂತಾದ ಕೆರೆ ಕಟ್ಟೆಗಳು ನೀರಿಲ್ಲದೆ ಬಣಗುಡುತ್ತಿವೆ. ಆದ್ದರಿಂದ ಹಲಗೂರು ಹೋಬಳಿಯ ಭೀಮಾ ಜಲಾಶಯ ಗಾಣಾಳು. ನಂಜಾಪುರ. ನಿಟ್ಟೂರು ಏತ ನೀರಾವರಿಗಳನ್ನ ಶೀಘ್ರವಾಗಿ. ಸಮರ್ಪಕ ಜಾರಿಗೊಳಿಸ ಬೇಕೆಂದು ಒತ್ತಾಯಿಸಿದರು.



ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅದ್ಯಕ್ಷರಾದ ದೇವಿ ಮಾತನಾಡುತ್ತ ಆಳುವ ಸರ್ಕಾರಗಳು ರೈತರನ್ನ ಚುನಾವಣೆ ಸಂದರ್ಭದಲ್ಲಿ ಮಾತ್ರ ಬಳೆಸಿಕೊಂಡು ಬಳೆಸಿ ಬಿಸಾಕುತ್ತಿದ್ದಾರೆ. ನೆರೆ ಪರಿಹಾರ ಸಿಗದೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆಂದು ತಾಲೂಕು ಕಾರ್ಯದರ್ಶಿ ಎನ್. ಲಿಂಗರಾಜಮೂರ್ತಿ ಮಾತನಾಡಿದರು.

ಹಲಗೂರಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಿಂದ ಮೆರವಣಿಗೆ ಹೊರಟು ಹಲಗೂರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಸಣ್ಣ ನೀರಾವರಿ ಇಲಾಖೆಯ ಸಹಾಯಕ ಇಂಜಿನಿಯರ್ ದೊಡ್ಡವೀರಯ್ಯನವರು ಇಪ್ಪತ್ತು ದಿನಗಳಲ್ಲಿ ಕಾಮಗಾರಿ ಪೂರ್ಣಗೋಳಿಸಲಾಗುವುದೆಂದು ಭರವಸೆ ನೀಡಿದರು. ಉಪ ತಹಸೀಲ್ದಾರ್ ಉಮಾ ಮಾತನಾಡಿ ಈ ಯೋಜನೆಗೆ ಬೇಕಾದ ಸಹಕಾರವನ್ನ ತಕ್ಷಣದಿಂದಲೆ ಮಾಡುತ್ತೆವೆ ಎಂದರು.

ಪ್ರಾಂತ ರೈತ ಸಂಘದ ತಾಲೂಕು ಮುಖಂಡರಾದ ಮಹಾದೇವು, ನಾಗೇಶ್, ಗೋಪಾಲ್, ಮಹೇಶ್, ಕುಮಾರ್, ಎ.ಎಲ್ ಶಿವಕುಮಾರ್, ಬಸವೆಗೌಡ, ಕಬ್ಬಾಳೇಗೌಡ, ಜಯಶಂಕರ್, ಬಸವರಾಜು, ಮರಿಹುಚ್ಚಯ್ಯ, ಪ್ರದೀಪ್, ಬಸವಣ್ಣ, ಜನವಾದಿ ಮಹಿಳಾ ಸಂಘಟನೆಯ ತಾಲೂಕು ಕಾರ್ಯದರ್ಶಿ ಮಂಜುಳ, ಸುನಂದಮ್ಮ ಭಾಗವಹಿಸಿದ್ದರು.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**